ಕರ್ನಾಟಕ ಸರಕಾರ



ಕಾವ್ಯ

ಇಂದ್ರಚಾಪ

ವಿ.ಪರಮೇಶ್ವರ ಭಟ್ಟ

ಪ್ರಥಮ ವಿಶ್ವ ಕನ್ನಡ ಸಮ್ಮೇಳನ ಸಾಹಿತ್ಯ ಮಾಲೆ 14



ಇಂದ್ರಚಾಪ

(ಸ್ವವಿಚಾರಲಹರಿ ಮತ್ತು ಸುಭಾಷಿತಸಾರ)

ಎಸ್. ವಿ. ಪರಮೇಶ್ವರ ಭಟ್ಟ



ವಿಶ್ವ ಕನ್ನಡ ಸಮ್ಮೇಳನ
14–3 ಎ, ನೃಪತುಂಗ ರಸ್ತೆ
ಬೆಂಗಳೂರು-560 002

Vishwa Kannada Sahitya Male

INDRACHAPA A Selected poems writen by S. V. Parameshwara Bhatta

Published by K. Jayacharya, K.A.S., Additional Director, Directorate of Kannada & Culture (Vishwa Kannada Sammelana), 14/3 A, Nrupathunga Road, Bangalore-560 002.

Second Edition : 1983. 5,000 Copies

ಬೆಲೆ : ಎರಡೂವರೆ ರೂಪಾಯಿಗಳು (2-50)

ಅಶ್ವಥ್ ಪ್ರಿಂಟರ್ಸ್
೪೪೩, ೪೪ನೇ ಅಡ್ಡರಸ್ತೆ, ಒಂದನೇ ಮುಖ್ಯರಸ್ತೆ
೪ನೇ ಹಂತ, ಜಯನಗರ, ಬೆಂಗಳೂರು-೫೬೦ ೦೪೧

ಆರ್. ಗುಂಡೂರಾವ್
ಮುಖ್ಯಮಂತ್ರಿ



ವಿಧಾನಸೌಧ
ಬೆಂಗಳೂರು

ದಿನಾಂಕ: ೧೮-೯-೮೨

ಸಂಕಲ್ಪ....ಸಿದ್ಧಿ

ಸುಮಾರು ಎರಡು ಸಾವಿರ ವರ್ಷಗಳಿಗೂ ಹೆಚ್ಚು ದೀರ್ಘವಾದ ಐತಿಹಾಸಿಕ ಪರಂಪರೆ ಕನ್ನಡ ನಾಡಿನದು. ಈ ಅವಧಿಯಲ್ಲಿ ಕನ್ನಡ ಭಾಷೆ, ಸಾಹಿತ್ಯ, ಕಲೆ, ಸಂಸ್ಕೃತಿಗಳು ಸಮೃದ್ಧವಾಗಿ, ಶ್ರೀಮಂತವಾಗಿ ಬೆಳೆದು, ಈ ನಾಡಿನ ಇತಿಹಾಸವನ್ನು ಭವ್ಯವಾಗಿಸಿವೆ.

ಒಂದು ನಾಡಿನ ಅಂತಃಸತ್ವ ಅಡಕವಾಗಿರುವುದೇ ಅದರ ಸಾಂಸ್ಕೃತಿಕ ನೆಲೆಗಟ್ಟಿನಲ್ಲಿ. ಈ ನೆಲೆಗಟ್ಟು ಭದ್ರವಾಗಿರಬೇಕಾದರೆ ಸಾಂಸ್ಕೃತಿಕ ಪರಂಪರೆ ಉತ್ಕರ್ಷಕ್ಕೆ ಏರಲು ಔನ್ನತ್ಯ ಸಾಧಿಸಲು ನಿರಂತರವಾಗಿ ಪ್ರಯತ್ನಗಳು ನಡೆಯಬೇಕು.

ಭಾರತೀಯ ಸಂಸ್ಕೃತಿಯಲ್ಲಿ ಹಾಸುಹೊಕ್ಕಾಗಿ ಬೆಸೆದುಕೊಂಡಿದ್ದರೂ ಕನ್ನಡ ತನ್ನದೇ ಆದ ವಿಶಿಷ್ಟ ಸಂಸ್ಕಾರಗಳನ್ನು, ಸಂಸ್ಕೃತಿಯನ್ನು ಹೊಂದಿದೆ.

ಕನ್ನಡ ನಾಡಿನ ಭವ್ಯ ಪರಂಪರೆಯನ್ನು ಜಾಗತಿಕ ಹಿನ್ನೆಲೆಯಲ್ಲಿ ಚಿತ್ರಿಸಿ, ವಿಶ್ವಕ್ಕೆ ಕನ್ನಡ ಸಂಸ್ಕೃತಿಯ ಹಿರಿಮೆಯನ್ನು ಸಾರುವ ಸದುದ್ದೇಶದಿಂದ ಪ್ರಥಮ ವಿಶ್ವ ಕನ್ನಡ ಸಮ್ಮೇಳನವನ್ನು ಕರ್ನಾಟಕದ ಪ್ರಮುಖ ಸಾಂಸ್ಕೃತಿಕ ಕೇಂದ್ರವಾದ ಮೈಸೂರಿನಲ್ಲಿ ಏರ್ಪಡಿಸಿದ್ದೇವೆ. ಇದೊಂದು ಚರಿತ್ರಾರ್ಹವಾದ ಸಂದರ್ಭವೆಂದು ನನ್ನ ನಂಬಿಕೆ. ಈ ಚರಿತ್ರಾರ್ಹ ಸಮ್ಮೇಳನ ಸಾರ್ಥಕವಾಗಲು ಮತ್ತು ಬಹುಕಾಲ ಇದರ

ಸವಿ ನೆನಪು ಉಳಿಯಲು ಹಲವು ಯೋಜನೆಗಳನ್ನು ರೂಪಿಸಿದ್ದೇವೆ. ಕನ್ನಡದ ಖ್ಯಾತ ಲೇಖಕರ ಮಹತ್ವದ ಕೃತಿಗಳನ್ನು ಪ್ರಕಟಿಸಿ, ಸುಲಭ ಬೆಲೆಗೆ ಒದಗಿಸುವುದು ಈ ಯೋಜನೆಗಳಲ್ಲಿ ಒಂದು. ಇದರಂತೆ ಒಂದುನೂರಾ ಎರಡು ಕೃತಿಗಳನ್ನು, ಹದಿನೇಳು ಸಂಕಲನಗಳನ್ನು ಆಯ್ಕೆ ಮಾಡಿ ಪ್ರಕಟಿಸುತ್ತಿದ್ದೇವೆ. ಈ ಸಾಹಿತ್ಯ ಮಾಲಿಕೆಯಲ್ಲಿ ಕವನ, ಕಾದಂಬರಿ, ನಾಟಕ, ವಿಚಾರ ಸಾಹಿತ್ಯದ ಕೃತಿಗಳಲ್ಲದೆ ಕನ್ನಡ ಸಾಹಿತ್ಯದ ಸತ್ವವನ್ನು ವೈವಿಧ್ಯವನ್ನು ಪ್ರತಿಫಲಿಸುವ ವಿವಿಧ ಬಗೆಯ ಸಂಕಲನಗಳು ಇವೆ. ಅನ್ಯ ಭಾಷಿಕರಿಗೆ ಕನ್ನಡ ಸಾಹಿತ್ಯದ ಕಂಪು ಬೀರುವಂತೆ ಕೆಲವು ಆಯ್ದ ಕೃತಿಗಳ ಇಂಗ್ಲಿಷ್ ಭಾಷಾಂತರವನ್ನು ಕೂಡ ಪ್ರಕಟಿಸುತ್ತಿದ್ದೇವೆ. ಸಾಹಿತ್ಯ ಮಾಲೆಯ ಈ ಕೃತಿರತ್ನಗಳನ್ನು ಸಹೃದಯ ವಾಚಕರು ಓದಿ ಆಸ್ವಾದಿಸಿದರೆ ನಮ್ಮ ಶ್ರಮ ಸಾರ್ಥಕ; ಸಮ್ಮೇಳನ ಅರ್ಥಪೂರ್ಣವಾಗುವುದೆಂದು ನನ್ನ ಅಭಿಲಾಷೆ.

ಈ ಕೃತಿಗಳನ್ನು ಆಯ್ಕೆ ಮಾಡುವಲ್ಲಿ ಸಾಹಿತ್ಯ ಸಮಿತಿಯ ಪರಿಣತ ಸದಸ್ಯರು ಸಾಕಷ್ಟು ಶ್ರಮಿಸಿದ್ದಾರೆ. ಸುದೈವದಿಂದ ಕನ್ನಡದಲ್ಲಿ ಪ್ರತಿಭಾವಂತ ಲೇಖಕರ ಅಮೂಲ್ಯ ಕೃತಿಗಳಿಗೆ ಕೊರತೆ ಇಲ್ಲ. ಈ ಹಿನ್ನೆಲೆಯಲ್ಲಿ ನಿಶ್ಚಿತ ಸಂಖ್ಯೆಯಲ್ಲಿ ಸಾಹಿತ್ಯ ಕೃತಿಗಳನ್ನು ಆಯ್ಕೆ ಮಾಡುವುದು ಸುಲಭದ ಕೆಲಸವಲ್ಲ. ಆದರೂ ಬಹುಜನರಿಗೆ ಒಪ್ಪಿಗೆಯಾಗುವಂತೆ ಸಾಹಿತ್ಯ ಸಮಿತಿ ತನ್ನ ಕರ್ತವ್ಯ ನಿರ್ವಹಿಸಿದೆಯೆಂದು ಭಾವಿಸುತ್ತೇನೆ. ಈ ಸಮಿತಿಗೆ ಕೃತಜ್ಞತೆಗಳನ್ನು ಅರ್ಪಿಸುವುದು ನನ್ನ ಕರ್ತವ್ಯ. ಈ ಕೃತಿಗಳನ್ನು ಪ್ರಕಟಿಸಲು ಅನುಮತಿ ನೀಡಿ, ಲೇಖಕರು ಉಪಕರಿಸಿದ್ದಾರೆ. ಅವರ ಉದಾರ ಉಪಕಾರವನ್ನು ಈ ಸಂದರ್ಭದಲ್ಲಿ ಕೃತಜ್ಞತಾಪೂರ್ವಕವಾಗಿ ನೆನೆಯುತ್ತೇನೆ.

ಈ ಗ್ರಂಥಮಾಲೆ ಕನ್ನಡಿಗರ ಮನಸ್ಸನ್ನು ತಟ್ಟಿ, ಹೃದಯಸ್ಪಂದನ ಮಾಡಿದರೆ ನಮ್ಮ ಸಂಕಲ್ಪಕ್ಕೆ ಸಿದ್ಧಿ ದೊರಕಿದಂತೆ. ಈ ಪ್ರಯತ್ನ 'ನ ಭೂತೋ' ಎಂದು ಹೆಮ್ಮೆಯಿಂದ ಹೇಳಬಲ್ಲೆ. ತಾಯಿ ಭುವನೇಶ್ವರಿ ಈ ಪ್ರಯತ್ನವನ್ನು ಹರಸಿ, ಮಂಗಳವುಂಟುಮಾಡಲೆಂದು ವಿನೀತ ಪ್ರಾರ್ಥನೆ ಸಲ್ಲಿಸುತ್ತೇನೆ.

ಎಸ್. ಬಂಗಾರಪ್ಪ

ಮುಖ್ಯಮಂತ್ರಿ

ಇಂದ್ರಚಾಪ

ಮೊದಲನೆಯ ನೂರು

೧

ಶ್ರೀಯೆ ವಾಗ್ದೇವಿಯೆ ಸೌಭಾಗ್ಯದಾಯಿಯೆ
ಶ್ರೀ ಶೃಂಗಗಿರಿಯ ಶಾರದೆಯ
ಕೊಳು ನನ್ನ ನತಿಯನಕ್ಕರೆಯ ನಲ್ದಾಯಿಯೆ
ಕೃತಿಗೆ ಉನ್ನತಿಯನು ಈಯ

೨

ಸಿಬ್ಬಲುಗುಡ್ಡೆಯ ಸಿದ್ಧಿ ವಿನಾಯಕ
ಕಬ್ಬಿಗನನು ಕನಿಕರಿಸು
ತಬ್ಬುವೆನಡಿಯನು ವಿಘ್ನನಿವಾರಕ
ಕಬ್ಬವನಿದನಾಗಗೊಳಿಸು.

೩

ಪೂಜ್ಯ ಸದಾಶಿವರಾಯರು ಜನಕರು
ಜನನಿ ಲಕ್ಷ್ಮಮ್ಮನವರು
ಈ ಕಾವ್ಯದಾದಿಯೊಳಾನು ವಂದಿಸುವೆನು
ಭಕ್ತಿಯಿನವರಡಿಗಳನು.

೪

ಪ್ರೌಢಶಾಲೆಯೊಳೆನ್ನ ಕನ್ನಡ ಗುರುಗಳು
ಶ್ರೀ ನರಸಿಂಹ ಶಾಸ್ತ್ರಿಗಳು
ಮೊದಲು ಪುಟ್ಟಿಸಿದರು ಕಾವ್ಯಾಭಿರುಚಿಯನು
ಮಣಿಯುವೆನವರಡಿಗಳನು.

೫

ಸದ್ಗುರು ತೇಜಸ್ವಿ ಪರಮ ಸಂಪನ್ನರು
ಘನರು ವೆಂಕಣ್ಣಯ್ಯನವರು
ಅವರು ದಾರಿಯ ದೀಪವಾದರು ಬಾಳಿಗೆ
ಬಾಗುವೆನವರಡಿಗಳಿಗೆ.

೬

ಬರೆದು ಮುನ್ನುಡಿಯನು ಮೊದಲ ಹೊತ್ತಗೆಯನು
ಹರಸಿದರಲ್ತೆ ಕುವೆಂಪು
ಆ ರಸಋಷಿಗೆರಗುವೆನವರೆನ್ನನು
ಕರುಣಿಸುತಿಹುದೆನ್ನ ಸೈಪು.

೭

ಕನ್ನಡ ಕವಿಗಳಲಾರನು ನೆನೆವೆನು
ನೆನೆವೆನು ಮುದ್ದಣ ಕವಿಯ
ನೋವನು ನಗೆಯೊಳು ಮುಚ್ಚುತಲಾತನು
ಮೆರೆದನು ಕಾವ್ಯದ ಸವಿಯ.

೮

ರತ್ನನ ಪದಗಳು ನಾಗನ ಪದಗಳು
ಕಾವ್ಯದ ಹೊಸಮಾದರಿಗಳು
ರತ್ನಾಭಿಧೇಯನನೀ ನವಕವಿಯನು
ಮುಡಿಬಾಗಿ ಗೌರವಿಸುವೆನು.

೯

ಸಕ್ಕರೆಯುಂಗಿಯು ಕಹಿಯ ಗುಳಿಗೆಗಳು
ಚಕಮಕಿಗಳು ಚುಟುಕಗಳು
ಇವುಗಳ ಕರ್ತೃಗಳೆಮಗಭಿವಂದ್ಯರು
ದಿನಕರ ದೇಸಾಯಿಯವರು;

೧೦

ನನ್ನ ಪೂರ್ವಿಕರನು ಕುರಿತೀಗ ಹೇಳುವೆ
ತಿಳಿದಷ್ಟು ಸಂಗತಿಗಳನು
ಪೂರ್ವೇತಿಹಾಸವನತಿಬೇಗ ಮುಗಿಸುವೆ–
ನಲ್ಲಿ ಯಿನ್ನಾಲಿಪುದಿವನು.

೧೧

ಶ್ರೀ ಶಂಕರಾಚಾರ್ಯರಡಿಯಿಟ್ಟ ಕತದೊಳು
ಶೃಂಗೇರಿ ಪರಮಪಾವನವು
ಮೆರೆದಿಹುದಲ್ಲಿ ತುಂಗೆಯ ದಡದೆಡೆಯೊಳು
ಚಾರು ವಿದ್ಯಾರಣ್ಯಪುರವು.

೧೨

ಆಪೂರೊಳಲ್ಲಿ ಶಿವಾಲಯವಿಹುದೊಂದು
ಸಾಂಬ ಶಿವಾಲಯವಾಗಿ
ನಮ್ಮ ಪೂರ್ವಿಕರಂದು ನೆಲೆನಿಂದರೈತಂದು
ಆ ದೇವರರ್ಚಕರಾಗಿ.

೧೩

ಅವರೊಳು ಆದ್ಯರು ಲಕ್ಷ್ಮಣಭಟ್ಟರು
ಸದ್ಗುಣ ಶೀಲರು ನುತರು
ಅವರ ಮಕ್ಕಳು ಪರಮೇಶ್ವರ ಭಟ್ಟರು
ದೈವಭಕ್ತರು ಗಣ್ಯರವರು.

೧೪

ಆ ಪರಮೇಶ್ವರಭಟ್ಟರಿಗಾದರು
ಗಂಡುಮಕ್ಕಳು ಮೂರು ಜನರು
ಅವರೊಳು ಹಿರಿಯರು ಲಕ್ಷ್ಮಣಭಟ್ಟರು
ಧೀರರುದಾರರುನ್ನತರು.

೧೫

ಎಂಟು ಮಕ್ಕಳ ತಂದೆ ಲಕ್ಷ್ಮಣಭಟ್ಟರು
ಹೆಣ್ಣಿಬ್ಬರರುವರು ಗಂಡು
ತಂದೆಯ ಹೆಸರನು ಮುಂದಕೆ ತಂದರು
ಮಕ್ಕಳು ಬೆಳಕನು ಕಂಡು.

೧೬

ಕೃಷ್ಣಭಟ್ಟರು ಮಹಾಬಲಭಟ್ಟರು
ಮೊದಲಿಗರಿವರೊಗೆದವರು
ರಾಮಭಟ್ಟರು ಮತ್ತೆ ಹಿರಿಯಣ್ಣಭಟ್ಟರು
ಆ ಮುಂದೆ ಜನಿಸಿದರಿವರು.

೧೭

ಬಳಿಕ ಸದಾಶಿವರಾಯಾಭಿಧಾನರು
ಜನಿಸಿದರೈದನೆಯವರು
ಮುಂದೆ ಸುಬ್ರಹ್ಮಣ್ಯ ಶಾಸ್ತ್ರಿಗಳೊಗೆದರು
ಕಿರಿಯವರರುವರೊಳಿವರು.

೧೮

ನಡುವಣಂತರದೊಳು ಅಣುಗಿಯರೊಗೆದರು
ಸುಬ್ಬಮ್ಮ ದುಗ್ಗಮ್ಮನವರು
ಈ ಎಂಟು ಮಕ್ಕಳ ತಾಯಾಗಿ ನಲಿದರು
ವರಸತಿ ಗೌರಮ್ಮನವರು.

೧೯

ಮುಂದೆ ಸದಾಶಿವರಾಯರು ಕಲಿತರು
ಕನ್ನಡ ಇಂಗ್ಲಿಷುಗಳನು
ಸರಕಾರಿ ಶಾಲೆಯ ಶಿಕ್ಷಕರಾದರು
ಹಿಡಿದರು ಹೊಸಕೆಲಸವನು.

೨೦

ತೀರ್ಥಹಳ್ಳಿಯಿನತ್ತ ಶಿವಮೊಗ್ಗೆಯೂರಿಗೆ
ಹೋಗುವ ರಾಜಮಾರ್ಗದೊಳು
ಮೆರೆವುದು ಮಾಳೂರು ಮುಡಿಗೆ ಮಲ್ಲಿಗೆ ಹಾಗೆ
ತೀರ್ಥಹಳ್ಳಿಗೆ ಹತ್ತಿರದೊಳು.

೨೧

ಸಣ್ಣದಾದರು ಊರು ಗಣ್ಯರನೇಕರು
ನೆಲಸಿದ ಬೀಡು ಮಾಳೂರು
ಸೀಕೆಯ ಗೌಡರು ಭಾಂಡ್ಯದ ಗೌಡರು
ಊರಿಗೆ ಹೆಸರಾದ ಜನರು.

೨೨

ಹಿರಿಯ ತೋಟದ ಮನೆಯ ತಿಮ್ಮಯ್ಯಗೌಡರು
ಮತ್ತೆ ಆ ಮಂಜಪ್ಪನವರು
ಅಡಿಕೆಯ ಮಂಡಿಯ ವೆಂಕಟಪ್ಪಶೆಟ್ಟರು
ಎಲ್ಲರು ಮಾಳೂರಿನವರು.

೨೩.

ನಾಲ್ವಡಿ ಕೃಷ್ಣರ ಮದುವೆಯ ಕರೆಯೋಲೆ
ಸೀಕೆಯ ಗೌಡರ ಮನೆಗೆ
ಬಂದಿತ್ತು ಆ ಕಾಲಕೆಂದರಿನ್ನಾಮೇಲೆ
ಕೊರೆಯಾವುದಾಪೂರ ಸಿರಿಗೆ.

೨೪

ಆ ಊರಿಗಾಕಾಲಕಂಚೆಯ ಮನೆ ಬಂತು
ಓದುವ ಶಾಲೆಯ ಜೊತೆಗೆ
ದಿನಸಿಯ ಜವಳಿಯ ಅಂಗಡಿ ತೆರೆಯಿತು
ಹೋಟಲು ಸಹ ಬಂತು ಕೊನೆಗೆ.

೨೫

ಪೂಜ್ಯ ಸದಾಶಿವರಾಯರೀಪ್ರೂರಿಗೆ
ಬಂದರು ಕಲಶವಿಟ್ಟಂತೆ
ನಿಂದರು ಈ ಪೂರೊಳ್ಳೈದು ರೂಪಾಯಿಗೆ
ಶಿಕ್ಷಕರಯೋಧನೆಂಬಂತೆ.

೨೬

ರಾಯರು ಬೇಗ ಜನಾನುರಾಗಿಗಳಾಗಿ
ದಕ್ಷ ಶಿಕ್ಷಕರೆನಿಸಿದರು
ಅಂಚೆಯ ಕೆಲಸವನೂ ಮುಂದೆ ಲೇಸಾಗಿ
ಜೊತೆಯೊಳು ನಿರ್ವಹಿಸಿದರು.

೨೭

ಲಕ್ಷ್ಮಮ್ಮನೆನುವವರನು ಮುಂದೆ ರಾಯರು
ಮದುವೆಯಾದರು ವಂಶ ನಿಲಲು
ಪುಟ್ಟಿದರಿವರಿಗೆ ಪುತ್ರಿಯರಿಬ್ಬರು
ಪೂರ್ವ ಪುಣ್ಯದ ಫಲವೆನಲು.

೨೮

ತಂದೆತಾಯಿಯ ಮೊದಲಕ್ಕರೆವಡೆದಾಕೆ
ಕೃಷ್ಣವೇಣಿಯೆ ಹಿರಿಯವಳು
ಮತ್ತಿನ ಒಲುಮೆಗೆ ಭಾಜನಳಾದಾಕೆ
ತುಂಗಭದ್ರೆಯೆ ಕಿರಿಯವಳು.

೨೯

ತಂದೆತಾಯಿಯರಿಗೆ ಮುದ್ದಿನ ಮಗನಾಗಿ
ಈ ಅಕ್ಕದಿರ ತಮ್ಮನಾಗಿ
ಜನಿಯಿಸಿದೆನು ನಾನು ಮೂರನೆಯವನಾಗಿ
ಬಳಿಯ ಬಳ್ಳಿಯ ಕುಡಿಯಾಗಿ

೩೦

ಮೊದಲ ವಿಶ್ವದ ಯುದ್ಧ ತೊಡಗಿದ ವರ್ಷವು
ಆದೆ ನನ್ನ ಜನ್ಮವತ್ಸರವು
ಅಮ್ಮನ ಬಹುಬೇಗ ಕರೆಯಿತು ದೈವವು
ನಾನಾಗ ವರ್ಷದ [illegible].

೩೧

ಪುಟ್ಟೂರು ಮಾಳೂರು ಬೆಳೆದೂರು ತೂದೂರು
ಇರುವೂರು ಈಗ ಮೈಸೂರು
ತೀರ್ಥಹಳ್ಳಿಯ ಪರಿಸರದ ನಾಲ್ಕಾರೂರು
ಬಾಲ್ಯದೊಳಾಡಿದ ಊರು.

೩೨

ತಾಯಿ ತೀರಿದ ಮಕ್ಕಳೆಂದೋವಿ ಪೊರೆದರು
ಅಂದು ನಮ್ಮನು ತಂದೆಯವರು
ಲಾಲಿಸಿ ಪಾಲಿಸಿ ಬುದ್ಧಿಗಲಿಸಿದರು
ಮಕ್ಕಳು ಮೂವರನವರು.

೩೩

ತಂದೆ ಸದಾಶಿವರಾಯರು ರಸಿಕರು
ಕಲೆಯೊಳು ಪರಮ ಪಂಡಿತರು
ಕುಶಲ ಕೈಗಾರಿಕೆಯೊಳು ಬಹು ಚತುರರು
ಮಾಸ್ತರು ವೃತ್ತಿಯೊಳವರು.

೩೪

ಸಾವಿರ ಸಾವಿರ ಶಿಷ್ಯರಿಗರಿವನು
ತೋರಿಸಿಕೊಟ್ಟರು ತಂದೆ
ಶಿಷ್ಯರ ಶಿಷ್ಯರು ನೆನೆಯುವರವರನು
ಇಂದು ಕೃತಜ್ಞತೆಯಿಂದೆ.

೩೫

ಹರಿಕಥೆ ಸಂಗೀತ ನಾಟಕ ಕೋಲಾಟ
ತಾಳಮದ್ದಲೆ ಬಯಲಾಟ
ಮೊದಲಿನಿಂದೆಮ್ಮಯ್ಯಗಿಂತಹ ಕಲೆಗಳ
ನೋಟದೊಳಾಸಕ್ತಿ ಬಹಳ.

೩೭

ಆ ಮಾತು ಆ ಕಥೆ ಆ ನಗೆ ಆ ಬಗೆ–
ಮೆಚ್ಚುವ್ಹೊಲೊರೆವ ಕೌಶಲವು
ರಂಜನೆಯಾಯಿತು ಸುತ್ತಣ ಜನರಿಗೆ
ಹಬ್ಬಿತು ತಂದೆಯ ಯಶವು.

೩೭

ಹೂ ಹಣ್ಣು ತರಕಾರಿ ತಿನಿಸು ತಿಂಡಿಗಳನು
ಬಗೆಬಗೆಯಾಟಿಕೆಗಳನು
ಮಣ್ಣೊಳು ಮರದೊಳು ತಂದೆ ನಿರ್ಮಿಸುವರು
ಕಸವನು ರಸಗೈವರವರು.

೩೮

ಅವರ ಆ ಕರಕೌಶಲಕೆ ಬೆರಗಾದರು
ಕೊಂಡಾಡಿದರು ನೋಡಿದವರು
ಪಾರಿತೋಷಕಗಳನೇಕವನಿತ್ತರು
ಮೆಚ್ಚಿದ ಸರಕಾರದವರು.

೩೯

ಕಿರೆಮನೆಯೊಳು ಅವರಣ್ಣನ ಮಕ್ಕಳು
ಅವರ ಕಲಾಕೃತಿಗಳನು
ಜೋಡಿಸಿಟ್ಟಿರುವರು ಗಾಜಿನ ಗೂಡೊಳು
ಬಂದವರಿಗೆ ತೋರಲವನು.

೪೦

ಅವರ ಆ ಪ್ರತಿಭೆಯ ಒಂದಂಶವೆನ್ನಯ
ಕೃತಿಯೊಳು ಕಂಡರೆ ಸಾಕು
ಆ ಮಹಾಮಹಿಮರ ಹರಕೆಯು ರಕ್ಷೆಯು
ಬಲವಿರಲಿನ್ನೇನು ಬೇಕು.

೪೧

ನಾಟಕಗಳನೆನಗವರು ತೋರಿಸಿದರು
ಅವುಗಳ ಕತೆಯ ಹೇಳಿದರು
ಕಲೆಯ ಪ್ರಪಂಚದೊಳಿಂತೆನಗವರಾದಿ
ಗುರುವಾಗಿ ತೆರೆದರು ಹಾದಿ.

೪೨

ಪೂಳೂರು ಕಸಗಾರು ಮಹಿಷಿಯ ಮಿತ್ರರು
ತಂದೆಯ ಜತೆಗೂಡಿ ನಿಂತು
ಯಕ್ಷಗಾನದ ಒಂದು ಮೇಳವ ತೆರೆದರು
ತಂದೆಗೆ ಹೊಸಜೀವ ಬಂತು.

೪೩

ಪಾತ್ರದ ಮಾತನು ಗೀತದ ನುಡಿಯನು
ಕಟ್ಟಿಕೊಟ್ಟರು ನಮ್ಮ ತಂದೆ
ವೇಷಧಾರಿಗಳಿಗೆ ಬಗಬಗೆ ತೊಡವನು
ಮಾಡಿಕೊಟ್ಟರು ನಮ್ಮ ತಂದೆ.

೪೪

ಪಲವಾರು ಬಯಲಾಟಗಳನಾಡಿ ಮೇಳವು
ಗಳಿಸಿತು ಜನಮನ್ನಣೆಯನು
ಮೇಳದ ದೆಸೆಯಿಂದೆ ಕಂಡಿತು ಲೋಕವು
ತಂದೆಯ ವರಕೌಶಲವನು.

೪೫

ನನಗೆ ನನ್ನೋರಗೆಯವರಿಗೆ ಮೇಳಕೆ
ತಗುವಂಥ ಕುಣಿತವ ಕಲಿಸಿ
ಉಡಿಗೆಯ ತೊಡಿಗೆಯನಣಿಮಾಡಿ ರಂಗಕೆ
ಬಿಟ್ಟರು ಬಣ್ಣವ ಬಳಿಸಿ.

೪೬

ಬಯಲಾಟದೊಳು ಬಾಲಕೃಷ್ಣನ ವೇಷವ
ಕುಣಿದೆನು ನಲಿದರು ತಂದೆ
ಅಂದವರೆನ್ನಿಂದೆ ಪಡೆದ ಸಂತೋಷವ—
ನಷ್ಟಿಷ್ಟದೆಂದೆನ್ನಬಹುದೆ.

೪೭

ರಾಯರು ಮೋಜಿಗೆಂದೊಮ್ಮೆ ಮಿತ್ರರ ಕೂಡಿ
ದೀವಳಿಗೆಯೊಳು ಮನೆಮನೆಗೆ
ಅಂಟಿಗೆಪಂಟಿಗೆಯವರಾಗಿ ಆಲೆದಾಡಿ
ಕುಣಿದರು ಬೆಳಗಿನವರೆಗೆ.

೪೮

ತಂದೆಯ ಯಶವನು ನೋಡಿ ಸಹಿಸದ ಖೋಡಿ
ಹೋದನು ಬೆಸೆದನು ಚಾಡಿ
ಒಡನೆಯು ವರ್ಗವ ಮಾಡಿದನುರಿಕಾರಿ
ಹಿತ್ತಾಳೆ ಕಿವಿಯಧಿಕಾರಿ.

೪೯

ಹೀಗೆ ಕೋಣಂದೂರಿಗಾಯಿತು ವರ್ಗವು
ತಂದೆಗೆ ಮಾಳೂರಿನಿಂದೆ
ಕಳುಹಿಸಿಕೊಟ್ಟಿತು ಮಾಳೂರು ದುಃಖವು
ಬಿಗಿದ ಗದ್ಗದ ಕಂಠದಿಂದೆ.

೫೦

ತಂದೆ ಬಂದರು ವರ್ಗವಾಗಿ ತೂದೂರಿಗೆ
ಆರೇಳು ವರ್ಷದ ಒಳಗೆ
ಮದುವೆಯಾಯಿತು ಕೃಷ್ಣವೇಣಿಗೀವೇಳೆಗೆ
ನಡೆದಳು ಗಂಡನ ಬಳಿಗೆ.

೫೧

ಆ ಶಾಮಭಟ್ಟರು ಬಹಳ ಒಳ್ಳೆಯ ಭಾವ
ಕೃಷ್ಣವೇಣಿಯೆ ಅವರ ಜೀವ.
ಅಕ್ಕನ ಮನೆಯೊಳು ನಲಿದೆವು ನಕ್ಕೆವು
ನಾವುಂಡು ತಿಂದು ತೇಗಿದೆವು.

೫೨

ನಾಲ್ಕಾರು ವರುಷದ ಗೃಹಿಣಿಯ ಬಾಳನು
ನಡೆಸಿದ ವೇಳೆಗೆ ಸಾವು
ಕಬಳಿಸಿ ಹೋಯಿತು ಆ ಅಕ್ಕನವರನು
ದುಃಖಿಗಳಾದೆವು ನಾವು.

೫೩

ಹೊಳೆ ಹಳ್ಳಗಳ ಕಂಡೆ ಗಿರಿದರಿಗಳ ಕಂಡೆ
ಕಾಡುಮೇಡುಗಳನು ಅಲೆದೆ
ಖಗಮಿಗಗಳ ಕಂಡೆ ಹೊಲಗದ್ದೆಗಳ ಕಂಡೆ
ಪ್ರಕೃತಿಯ ಚಲುವುಂಡೆ ನಲಿದೆ.

೫೪

ಕಂಗು ಬಾಳೆಯ ತೋಟ ಕಬ್ಬು ತೆಂಗಿನ ನೋಟ
ಕಣ್ಣಿಗೆ ಹಬ್ಬದ ಊಟ
ತುಂಗೆಯ ತೊರೆಯೊಳು ಗೆಳೆಯರ ನೆರೆಯೊಳು
ಚಂದವು ಜಲಕೇಳಿಯಾಟ.

೫೫

ಅಕ್ಕ ತುಂಗಮ್ಮನ ಮದುವೆಯಾಯಿತು ಮುಂದೆ
ರಾಮಪ್ಪನೆನುವವರೊಡನೆ
ಮುಂದಣ ದಿನಗಳು ಕಳೆದವು ಭರದಿಂದ
ಸುಖವು ಬಂದರೆ ಹಾಗೆ ತಾನೆ.

೫೭

ಮುಜ್ಜಿಗೆಸರದೊಳು ಗಂಡನ ಮನೆಯೊಳು
ಅಕ್ಕನಿದ್ದರು ಸುಖವಾಗಿ
ತಂದೆಯ ಜೊತೆಗಿದ್ದೆ ನಿತ್ತ ತೂದೂರೊಳು
ನಾನು ತಂದೆಯ ನೆರಳಾಗಿ.

೫೭

ಪ್ರಕೃತಿಯ ಮಡಿಲೊಳು ತಂದೆಯ ಜತೆಯೊಳು
ಬಾಲ್ಯವು ಮನಕಿನಿದೆನಿಸೆ
ಗುರುವಾಗಿ ನಿಂತರು ತಂದೆಯು ಮನೆಯೊಳು
ನಮಗೋದುಬರಹವ ಕಲಿಸೆ.

೫೮

ಪ್ರಥಮ ಮಧ್ಯಮ ತರಗತಿಯ ಪಾಠಗಳನು
ಮನೆಯೊಳೆ ಹೇಳಿದರೆನಗೆ
ಕಡೆಯ ಪರೀಕ್ಷೆಯೊಳುತ್ತೀರ್ಣನಾದೆನು
ತಂದೆಗೆ ಮುದ ಮಿಗಿಲಾಗೆ.

೫೯

ತೀರ್ಥಹಳ್ಳಿಗೆ ಮುಂದೆ ತಂದೆ ಕರೆತಂದರು
ಪ್ರೌಢಶಾಲೆಗೆ ಸೇರಿಸಿದರು
ಹೊಸ ಪಾಠವಾಯಿತು ಹೊಸ ಮಿತ್ರರಾದರು
ಗುರುಜನರೊಲಿದೋದಿಸಿದರು.

೬೦

ತಂದೆಯು ತೆರನೆ ಮಹಾಬಲಭಟ್ಟರು
ಹಿಂದೆಯೆ ಬಿಟ್ಟು ಹುಟ್ಟೂರು
ನೆಲಸಿದರೈತಂದು ಆ ಕೆರೆಮನೆಯೊಳು
ತೀರ್ಥಹಳ್ಳಿಗೆ ಹತ್ತಿರದೊಳು.

೭೧

ವೈದಿಕ ಲೌಕಿಕೋಭಯ ವಿದ್ಯಾನಿಪುಣರು
ನನ್ನ ಆ ದೊಡ್ಡಪ್ಪನವರು
ಅವರಿಗೆ ಗಂಡೈದು ಹೆಣ್ಣು ಮಕ್ಕಳು ಮೂರು
ಎಲ್ಲರು ಸದ್ಗುಣಯುತರು.

೭೨

ಮಕ್ಕಳೆಲ್ಲರು ಓದಿ ಯಶವನು ತಂದರು
ತಾಯಿ ತಂದೆಯರಿಗೆ ಕುಲಕೆ
ಬೇಸಾಯದೊಳು ನಿಂದು ಮಾದರಿಯಾದರು
ಸುತ್ತಣ ಊರಿನ ಜನಕೆ.

೭೩

ಅವರು ದೊಡ್ಡಪ್ಪದಿರಿಹವನು ಬಿಟ್ಟಂದು
ನಾ ಬಹು ಚಿಕ್ಕವನಾಗ
ಅದರು ನೆನೆದೊಡನೆದುರೊಳು ಸುಳಿವುದು
ಅವರ ಭವ್ಯಾಕಾರವೀಗ.

೭೪

ಹೋಗಿ ಬರುತಿದ್ದೆನು ತಂದೆಯ ಜತೆಯೊಳು
ಆಗಾಗ ನಾನು ಕೆರೆಮನೆಗೆ
ಹೀಗಾಗಿ ಅಕ್ಕರೆಯೊಡೆಯಿತು ಮನದೊಳು
ಕೆರೆಮನೆಯವರೆನೆ ನನಗೆ.

೭೫

ಆ ಅಣ್ಣ ಅಕ್ಕದಿರೆನ್ನನು ಕಂಡರು
ವಾತ್ಸಲ್ಯಪರಿಪೂರ್ಣರಾಗಿ
ತೀರ್ಥಹಳ್ಳಿಯೊಳೋದುವಂದವರೆಲ್ಲರು
ನೆರವಿತ್ತರೆನಗೆ ದಿಕ್ಕಾಗಿ.

೬೬

ಮತ್ತೆ ತೂದೂರಿಂದಲತ್ತ ಚೀಲೂರಿಗೆ
ತಂದೆಗೆ ವರ್ಗವೆಂದಾಗ
ಐವತ್ತು ವರುಷಗಳಾಗಿದ್ದವಂದಿಗೆ
ಮುಪ್ಪು ಬಂದಿತು ಬಹುಬೇಗ.

೬೭

ಹೊತ್ತುಹೊತ್ತಿಗೆ ಅನ್ನನೀರನು ಹವಣಿಸಿ
ಮಕ್ಕಳ ಗಿಣಿಯಂತೆ ಸಾಕಿ
ಸಂಸಾರ ರಥವನು ಬಹುದೂರ ಸಾಗಿಸಿ
ದಣಿದಿದ್ದರವರು ಏಕಾಕಿ.

೬೮

ಧರ್ಮಪತ್ನಿಯ ಸಾವು ನಂಟರಿಷ್ಟರ ಸಾವು
ಹಿರಿಯ ಮುದ್ದಿನ ಮಗಳಳಿವು
ಒಂದರಮೇಲೊಂದು ಮರೆಯಲಾಗದ ನೋವು
ಬಂದರೆಂತುಳಿವುದು ಕಸುವು.

೬೯

ಆರೋಗ್ಯ ಕೆಟ್ಟಿತು ಬೇನೆಗೆ ಬಿದ್ದರು
ಆಗಾಗ ಬಹು ನರಳಿದರು
ರಜವನು ಪಡೆದರು ತೂದೂರು ಬಿಟ್ಟರು
ಬಂದರು ಕೆರೆಮನೆಗವರು.

೭೦

ಮುಂದೆ ಮಜ್ಜಿಗೆಸರದೊಳು ತಂದೆ ನಿಂತರು
ಮಗಳ ಆರೈಕೆಯನಾಂತು
ನಂಟರಿಷ್ಟರ ಕಂಡು ನೆಮ್ಮದಿವಡೆದರು
ಹೋಯಿತು ಹೊತ್ತು ಸಮಂತು.

೭೧

ಅತ್ತ ಶೃಂಗೇರಿಯೊಳಿದ್ದ ರೂಪಿರಿಸುತ್ತು [illegible]
ರಾಮಭಟ್ಟರು ವೇದವಿದರು [illegible] ಗಿದಂತ
ಶ್ರೀರಾಮಭಕ್ತರು ಪರಮವಿರಕ್ತರು [illegible]
ಆ ನನ್ನ ದೊಡ್ಡಪ್ಪನವರು [illegible]

೭೨

ರಾಮಭಟ್ಟರ ಅಣ್ಣ ಹಿರಿಯಣ್ಣಭಟ್ಟರು [illegible]
ಅವರನು ಬಲ್ಲೆನು ಮರೆಯೆ [illegible]
ಅವರಣ್ಣ ಕೃಷ್ಣಭಟ್ಟರು ಗತಿಸಿದ್ದರು [illegible]
ಬಹುಹಿಂದೆ ಅವರನು ಅರಿಯ್ದು [illegible]

೭೩

ಖ್ಯಾತ ಸುಬ್ರಹ್ಮಣ್ಯಶಾಸ್ತ್ರಿಗಳೊಬ್ಬರು [illegible]
ಸಂಗೀತ ಶಾಸ್ತ್ರಕೋವಿದರು [illegible]
ಸರಸಸಾಹಿತ್ಯದ ತವನಿಧಿರೂಪರು [illegible]
ಆ ನನ್ನ ಚಿಕ್ಕಪ್ಪನವರು [illegible]

೭೪

ರಾಮಭಟ್ಟರು ಪಂಡಿತ ವೈದಿಕವಿದ್ಯೆಗೆ [illegible]
ಶಾಸ್ತ್ರಿಗಳಂತು ಲೌಕಿಕಕ್ಕೆ [illegible]
ಕಂಡೆನು ಹಿರಿಯರನೊಮ್ಮೆ ನಾ ಪೋದಲಿಗೆ [illegible]
ಹೋದಾಗ ಬೇಸಗೆ ರಜಕೆ [illegible]

೭೫

ಶ್ರೀ ಶಾರದಾಂಬೆಯ್ಸನದ್ದ ಪೋದಲಿಗೆ ಸ್ತೋಡ್ಡಿ [illegible]
ಮೈಯುಬ್ಬಿ ಮನವುಬ್ಬಿ ವ್ದುಣಿದೆ [illegible]
ಮಣಿದೆನದ್ವೈತತಧ್ವಪೀಠಕೆ ಕೊಂಡಾಡಿ [illegible]
ಕುಣಿದು ನಾ ಪುಣ್ಯಪುಳಿವೋದೆ. [illegible]

೭೬

ಆ ರಾಮಭಟ್ಟರು ಅಂದೆ ಬೇಸಗೆಯೊಳು
ತಂದೆಗೆ ಒಪ್ಪಿಗೆಯಾಗೆ
ಬ್ರಹ್ಮೋಪದೇಶವನಿತ್ತರಾದರದೊಳು
ವಿಧ್ಯುಕ್ತರೀತಿಯಿನೆನಗೆ.

೭೭

ಬೇಸಗೆ ಕಳೆಯಿತು ಶಾಲೆಯು ತೆರೆಯಿತು
ತೀರ್ಥಹಳ್ಳಿಗೆ ನಾನು ಬಂದೆ
ತಂದೆಯ ಆರೋಗ್ಯ ಮತ್ತೊಮ್ಮೆ ಕೆಟ್ಟಿತು
ನಿಶ್ಶಕ್ತಿ ಹೆಚ್ಚಿತು ಮುಂದೆ.

೭೮

ಹೋಗಿ ಕುಂದಾಪುರದೊಳು ತಿಂಗಳಿದ್ದರು
ಹವೆಯನು ಬದಲಿಸಲೆಂದು
ಬೇಸಗೆ ರಜವನು ಅಲ್ಲಿಯೆ ಕಳೆದರು
ಜತೆಯೊಳು ನಾನಿದ್ದೆನೆಂದು.

೭೯

ಆದೆ ಆಗ ಮೊದಲಿಗೆ ಕಡಲನು ಕಂಡೆನು
ಅಲ್ಲಿ ಕುಂದಾಪುರದಲ್ಲಿ
ನೆಲ ಜಲ ಮುಗಿಲಿನ ಮೇಳದ ಚೆಲುವನು
ಅರಿಪರೆ ಕೊನೆಮೊದಲೆಲ್ಲಿ

೮೦

ಇಪ್ಪತ್ತು ರೂಪಾಯಿಗಿದ್ದ ಸೈಕಲ್ಲನು
ಮಾರಿ ಬಂದಿದ್ದರು ತಂದೆ
ತಂದದ್ದು ಖರ್ಚಾಗಿ ತರಿಸಿ ಇನ್ನಷ್ಟನು
ಬಿಟ್ಟೆವು ಆ ಪುರ ಮುಂದೆ.

೮೧

ದೊಡ್ಡ ಪರೀಕ್ಷೆಯೊಳೆನ್ನ ದುರ್ದೈವಕೆ
ವಿಜಯವು ಅರೆಬರೆಯಾಗೆ
ನೊಂದುಕೊಂಡರು ತಂದೆ ತಮ್ಮೆಲ್ಲ ಹಂಚಿಕೆ
ಯೊಟ್ಟಿಗೆ ತಲೆಕೆಳಗಾಗೆ.

೮೨

ಈ ವೇಳೆಗೊಬ್ಬರು ಬೆಂಗಳೂರಿನ ಸಖರು
ಸುಬ್ಬರಾಯರು ಎನ್ನುವವರು
ಊರಿಗೆ ಬಂದರು ತಂದೆಯ ಕಂಡರು
ಕುಶಲದ ಮಾತನಾಡಿದರು

೮೩

ನಮ್ಮೊಡನೈತರಲೀ ನಿಮ್ಮ ಕುವರನು
ಬೆಂಗಳೂರಿನ ನಮ್ಮ ಮನೆಗೆ
ಚಿಂತೆಯ ಬಿಡಿ ನೀವು ನಾನೆ ಓದಿಸುವೆನು
ಬರುವನು ಊರಿಗೆ ರಜೆಗೆ.

೮೪

ಆಗಲಿ ಎಂದರು ನಾಲಗೆ ತುದಿಯಿಂದೆ
ಮನದೊಳು ನೊಂದರು ತಂದೆ
ಅವರು ಆವೇಳೆಗದಾವುದೊ ರುಜೆಯಿಂದೆ
ಕೃಶರಾಗಿ ನವೆದಿದ್ದ ಕತದೆ.

೮೫

ತೆರಳುವನಣುಗನು ಲಂಡನ್ನಿಗೆನುವಂತೆ
ಕಳವಳಗೊಂಡರು ತಂದೆ
ಮೊದಲನೆಬಾರಿಗೆ ತಂದೆಯನಗಲುತೆ
ದೂರದೂರಿಗೆ ನಾನು ಬಂದೆ.

೮೬ [illegible]

ಬೆಂಗಳೂರನೋಡಜ್ಞದೂಸ್ವೋಣಡೆವೆನ್ನೊಯು [illegible]
ಹಿರಿಯರ ಪರಕೆಯನುಪಡೆದಷ್ಟು [illegible]
ಅಂದಿಹುದಿನದ್ಲೊಳ್ಳುಲ್ಲತಾಡಿಯುದೊಡೆಂತುದಂ [illegible]
ಯಾತ್ರೆಯ ಕಥೆ ನಡೆದಿತ್ತು [illegible]

೮೭ [illegible]

ಕೋಟೆಯು [illegible] ಪ್ರೌಢಶಾಲೆಯು [illegible]
ತರಗತಿಯನುಪಡೆದಿಕ್ಕೊಂಡೆ [illegible]
ಷಹರಿನ ಜೀವನದೊಳುನಲಿದರು [illegible]
ಓದಿಗೆ ನಾಸಂಟಿಕೊಂಡೆ [illegible]

೮೮ [illegible]

ಆ ಪರ ಊತ್ರೊಳು ತಂದ್ರೆಯು ಗೆಳೆಯರ್ಗೂ [illegible]
ನನ್ನನು ಆದರಿಸಿದರು [illegible]
ಮನೆಯುವನೆಂಬಿತ್ತು [illegible] ನೆರೆದರು [illegible]
ಓದಿಗೆ ನೆರವಿತ್ತರವರು. [illegible]

೮೯ [illegible]

ಮುಗಿಸಿ ಪರೀಕ್ಷೆಯನೂರಿಗೆ ಮರಳಿಹೆ [illegible]
ಮನದೊಳು [illegible]
ವ್ಯಾಧಿಯು ಬೇನೆಯೊಳಿದ್ದರ್ತಾದರು [illegible]
ಹರ್ಷಿಸಿದರುನನ್ನ [illegible]

೯೦ [illegible]

ರಜದ ಮಂಜೂಷಾತ್ರಿ [illegible]
ಬಹುನೊಂದುಕೊಂಡರು [illegible]
ಸಂಬಳ ಬಾರದೆ [illegible]
ಕೈಸಾಲವೇರಿತ್ತು [illegible]

೭೬

ರೋಗಿಯನಾರೈಕೆಯ ಮಂಥ ಪಾರಿಥಿಕಾರಿ [illegible]
ಮಣ್ಣಿಗು ಕಡೆಯಾದು ಮಾರಾಗಿ [illegible]
ಮಗನಿಗಾದರು ಇಂಥ ಸರಕಾರಿ ನೌಕರಿ [illegible]
ಬೇಡವೆಂದರು. ನರಳಿ ಕೊರಗಿ [illegible]

೭೭

ಹಣವಿಲ್ಲ ಕೈಯೊಳ್ಗು ಗುಣವಿಲ್ಲ [illegible]
ಮೊದಲೆ ನೆಮ್ಮದಿಯಿಲ್ಲ [illegible]
ಬಹು ಬಸ್ತ್ರವಳಿದರು ತಂದೆ ಕಡೆಕಡೆ [illegible]
ಸರಕಾರದವರು [illegible]

೭೮

ಅವರ ನಿವೃತ್ತಿಯಾ ಕುರಿತು [illegible]
ಅವುದೊ ಕಾರಣವಾಗಿ [illegible]
ತಡವಾಗುತಿತ್ತು [illegible]
ಅದಕೆ ತಡೆಬಡೆಯಿಲ್ಲವಾಗಿ [illegible]

೭೯

ಹುಟ್ಟಿದ ಊರೊಳಗೆ. ದೇಹವ [illegible]
ಅಲ್ಲಿ ಆ ಶೃಂಗೇರಿಯಲ್ಲಿ [illegible]
ಅಣ್ಣ ದಿಕ್ಕಿಲ್ಲ [illegible]
ಮಗನೊಬ್ಬನೆದುರಿರುವಲ್ಲಿ. [illegible]

೮೦

ತೇಗ [illegible]
ಸುದ್ದಿಯು ಬರುವಷ್ಟರೊಳ್ [illegible]
ಸ್ವರ್ಗಸ್ಥರಾದರು [illegible]
ನಡುಬನದೊಳು [illegible]

೯೬

ಅಪ್ಪೆಲ್ಲ ಓದಿಸಿ ಪಾಸಾಯಿತೆನುವಾಗ
ಇಲ್ಲದೆ ಹೋದರು ತಂದೆ
ಬರಸಿಡಿಲೆರಗಿದ ಹಾಗಾದೆ ನಾನಾಗ
ದೀಪ ನಂದಿದ ಹಾಗೆ ಆದೆ.

೯೭

ಒಂದು ಪೆಟ್ಟನುಕೂಡ ಕೊಟ್ಟು ಶಿಕ್ಷಿಸಲಿಲ್ಲ
ಒಮ್ಮೆಯಾದರು ಬೈಯಲಿಲ್ಲ
ಮಮತೆಯ ಭಯವಾಗುವಂತೆ ನಮ್ಮನು ತಂದೆ
ಬೆಳಕಿಗೆ ತಂದರು ಮುಂದೆ.

೯೮

ಯಾರೇನು ತಂದು ತೋರಿಸಿದರು ಮೆಚ್ಚಿನ
ನುಡಿಯನು ನುಡಿಯುವರವರು
ಲವಲೇಶವಾದರು ಹೊಟ್ಟೆಯುಕಿಚ್ಚಿನ
ಕಿಡಿಕಾರದಂಥ ಶೀತಲರು.

೯೯

ತಂದೆಯು ಇಂಥ ಸದ್ಗುಣಗಳ ನೆನೆದೆವು
ನೆನೆದಷ್ಟು ಹೆಚ್ಚಿ ತುಮ್ಮಳವು
ನಾನು ನಮ್ಮಕ್ಕನು ಸುಗಿದೆವು ಸುಯ್ದೆವು
ಬಿಕ್ಕಿದೆವತ್ತೆವು ದಿನವು.

೧೦೦

ಹತ್ತಿರವಿದ್ದಂಥ ಸಂಟರು ಇಷ್ಟರು
ದೊಡ್ಡಪ್ಪ ಚಿಕ್ಕಪ್ಪನವರು
ದಿಕ್ಕಾಗಿ ನಿಂತರು ಶಾಂತಿಯನೊರೆದರು
ನಮ್ಮನ್ನು ಸಂತವಿಸಿದರು.

ಎರಡನೆಯ ನೂರು

೧

ಸೂರ್ಯನಿಗೆರಗುವೆ ಚಂದ್ರಂಗೆ ಬಾಗುವೆ
ಕುಜಬುಧರಿಗೆ ಕೈಯ ಮುಗಿವೆ
ಗುರುಶುಕ್ರಶನಿಗಳಿಗೊಲಿದು ಮುಡಿಬಾಗುವೆ
ರಾಹುಕೇತುಗಳಿಗೆ ಮಣಿವೆ.

೨

ದೊಡ್ಡಪ್ಪ ಚಿಕ್ಕಪ್ಪ ಮೊದಲಾದ ಹಿರಿಯರು
ಕೂಡಿದರಾಲೋಚಿಸಿದರು.
ಸೇರಿ ಕಾಲೇಜನು ಓದು ನೀನೆಂದರು
ಬೆಂಗಳೂರಿಗೆ ಕಳುಹಿದರು.

೩

ಇಂಟರು ತರಗತಿಯನು ಸೇರಿಕೊಂಡೆನು
ಕಾಲೇಜು ಮೆಟ್ಟಿಲು ಹತ್ತಿ
ತಂದೆಯ ಸಾವಿನ ಘೋರ ಸಂಕಟವನು
ನುಂಗಿಕೊಂಡೆನು ಹೇಗೊ ಒತ್ತಿ,

೪

ಸುಬ್ಬರಾಯರು ಮತ್ತೆ ನೆರವಿತ್ತುದಾಯಿತು
ಬೆಂಗಳೂರಿನ ಸುಖ ಸವಿದೆ
ಕನ್ನಡದೊಳಗೆನಗಭಿರುಚಿ ಬೆಳೆಯಿತು
ಪೂರ್ವ ಪುಣ್ಯದ ಫಲದ ತೆರದೆ.

೫

ಈ ವೇಳೆಗಾಗಲೆ ಮನದೊಳು ಹೊಳೆದಂತೆ
ಕನ್ನಡ ಕವಿತೆಯ ರಚಿಸಿ
ತೋರಿದೆ ಹಿರಿಯರಿಗವರದನೋರಂತೆ
ತಿದ್ದಿದರೆನ್ನನು ಹರಸಿ.

ಕವಿವರರೊಳು ಅಗ್ರಗಣ್ಯರ್ಗು ರಸಿಕರು
ಬಹುಶ್ರುತಜ್ಞರು ವಿ. ಸೀಯವರು
ನಮ್ಮ ವಿಮರ್ಶಕರ್ಕೊಳ್ಳು ಬಹು ಹಿರಿಯರು
ನನ್ನನು ತಿದ್ದಿದವರು.

ಕನ್ನಡದೊಳು ನಮಗೊಲವರವುಕ್ಕುವ
ತೆರದೊಳು ಪಾಠವ ಕಲಿಸುತ್ತ
ಕನ್ನಡ ದೀಕ್ಷೆಯನಿತ್ತರು
ಮನ್ನಂಥ ಜನರಿಗೆ ವಿ. ಸೀ.

೮

ಕನ್ನಡದೋಜರೊಳಿನ್ನೊಬ್ಬ ಮಹಿಮರು
ವೆಂಕಟರಾಮಪ್ಪನವರು
ನಗೆಯೊಳು ನೀತಿಯ ಬೆರೆಸುವ ಚತುರರು
ವಾಗ್ಮಿ ವರೇಣ್ಯರು ಬುಧರು.

೯

ಇವರಾಪ್ತ ಸಲಹೆಯನಾಗೀಗ ನೀಡುತ್ತ
ನನ್ನ ಒಳ್ಳೆಯದನ್ನೆ ಬಯಸಿ
ಪ್ರೀತಿಯಿಂದೀಗಳುಮೆನ್ನನು ನೋಡುತ್ತ
ದಾರಿತೋರುವರೆನ್ನ ಹರಸಿ.

೧೦

ಪಾಸಾಯಿತೆಂದರೂ ನಲಿದರು ಸಂಟಿಕರು
ಮಣಿದೆನು ಕುಲದೈವಕೆಡೆಸು
ಮಜ್ಜಿಗೆ ಸರಡೊಳು ಅಕ್ಕಭಾವಂದಿರು
ನಲಿದರು ನನ್ನ ತೇರ್ಗಡೆಗೆ.

೧೧

ಮುಂದೆ ಜಸ್ಟೀಸಾಗಿ ಹೈಕೋರ್ಟಿನಲ್ಲಿ [illegible]
ಮಹರಾಜ ಕಾಲೇಜಿನ ಕನ್ನಡ [illegible]
ಪದವಿಯ ಹಿರಿಗ ಕನ್ನಡಪಾ ಅದ್ಯ [illegible]
ಧನ್ಯನು ನಾನೀ ಮಹನೀಯ [illegible]

೧೨

[illegible] ಕಾಲೇಜಿನೊಳಗೆನಗೊಬ್ಬೊಬ್ಬರಾದರು [illegible]
ಪರಮಾಪ್ತರಾಜೀವನ [illegible]
ಅಂದಿನಿಂದವರೇ ಕರ್ಣಾಟಕ ಹೊಳಿರುವರೊ [illegible]
ಬಾಳಿಗೆ ಜೇನೂಡುತಿಹರು [illegible]

೧೩

ಒಬ್ಬರೆ ಶಂಕರನಾರಾಯಣರಾವ್ [illegible]
ಪರಮಾಪ್ತರಾದರು [illegible]
ದೊರಕಿದರಿನ್ನೊಬ್ಬರ [illegible]
ವೆಂಕಟಸುಬ್ಬಯ್ಯನವರು [illegible]

೧೪

ಕಸ್ತೂರಿ [illegible] ಶಿಕ್ಷಕ ಸಹೃದಯ [illegible]
ರನ್ನ ಹಿತೈಷಿ [illegible]
ತೈಲ [illegible]
ನುಜ್ಜಲಗೊಳ್ಳು [illegible]

೧೫

ಸಾಹಿತ್ಯಲೋಕದ [illegible]
ಕನ್ನಡ ಗುರುವರ್ಗ [illegible]
ಓಜರು ನಿರ್ಮಲ ಹೃದಯರು [illegible]
ಚದುರರು ಶಿಷ್ಟ [illegible]

೧೬

ಗುರುಜನರಾದ್ಯರು ಘನರು ಆಚಾರ್ಯರು
ಪೂಜ್ಯ ವೆಂಕಣ್ಣಯ್ಯನವರು
ಸಾಧು ಸತ್ಪುರುಷರೊಳವರಗ್ರಗಣ್ಯರು
ಪ್ರಾಧ್ಯಾಪಕೋತ್ತಮರವರು.

೧೭

ಮಿದುವಾದ ನಡೆಯಿಂದೆ ಮಿದುವಾದ ನುಡಿಯಿಂದೆ
ಮಿದುವಾದ ಮೆಲುನಗೆಯಿಂದೆ
ಬರೆಯಿಸಿ ಓದಿಸಿ ದಾರಿಗೆ ತಂದರು
ನನ್ನನು ತಂದೆಯ್ಪೊಲವರು.

೧೮

ಮತ್ತಿನ ಗುರುವರ್ಗದೊಳಗೊಬ್ಬರಿರುವರು
ಪೂಜ್ಯ ಶ್ರೀಕಂಠಯ್ಯನವರು
ಪೂಜ್ಯರು ನರಸಿಂಹಾಚಾರ್ಯರಿನ್ನೊಬ್ಬರು
ಇರ್ವರುಮತುಳಕೋವಿದರು.

೧೯

ಮೊದಲಿಗೆ ರಸಋಷಿ ಪುಟ್ಟಪ್ಪನವರನು
ಮೈಸೂರಿನೊಳು ಅಂದು ಕಂಡೆ
ಕವಿಯ ವಿಭೂತಿಯ ಪರಿಚಯದೊಳು ನಾನು
ಧನ್ಯನಾದೆನು ಎಂದುಕೊಂಡೆ.

೨೦

ಪ್ರೀತಿಯಿಂದೆನ್ನೊಳು ನುಡಿದರು ಕವಿಗುರು
ಮಲೆನಾಡಿನವನಿವನೆಂದು
ಸಲಹೆಯನಂದಿನಿಂದೀಯುತಲಿರುವರು
ಕೃತಿಯೆನ್ನದನು ಓದಿದಂದು.

೨೧

ಅರಿತೆನು ಇಂತಹ ಗುರುಜನರಡಿಯೊಳು
ಸಾಹಿತ್ಯದಡಿಮುಡಿಗಳನು
ಕಲಿತೆನು ಇಂತಹ ಗುರುಜನರೆಡೆಯೊಳು
ಶಾಸ್ತ್ರದ ನೆಲೆಬೆಲೆಗಳನು.

೨೨

ಅಶನಕೆ ನಡೆಯಿತು ವಾರಾನ್ನದೇರ್ಪಾಡು
ವಸತಿಗೆ ಗೆಳೆಯರ ಬೀಡು
ಓದಿಗೆ ಶುಲ್ಕ ವಿನಾಯಿತಿಯಾಯಿತು
ವಿದ್ಯಾರ್ಥಿವೇತನ ಬಂತು.

೨೩

ಕಾಲೇಜಿನೋದಿನೊಳೀರೀತಿ ಕಳೆಯಿತು
ಮೊದಮೊದಲಾಮುಂದೆ ಕೊನೆಗೆ
ಬೇರೊಂದು ರೀತಿಯ ಏರ್ಪಾಡು ನಡೆಯಿತು
ಅಶನಕೆ ವಸತಿಗೆ ನನಗೆ.

೨೪

ದೊರಕಿದರೆನಗೊಬ್ಬರನ್ನದಾತಾರರು
ಕೃಷ್ಣಮೂರ್ತಿಗಳೆನುವವರು
ಮನೆಯೊಳಗಿರಿಸಿಕೊಂಡೆನ್ನನೋದಿಸಿದರು
ಅವರುದಾರರು ಸುಮನಸರು.

೨೫

ಮುಂದೆ ನೌಕರಿ ದೊರೆಯುವವರೆಗವರೊಳು
ವರ್ಷ ಮೂರನು ನಾನು ಕಳೆದೆ
ಸರಳ ಸೌಜನ್ಯದ ಅವರ ಮಾದರಿಯೊಳು
ತಿದ್ದಿಕೊಳುವರಿವನು ತಳೆದೆ.

೨೬೭

ಆಗಿನ ದಿನದೊಳು ಆಯುಷ್ಯ ಕನ್ನಡವನೆ [illegible]
ಒಬ್ಬೊಬ್ಬರೋದಿದ್ದುದುಂಟು [illegible]
ನನ್ನ ತರಗತಿಯೊಳು ನಾನಿದ್ದೆನೊಬ್ಬನೆ [illegible]
ಗುರುಗಳಿಗೊಬ್ಬನೆ ನಂಟು. [illegible]

೨೬೮

ಓದಿನ ದಿನಗಳು ಗೆಲ್ಲುವ ದಿನಗಳು [illegible]
ಬಡತನವೇನಿದ್ದರೇನು [illegible]
ಆಗಿನ ದಿನಗಳು ನಲಿವಿನ ದಿನಗಳು [illegible]
ಜಡತನವೆನಿತಿದ್ದರೇನು. [illegible]

೨೬೯

ವಿದ್ಯಾರ್ಥಿ ಸಂಘದೊಳಾಸಕ್ತನಾದೆನು [illegible]
ಬಹುವಿಧದೊಳು ಮುಂದೆ ಬಂದೆ [illegible]
ಬುದ್ಧಿ ಸಂಬಂಧ ಪಾಠ್ಯೇತರ [illegible]
ಮೊದಲನೆಯವನಾಗಿ ನಿಂದೆ [illegible]

೨೭೦

ನಾಟಕವಾಡಿದೆ ಕಾವ್ಯವನೋದಿದೆ [illegible]
ಭಾಷಣಮಾಡಿದೆ ಮತದೆ [illegible]
ಚರ್ಚೆಯ ಕೂಟದೊಳಾಸಕ್ತಿ ವಹಿಸಿದೆ [illegible]
ಖಂಡನಮಂಡನಗೈದೆ [illegible]

೨೭೧

ಪತ್ತೊರುಪಾಯಿಯು [illegible] ಸಂಚಾರಕೆ [illegible]
ರೈಲು ತಿಕೀಟನು ತಂದೆ [illegible]
ರಜೆಯೊಳು ಹತ್ತೂರು ಸುತ್ತಾಡಿ [illegible]
[illegible]

೩೧ [illegible]

ಬಾದಾಮಿ ಪೊನ್ನಸಟ್ಟಣಂತೆ ಸ್ತ್ರೋಲಾಪುರ [illegible]
ಮುಂತಾದ ಎಡೆಗಳ ನೋಡಿ [illegible]
—ಗತವೈಭವಂಗಳ ಕಂಡಾಗ ಕಣ್ಣಾರ [illegible]
ಒಡೆಯಿತು ಕವನದ ಕೋಡಿ [illegible]

೩೨ [illegible]

ಶ್ರೀಯುವರ್ತಿಸಿದ ಜೆಷ್ಟದ ಪದಕ [illegible]
ನನ್ನ ನೀಳ್ಗವನಕೆ ಬಂತು [illegible]
ದೊಡ್ಡಪ್ಪನವರಿಗಂದಾದ ಸಂತೋಷ [illegible]
ಹೀಗೆಂದು ಹೇಳುವುದೆಂತು [illegible]

೩೩ [illegible]

ಮನೆಯಿಂದ ಮನೆಗೆ [illegible] ಪದಕವನೊಯ್ದರು [illegible]
ಮೆರೆದರು ದೊಡ್ಡಪ್ಪನವರು [illegible]
ಊರವರೆಲ್ಲರಿಗದನು ತೋರಿಸಿದರು [illegible]
ನೆರೆ ನಲಿದರು ನೋಡಿದವರು [illegible]

೩೪ [illegible]

ಮರಳಿ ಮೈಸೂರಿಗೆ ಎಂ. ಎ. ಪರೀಕ್ಷೆಗೆ [illegible]
ನಾನಣಿಗೊಂಡಿದ್ದ ವೇಳೆಗೆ [illegible]
ದೊಡ್ಡಪ್ಪನವರತ್ತ ಓಗೊಟ್ಟು ಲೋಕಕ್ಕೆ [illegible]
ನಡೆದರು ದೇವಸನ್ನಿಧಿಗೆ [illegible]

೩೫ [illegible]

ಪ್ರೌಢಶಾಲೆಯೋದು ಮುಗಿಯಿತೆಂದೆನುವಾಗ [illegible]
ನಲಿವೂಡೆ ತಂದೆಯಿರಲಿಲ್ಲ [illegible]
ಎಂ. ಎ. ಪರೀಕ್ಷೆಕೊಳ್ಳುತ್ತೀರ್ಣನಾಗ [illegible]
ದೊಡಪ್ಪನವರೆನಗಿಲ್ಲ [illegible]

೩೬

ಹಿರಿಯರ ಪುಣ್ಯವು ನಡಸಿತು ನನ್ನನು
ನನ್ನ ಪುಣ್ಯವೆ ಹೀನವಲ್ತೆ
ಓದೆಲ್ಲ ಮುಗಿದಾಗ ಕೂಡಿ ನನ್ನವರನು
ಬಾಳುವುದೆನಗಿಲ್ಲವಾಯ್ತು.

೩೭

ಓದಿನ ದಿನದೊಳು ನಡೆದ ದುರ್ಘಟನೆಯ
ಬಣ್ಣಿಪೆನಿನ್ನೊಂದನೆಂತು
ಕಿರಿಯ ಭಾವಂದಿರು ಗತಿಸಿದ ಸುದ್ದಿಯು
ಸಿಡಿಲಿನ ಕಾಗದ ಬಂತು.

೩೮

ದುರ್ಘರ ದುಃಖದೊಂದುಬ್ಬರದೊಳು ಸುಟ್ಟು
ಬೆಂದೆನುದ್ವೇಗದ ಭರಕೆ
ಕಣ್ಣುಮುಚ್ಚಿ ತುಟಿಕಚ್ಚಿ ಶೋಕವನದುಮಿಟ್ಟು
ಹೋದೆನು ಮಜ್ಜಿಗೆಸರಕೆ.

೩೯

ಒಬ್ಬರನೊಬ್ಬರು ಕಂಡೊಡನೊಮ್ಮೆಗೆ
ದುಃಖದ ಕಾರಂಜಿ ಪುಟಿಯೆ
ಅತ್ತೆವು ಸುಯ್ದೆವು ಕುಳಿತೆವು ಸುಮ್ಮಗೆ
ದುಃಖಕೆ ಕೊನೆಮೊದಲಿದೆಯೆ.

೪೦

ಚಲನಚಿತ್ರದ ಪಟವು ಸುರುಳಿ ಬಿಚ್ಚಿದ ಹಾಗೆ
ಹಿಂದಿನ ಆ ಘಟನೆಗಳು
ಸರಸರನೊಂದರ ಮೇಲೊಂದರಂತಾಗೆ
ಬಂದವು ಸ್ಮೃತಿಪಟಲದೊಳು.

೪೧

ರಾಮಪ್ಪ ಭಾವದಿರಭಿರಾಮರೂಪರು
ಚಾರುಸಂಪನ್ನರು ಅವರು
ಕಪಟ ಕಾಲುಷ್ಯಗಳರಿಯದ ಯುವಕರು
ಸಭ್ಯರು ಸುಮನಸರವರು.

೪೨

ನಾನವರೊಡಗೂಡಿ ಬೇಸಿಗೆ ರಜದೊಳು
ಕಾಡುಮೇಡುಗಳನು ಅಲೆದು
ಹಾಡುತಲಾಡುತ ಕಳೆದಂಥ ದಿನಗಳು
ಮಿಂಚಿದುವನ್ನಿದಿರೆಂದು.

೪೩

ಮರಮರಗಳನು ಮಾತಾಡಿಸುತಿದ್ದೆನು
ಭಾವದಿರೊಂದಿಗೆ ಕೂಡಿ
ನಲಿಯುತಲಿದ್ದೆನು ನಾಗರಿಕತೆಯನು
ಕಾಡಿಗೆ ವರದಿಯ ಮಾಡಿ.

೪೪

ಏನು ಹೇಳಿದರೇನು ಭಾವದಿರಳಿದರು
ಹಾಳಾಯಿತಕ್ಕನ ಬಾಳು
ತಾನಾಗಿ ತಣಿಯದೆ ಯಾರು ಏನೆಂದರು
ತಮಣೆಗೆ ಬರುವುದೆ ಗೋಳು.

೪೫

ಇದ್ದೊಬ್ಬ ಮಗನನು ಲಾಲಿಸಿ ಪಾಲಿಸಿ
ಬೆಳಸಿ ಓದಿಸಿ ಬುದ್ಧಿಗಲಿಸಿ
ಮುಂದಕೆ ತರುವೆನೆಂದಕ್ಕ ಸಂಕಲ್ಪಿಸಿ
ನಿಂತರು ಕಣ್ಣೀರನೂರಿಸಿ.

೪೭ ೧೨

ವಿಜಯ ಮದ್ವೈಕ್ಯಮದ ಮಂಜುರಹಿಂದೆಗೆಯ್ದಿತ್ತಷ್ಟರ
ಕಲೆಯುಳಿಯಿತು ಬಾಂಬು ಹುಟ್ಟಿದ ಮನೆಯಲಿ
ಮಗನಾಟ ಪಾಠಪ್ರಾರಂಭವಾಯಿತು ನ್ಯಾಲಿಸಿತ್ತಕ ಜಪಕ
ಸಾಗಿತು ಶಾಲೆಯೊಳೋದು ಮುಂದಕೆ ರ್ತ್ಯಫಕ

೪೮ ೧೨

ಮಗನೋದು ಮುಗಿಯಿತು ಮದುವೆಯೂ ಆಯಿತು ಮುಂದೆ
ಮಕ್ಕಳಾದವು ಹೆಣ್ಣು ಗಂಡು ಮಕ್ಕಳು ಹಲವಾರು
ಅಕ್ಕನ ದುಃಖವು ಹುಸುಗು ಸರಿಯುತ್ತ ಹೋದ್ದೇ ಹೋಯ್ತು
ಮಗನ ಏಳಿಗೆಯನು ಕಂಡು ಸ್ವಾಭಿಮಾನದಿಂದ

೪೯ ೧೨

ಮಗನಂತೆ ತಪ್ಪು ಮನ ದಿನದಿನ ಬೆಳಗು ಬೆಳಗಾಗುತ
ಮುದವಾಯಿತಕ್ಕನ ಮನಸು ಸಂತಸದ ಹೊಂಗ
ಇಂದಿಗು ಊರೆಗೋಲೆನ್ನ ಕೈ ಹಿಡಿಗೋಲು ಅವರೆ
ಅವರಂಥ ಹಿರಿಯರ ಹರಕೆ ಬರಲಿ ಗಳಿಗೆ

೫೦ ೧೨

ದೂರದ ಅಂತರದ ಪಟ್ಟಣದ ಪ್ರದೇಶಂತ ಹೋರದ ಬೀದಿ ಚಾಡ
ಮೈಸೂರು—ಮಜ್ಜಿಗೆಸರ ಕೆಲ್ಲಕ್ಕೆ ತಂದಿದ್ದ ರಾಜ
ಅಕ್ಕ ತಮ್ಮಂದಿರೊಬ್ಬರೊಬ್ಬರನು ಹಂತ ಗೆಲಿದ
ನೆನೆಯಿದಿದ್ದರೆ ತಂದೆ ಮನಕೆ ಬಂದು ಗಳಿಗೆ

೫೧ ೧೨

ಕನ್ನಡ ಸುಡಿಯ ಅಧ್ಯಯನ ಕೈತೊಡಗಿದ್ದು ಪ್ರವೇಶ
ವಿದ್ಯಾರ್ಥಿ ವೇತನ ಪಡೆದ್ದು ಮಠದ ನೆರವು
ಮಾಹಿತಿ ಸಾಲದ್ದೆ ಕೆಲಸವು ಮುಗಿಯದೆ ಕಡೆಗೆ
ಬಹುಪೇಚಿಗೀಡಾದೆ ಹೊಂತ ಅಕ್ಕ ಅರಸಿದ

೫೧

ಮೈಸೂರು ನಗರದ ಸುತ್ತಣ ಹಳ್ಳಿಯಂ
ಆಡುವ ಭಾಷೆಯ ಜೊತೆಗೆ
ಹೋಲಿಸಿನೋಡಿದೆನತ್ತ ಶಿವಮೊಗ್ಗೆಯ
ದೇಸಿಯ ನುಡಿಯನು ಕೊನೆಗೆ.

೫೨

ಶೃಂಗೇರಿ ಕೊಪ್ಪಸಾಗರ ತೀರ್ಥಹಳ್ಳಿಯ
ಪರಿಸರದೆಡೆಗಳ ಕಂಡೆ
ನೂರಾರು ಜನರ ಆ ಸಸ್ನೇಹಪರಿಚಯ—
ದಿಂದಲಂದಾವೋದಗೊಂಡೆ.

೫೩

ಮುಂದೊಂದು ದಿನದೊಳು ನನ್ನಬಾಳಿನ ಬೇರು
ಕಡಿಯಿತು ಬಾಡಿತು ಚಿಗುರು
ಸ್ವರ್ಗಸ್ಥರಾದರು ನನ್ನ ಗುರುದೇವರು
ಪೂಜ್ಯ ವೆಂಕಣ್ಣಯ್ಯನವರು.

೫೪

ನೌಕರಿಯಶಾಯಿತು ಮುಂದೆ ಜುಲಾಯಿಗೆ
ದೈವವು ಕಣ್ದೆರೆಯಿತೆಂದೆ
ಕಾಲೇಜಿನೊಳಂ ನಲವತ್ತುರೂಪಾಯಿಗೆ
ಕನ್ನಡ ಪಂಡಿತನಾದೆ.

೫೫

ಮರುವರ್ಷ ಸಂಸಾರಿಯಾದೆನು ನಾನೆನೆ
ಅಂಕುರಿಸಿತು ಹೊಸ ಕುತ್ತ
ವಿಶ್ವದ ಎರಡನೆ ಸಮರದ ಕುದಿಬೇನೆ
ಅದೆ ತಾನೆ ಹಬ್ಬಿತ್ತು ಸುತ್ತ.

೫೬

ಘನರು ಕೃಷ್ಣಸ್ವಾಮಿಯುವರು ಮಾವಂದಿರು
ಚಿನ್ನಮ್ಮನವರತ್ತೆಯುವರು
ಅಭಿಜಾತರುತ್ತಮರೆನ್ನತ್ತೆಮಾವರು
ಗಣ್ಯರು ಸುಪ್ರತಿಷ್ಠಿತರು.

೫೭

ದೇವದ್ವಿಜಾರ್ಚನಾಸಕ್ತರು ಭಕ್ತರು–
ದಾರರು ನಿತ್ಯ ನಿರ್ಮಲರು.
ಮೂವರು ಪುತ್ರಿಯರೈವರು ಪುತ್ರರು
ಇವರ ಕೀರ್ತಿಯ ಬೆಳಗುವರು.

೫೮

ಲಕ್ಷ್ಮೀನಾರಾಯಣರಿವರೊಳು ಹಿರಿಯರು
ವೈದ್ಯವಿದ್ಯೆಯನೋದಿದಿವರು
ವಾಯುಸೇನೆಯೊಳಧಿಕಾರಿಯಾಗಿರುವರು
ಬೆಂಗಳೂರಿನೊಳಿರುತಿಹರು.

೫೯

ಮತ್ತೊಬ್ಬ ಪುತ್ರರು ರಂಗನಾಥಾಖ್ಯರು
ನಾಟಕಕರ್ತರು ನಟರು
ಬೆಂಗಳೂರಾಕಾಶವಾಣಿಯೊಳಿರುವರು
ರಸಿಕರು ಕುಶಲಕೋವಿದರು.

೬೦

ದೆಹಲಿಯ ಬಾನುಲಿ ಕೇಂದ್ರದೊಳಿರುವರು
ಆ ರಾಮಕೃಷ್ಣನೆನುವವರು
ದೂರದಮೇರಿಕೆಯೊಳು ವೈದ್ಯರಿರುವರು
ನಂಜುಂಡಸ್ವಾಮಿಯೆಂಬುವರು.

೭೧

ಅದೆ ಬೆಂಗಳೂರಿನೊಳಿಹರಿಂಜಿನಿಯರಾಗಿ
ಕಿರಿಯ ನಾರಾಯಣಮೂರ್ತಿ
ಹಸರಿಸಿ ಹಬ್ಬಿಹುದಿಂದು ಈ ತೆರನಾಗಿ
ಪುತ್ರರೈವರ ಚಾರುಕೀರ್ತಿ.

೭೨

ಪುತ್ರಿಯರೊಳು ಸೀತಾಲಕ್ಷ್ಮಿಯೆ ಹಿರಿಯರು
ರಾಜಲಕ್ಷ್ಮಿಯೆ ಮಧ್ಯದವರು
ಈ ರಾಜಲಕ್ಷ್ಮಿಯೆ ನನ್ನ ಕೈಹಿಡಿದರು
ಶಾರದಮ್ಮನೆ ಕಡೆಯವರು.

೭೩

ನಮ್ಮ ಮಾವಂದಿರ ಹಿರಿಯ ಅಳಿಯಂದಿರು
ಶ್ರೀ ಸುಬ್ಬರಾಯನೆನುವವರು
ದೂರದ ಹೈದರಾಬಾದಿನೊಳಿರುವರು
ಕೈಗಾರಿಕೋದ್ಯಮಿಯವರು.

೭೪

ಶಿಕ್ಷಕ ವೃತ್ತಿಯ ಕಿರಿಯ ಅಳಿಯಂದಿರು
ಶ್ರೀ ಕೃಷ್ಣಮೂರ್ತಿಯೆನುವವರು
ನಡುವಣ ಅಳಿಯಂದಿರೀ ಕೃತಿಕರ್ತೃವೆ
ಎಂದು ಹೇಳುವುದವಶ್ಯಕವೆ.

೭೫

ಅತ್ತೆಮಾವಂದಿರ ಅಣ್ಣತಮ್ಮದಿರನು
ಮತ್ತಿನ ಬಂಧುವರ್ಗವನು
ಪ್ರಕೃತಕೆ ಮೀರಿತೆಂದಾಡದೆ ಬಿಟ್ಟೆನು
ಮನ್ನಿಪುದೆಂದು ಕೋರುವೆನು.

೬೬

ನಮ್ಮ ಆ ಮದುವೆಗೆ ಬಂದಿದ್ದರೆಲ್ಲರು
ಹಿರಿಯರು ನಮ್ಮೂರಿನವರು
ಚಿಕ್ಕಪ್ಪ ಚಿಕ್ಕಮ್ಮ ಮುಂದಾಗಿ ನಿಂತರು
ಮದುವೆಯ ನೆರವೇರಿಸಿದರು.

೬೭

ಚಿಕ್ಕಮ್ಮನವರನು ಕುರಿತೊಂದು ಮಾತನು
ಇಲ್ಲಿಯಾದರು ಹೇಳಬೇಕು
ಅವರಂಥ ನಿಸ್ವಾರ್ಥ ಹೃದಯಿಯಾದವರನು
ಮತ್ತೆಲ್ಲಿ ನಾ ಕಾಣಬೇಕು.

೬೮

ಮುಗ್ಧತೆ ಮೈತಳೆದಂತೆವೋಲಿರುವರು
ಪರಿಶುದ್ಧಚೇತನರವರು
ಸುಬ್ಬಮ್ಮನವರ ಆ ಸೌಜನ್ಯವೆನುವುದು
ಮಾತಿಗೆ ನಿಲುಕದಂತಹುದು.

೬೯

ನಾಗಾಲಿನೋಟದೊಳಾಗಿನ ದಿನಗಳು
ಮಿಂಚಿ ಮರೆಯಾದವು ಬೇಗ
ಸಹಧರ್ಮಚಾರಿಣಿಯೊಬ್ಬಳು ಬಂದಳು
ಕೊರತೆ ನನಗಾವುದಿನ್ನೀಗ.

೭೦

ಗೆಲುವೇನು ಚೆಲುವೇನು ನಲಿವೇನು ಒಲವೇನು
ನಡೆನುಡಿಗಳ ಬೆಡಗೇನು
ಮೂಜಗವನೆ ತಾವು ಗೆಲುವೆವೆಂದೆನುವರು
ಆಗ ಆ ರಾಜರಾಣಿಯರು.

೭೧

ಪ್ರೇಮದ ಮಾತಿಗೆ ಹೊಸಮದುಮಕ್ಕಳು
ಹೊಸ ಅರ್ಥವನು ವಾಚಿಸುವರು
ನವ್ಯರೀತಿಯು ನವ ಟೀಕೆ ಟಿಪ್ಪಣಿಗಳು
ಮೂಡಿದಂತಾಡಿ ತೋರುವರು.

೭೨

ಪ್ರೇಮಕೆ ಕಾಲವು ಬಹುದೊಡ್ಡ ಹಗೆಯೆಂದು
ಮನದೊಳು ಪರಿಗಣಿಸುವರು
ದಿವಸಕೆ ಮೂವತ್ತು ತಾಸಾದರೊಳಿತೆಂದು
ಹೊಸಲೆಕ್ಕವನು ಗುಣಿಸುವರು.

೭೩

ಮನದೊಳು ಮಾತಿಗೆ ನಿಲುಕದಂತಹ ಭಾವ
ಮೈಯೊಳು ಪುಳಕದ ಜಳಕ
ನವನವೀನವು ಜಗವೆನುವ ಒಂದನುಭವ–
ವಿರಲಿಲ್ಲವಂದಿನ ತನಕ.

೭೪

ತಾನೆ ಕಡಲಾದಂತೆ ತಾನಿಲ್ಲವಾದಂತೆ
ಕಡಲ ಕೂಡಿದ ಹೊಳೆಯಂತೆ
ಕೂಡಲನೇಕವು ತೋರುವುದೋರಂತೆ
ಏಕವೆ ತಾನೆನುವಂತೆ.

೭೫

ಇಂತಹ ಅನುಭವ ನಿತ್ಯಸಂಗತಿಯಾಗಿ
ಸತ್ಯದ ಕಥೆಯಾಗಿ ನಾವು
ಒಲಿದ ಮದುಮಕ್ಕಳು ಭಾವೈಕರಸರಾಗಿ
ಸಂಸಾರವಿದನು ಹೂಡಿದೆವು.

೭೬

ತುಮಕೂರಿನೊಳಗೊಂದು ಕಾಲೇಜು ತೆರೆಯಿತು
ಹೋದೆನಲ್ಲಿಗೆ ವರ್ಗವಾಗಿ
ಹೊಸ ಊರು ಹೊಸಮನೆಯೆನೆ ಹೊಸತಾಯಿತು
ನಮ್ಮ ಜೀವನ ಸುಖವಾಗಿ.

೭೭

ರೂಪಾಯಿಗೊಂಬತ್ತು ಸೇರಕ್ಕಿ ಒಂಬತ್ತು
ರೂಪಾಯಿ ಬಾಡಿಗೆ ಮನೆಗೆ
ನಾಕವೆ ಧರೆಗಿಳಿದಂತವೊಲಾಯಿತು
ತುಮಕೂರ ವಾಸವು ನಮಗೆ

೭೮

ನಾನು ನನ್ನಾಕೆಯೆಂದಿಬ್ಬರೆ ಮನೆಯೊಳು
ಗೊಂಬೆಯ ಸಂಸಾರದಂತೆ
ಒಪ್ಪಾಗಿ ಮೆರೆದೆವು ಅಲ್ಪಸಂಬಳದೊಳು
ಕೈಯೊಳು ಹಣ ಮಿಗುವಂತೆ.

೭೯

ತುಮಕೂರೊಳೊಂದು ಪವಾಡವೆ ನಡೆಯಿತು
ನನಗೆ ಸಂಬಂಧಿಸಿದಂತೆ
ಸ್ವಾತಂತ್ರ್ಯ ಸಂಗ್ರಾಮವಾರಂಭವಾಯಿತು
ಅದೆ ಕಟ್ಟಕಡೆಯುದೆಂಬಂತೆ.

೮೦

ಆಂಗ್ಲರಿಗೆಂದರು ಗಾಂಧಿಮಹಾತ್ಮರು
'ಭಾರತವನು ಬಿಟ್ಟುತೊಲಗಿ'
ಪ್ರತಿಯಾಗಿ ಕೈಸೆರೆಗೈದರಾಳರಸರು
ನಾಯಕರೆಲ್ಲರ ರೇಗಿ.

೮೨

ತುಳಿದ ಹಾವಾದರು ಹಸಿದ ಹುಲಿಯಾದರು
ಹುಚ್ಚಾನೆಯಾದರು ಜನರು
ಸರಕಾರವನು ಜಗ್ಗಿ ಬುಡಮೇಲುಗೈದರು
ಚಳುವಳಿ ತುದಿಮುಟ್ಟಿಸಿದರು.

೮೨

ಚಳುವಳಿ ನಿಂತಿತ್ತು ಕಾಲೇಜು ತೆರೆದಿತ್ತು
ಆದರು ಕಳವಳವಿತ್ತು
ಕನ್ನಡಪಾಠವು ಭರದೊಳು ಸಾಗಿತ್ತು
ತರಗತಿ ಮುಗಿಯುವ ಹೊತ್ತು.

೮೩

ನನ್ನೆದೆಮಟ್ಟದ ಎತ್ತರದೆದುರಿನ
ಮೇಜಿನ ಮೇಲೂರಿ ಕೈಯ
ಹಾಸ್ಯ ಚಟಾಕಿಯ ಹಾರಿಸುತಾದಿನ
ಗುರುತಿಸುತಿದ್ದೆ ಹಾಜರಿಯ.

೮೪

ಒಳಗಿಂದಲಾವುದೊ ಸದ್ದಾಗಿ ಹೊಗೆಬಂದ
ಹಾಗಾಯಿತೆಳೆದೆನು ಅರೆಯ
ಗಂಟೆಯ ನಂತರ ಸಿಡಿಯುವಂತಿರಿಸಿದ
ಕೈಬಾಂಬು ಸಿಡಿಸಿತು ಉರಿಯ.

೮೫

ಎದುರಿನೊಳವಿತಿದ್ದ ಮಿತ್ತುವನರಿಯದೆ
ನಗುತಿದ್ದೆ ಘಂಟೆಯಹೊತ್ತು
ಏಹೊತ್ತಿಗಾಪತ್ತು ಬಂದಿರಿಯುವುದೆದೆ—
ಗೆನ್ನುವುದಾರಿಗೆ ಗೊತ್ತು.

೮೬

ನನ್ನ ನಗೆಮಾತಿಗೆ ಮರುಳಾಗಿ ಮೃತ್ಯುವು
ಕೂಡ ಮೈಮರೆಯಿತೊ ಹೇಗೆ
ಅಲ್ಲದೊಡೆನ್ನಿಂದಲಿಂದು ಈ ಕಾವ್ಯವು
ರಚಿತವಾಗುತಲಿತ್ತೆ ಹೀಗೆ.

೮೭

ಹೌಹಾರಿ ಹುಡುಗರು ಹಾರಿದರತ್ತಿತ್ತ
ನೆರೆದರು ಜನ ಸುತ್ತಮುತ್ತ
ಅರೆಚಣದೊಳು ನಾನು ಮಿತ್ತುವಿನಿಂದಿತ್ತ
ಹಾರಿದೆ ತಪ್ಪಿತು ಕುತ್ತ.

೮೮

ನಾನು ಹಾರಿದೆನೆಂಬ ಒಣಜಂಬವೇತಕೆ
ಹಾರಿಸಿ ಉಳಿಸಿತು ದೈವ
ಭಯವನು ಹುಟ್ಟಿಸಿದಾತನೆ ಭಯವೇಕೆ
ಮಾಣೆನಲುಳಿವುದು ಜೀವ.

೮೯

ಜೀವಕೆ ಸಾವಿಗೆ ತಲೆಗೂದಲಂತರ—
ವೆನ್ನುವುದರಿವಾಯಿತಾಗ
ಕಾಣದ ಕೈಯೊಂದು ನಮ್ಮ ನಿರಂತರ—
ದೂಡುವುದೆಳೆವುದು ಬೇಗ.

೯೦

ತುಮಕೂರಿನಿಂದ ನಾ ಹೋದೆ ಶಿವಮೊಗ್ಗೆಗೆ
ನನ್ನ ತೌರೂರಿನ ನೆಲೆಗೆ
ನನ್ನ ಬಾಂಧವರಿಗೆ ಹತ್ತಿರದೂರಿಗೆ
ಹೋದ ಸಂತೋಷವು ನನಗೆ.

೯೧

ಶಿವಮೊಗ್ಗೆಯೆಂದೊಡನೊಗೆವುದು ಮನದೊಳು
ಬೇವು ಬೆಲ್ಲದ ನೆನಹುಗಳು
ಸುಖದುಃಖಗಳು ಬಂದವೆನಗನುಭವದೊಳು
ಬಂದಂತ ಹಗಲಿರುಳುಗಳು.

೯೨

ಮತ್ತಿಬ್ಬರೀವೇಳೆಗೆನಗಿಲ್ಲವಾದರು
ಪರಮಾಪ್ತ ಬಂಧುವಾದವರು
ಒಬ್ಬರು ಹಿರಿಯ ಭಾವಂದಿರು ಒಬ್ಬರು
ಕಿರೆಮನೆಯೊಳು ಹಿರಿಯವರು.

೯೩

ಹಿರಿಯವರೀಯಿರ್ವರಳಿವಿಗೆ ಬಹುವಾಗಿ
ನೊಂದೆನನಾಥನೆ ಆಗಿ
ಒಬ್ಬೊಬ್ಬರನು ನಾನು ಕಳೆದುಕೊಂಡೆನು ಹೀಗೆ
ಒಂದೊಂದು ಘಟ್ಟದ ಕೊನೆಗೆ.

೯೪

ಮೊದಲ ಹೂವರಳಿತು ಪ್ರೇಮವಲ್ಲರಿಯೊಳು
ಮಗಳೊಬ್ಬಳೊಗೆದಳು ನಮಗೆ
ಪ್ರಥಮ ಕುಮಾರಿಯ ಜನನದುತ್ಸವದೊಳು
ಹೊಸಬೆಳಕಾಯಿತು ಮನೆಗೆ.

೯೫

ಪುಟ್ಟ ಕಂದಮ್ಮನ ತೊಟ್ಟಿಲು ತೂಗಿತು
ಮುಟ್ಟಿತು ಜೋಗುಳ ಕಿವಿಯ
ಮೊಳೆನಗೆ ತೋರಿತು ತೊದಲುಲಿ ಕೇಳಿತು
ಮುಟ್ಟಿತು ಕೊಳಲಿನ ಸವಿಯ.

೯೬

ಮೂರುವರ್ಷಕೆ ಮುಂದೆ ಮಗನೊಬ್ಬನೊಗೆದನು
ಶ್ರೀರಾಮ ನವಮಿಯ ದಿನದೆ
ಒಸಗೆಯ ಮೇಲೊಸಗೆಯಂ ಕಂಡೆವೆಂದೆನು
ದೈವದನುಗ್ರದಿಂದೆ.

೯೭

ಮನೆಯೊಳು ಮೈಮರೆಯಿಸುವಂಥ ಸುಖವಿತ್ತು
ನೌಕರಿಯೊಳು ಗೆಲುವಿತ್ತು
ಗೆಳೆಯರ ನೆರವಿತ್ತು ಶಿಷ್ಯರ ಒಲವಿತ್ತು
ಹಿರಿಯರ ಬೆಂಬಲವಿತ್ತು.

೯೮

ತಂಗಾಳಿ ಸುಳಿದಾಗ ಮಲ್ಲಿಗೆ ಬನದೊಳು
ಹೊಕ್ಕಾಡುವಾರಡಿಯಂತೆ
ಮನೆಯೊಳು ಮಠದೊಳು ನಾಡೊಳು ಬೀಡೊಳಂ
ಮನವಾಡಿ ನಲಿಯಿತೋರಂತೆ.

೯೯

ನಗರ ಕರ್ಣಾಟಕ ಸಂಘವು ವೇದಿಕೆ—
ಯಾಯಿತು ನನ್ನ ಭಾಷಣಕೆ
ದೊರಕಿತು ಸತ್ಕಾವ್ಯ ಸರಸಕಥಾಲಾಪ-
ದೊಳಗತುಳ ತತ್ವನಿಕ್ಷೇಪ.

೧೦೦

ಇಂದ್ರಚಾಪದ ಮಳೆಗಾಲದ ದಿನದಂತೆ
ಬಾಳಿಗೆ ಹೊಸಬಣ್ಣವಾಗೆ
ಸಂಸಾರವೆನುವುದಂ ಸುಖಮಯವೆನಿಸುತೆ
ಕಳೆಯಿತು ಕಾಲವು ಹೀಗೆ.

ಮೂರನೆಯ ನೂರು

೧

ಆವುದು ಕತ್ತಲ ಕಾಳವು ನನ್ನೊಳು
ಅದನೆಲ್ಲದೇವನ ಬೆಳಗು
ಎಡವಿದ ಬೆರಳು ಮತ್ತೆಡವದ ತೆರದೊಳು
ಬಾ ಬಳಿ ಬೆಳಗೊಳಹೊರಗು.

೨

ಮನೆಯಾಕೆಯಾರೋಗ್ಯವಿದ್ದಕಿದ್ದಂತೆಯೆ
ಕೆಟ್ಟಿತದೇತಕೊ ಅರಿಯೆ
ಅಂಜಿಕೆಯೆನಲಾರೆ ಶಂಕೆಯೆಂದನಲಾರೆ
ತಾನಾದಳೊಮ್ಮೆಗಧೀರೆ.

೩

ಏನನೊ ನೆನೆದು ಮತ್ತೇನನೊ ಭಾವಿಸಿ
ಏನನೊ ಊಹಿಸಿ ಕೊರಗಿ
ದೀನೆಯಂತಾದಳು ಮನದೊಳು ಕಸಿವಿಸಿ-
ಗೊಂಡಳು ನೊಂದಳು ಸೊರಗಿ.

೪

ಯಾರೊ ಸತ್ತವರನು ಯಾರೊ ಹೆತ್ತವರನು
ಮತ್ತೆ ಕಂಡಂತಾಗಿ ಚೀರಿ
ಚಿತ್ತದುದ್ವೇಗದೊಳನ್ನಪಾನಗಳನು
ಮರೆತಳು ಈಕೆ ಹೌಹಾರಿ.

೫

ನೋಟದೊಳಾವುದೊ ವೇದನೆ ತೋರಿತು
ನಾನದ ಬಣ್ಣಿಸಲರಿಯೆ
ಮಾತಿನೊಳಾವುದೊ ಸಂಕಟವೇರಿತು
ನಾನದನರ್ಥೈಸಲರಿಯೆ.

೬

ಮುಖವು ಕಪ್ಪಾಯಿತು ಕಣ್ಣು ಕೆಂಪೇರಿತು
ಬೆಪ್ಪು ಬೆಪ್ಪಾಯಿತು ಚಿತ್ತ
ನಾಲಗೆಯೊಣಗಿತು ಮೈ ಬಿಸಿಯಾಯಿತು
ದಿನದಿನಕೇರಿತು ಕುತ್ತ.

೭

ಶಿವಮೊಗ್ಗೆಯನು ಬಿಟ್ಟೆ ಮೈಸೂರಿಗೈತಂದೆ
ಬಹುನೊಂದೆ ಬಹುಬೇನೆವಡೆದೆ
ತೌರಿನಾರೈಕೆಯು ಹಿರಿಯರ ಹರಕೆಯು
ಬೇಡಿದ ದೈವದ ದಯೆಯು.

೮

ಕೆಟ್ಟಿತ್ತು ಹೀಗೆನ್ನ ಮಡದಿಯಾರೋಗ್ಯವು
ಆವೂರು ಬಿಡುವಾಗ ನಾವು
ಮಗಳಿಗೆ ನಡದಿತ್ತು ಮೂರನೆ ವರುಷವು
ಮಗನರುದಿಂಗಳ ಮಗುವು.

೯

ಸಾವಿರದೊಂಬೈನೂರೈವತ್ತರೊಳು ಬಂದೆ
ಹದಿನೈದು ವರುಷದ ಹಿಂದೆ
ಹತ್ತುವರುಷದ ಹಿಂದೆ ಬಿಟ್ಟ ಮೈಸೂರಿಗೆ
ಮರಳಿದೆನೀರೀತಿ ಕೊನೆಗೆ.

೧೦

ಬಗೆಬಗೆಯೌಷಧದುಪಚಾರವಾಯಿತು
ಕಾಲಕಾಲಕೆ ಸರಿಯಾಗಿ
ಪಥ್ಯ ಪಾನೀಯಗಳೆಲ್ಲವು ನಡೆಯಿತು
ಅನುಪಾನಕನುಸಾರವಾಗಿ.

೧೧

ಗ್ರಹಚಾರ ಕೆಟ್ಟಿತೆ ವಿಧಿ ಶಾಪವಿಟ್ಟಿತೆ
ದೈವಕೆ ಬಂದಿತೆ ಸಿಟ್ಟು
ಪೂರ್ವದುಷ್ಕರ್ಮವು ಒಟ್ಟೈಸಿ ಮೂಡಿತೆ
ಅಲ್ಲದೊಡಾವುದೀ ಪೆಟ್ಟು.

೧೨

ನಾ ಪಟ್ಟ ಪಾಡಿಗೆ ಕೊನೆಮೊದಲುಂಟೇನು
ಆಗಿನ ದಿನಗಳೆ ಹಾಗೆ
ಬೈಗೇನು ಬೆಳಗೇನು ಹಗಲೇನು ಇರುಳೇನು
ವಿಶ್ರಾಂತಿಯಿರಲಿಲ್ಲವೆನಗೆ.

೧೩

ನಿದ್ದೆಯು ಕಾಣದೆ ತಿಂಗಳಾರಾಗಿತ್ತು
ಸಾಕುಸಾಕಾಗಿತ್ತು ಕೊನೆಗೆ
ಊಟೋಪಚಾರಗಳೊಗ್ಗದೆ ಹೋಗಿತ್ತು
ಆಗ ನನ್ನವಳಿಗೆ ನನಗೆ.

೧೪

ನಾನಿದಕಾಗಿಯೆ ಜನ್ಮವನೆತ್ತಿದೆ–
ನೆಂಬಂಥ ನಿಷ್ಠೆಯನಾಂತು
ಮಕ್ಕಳನಿಬ್ಬರನೋರಂತೆ ಸಲಹಿದೆ
ಅವುಗಳಾರೈಕೆಯು ನೋಂತು.

೧೫

ಬಹುಬಗೆಯಿಂದುಪಚರಿಸಿದರೆಲ್ಲರು
ಈಕೆಯ ಒಡಹುಟ್ಟಿದವರು
ಮಗಳ ಆರೈಕೆಯೊಳರೆಯಾಗಿ ಹೋದರು
ಮುಪ್ಪಿನ ತಂದೆ ತಾಯಂದಿರು.

೧೬

ಕಷ್ಟದ ಕದ್ದಿಂಗಳಿರುಳಿನ ದಿನಗಳು
ಒಂದೊಂದೆ ಹಿಂದಕೆ ಸಲಲು
ಪಾಳೆಯು ತೆಗೆಯಿತು ದುಃಖದ ಕತ್ತಲು
ಸುಖಶಶಿ ಮೇಲೇರಿ ಬರಲು.

೧೭

ನಾವೆಲ್ಲ ಅತ್ತೆಯಮನೆಯೊಳಗಿದ್ದೆವು
ಮೈಸೂರೊಳೀಯವಧಿಯೊಳು
ಕುದುರಿತು ಮನೆಯಾಕೆಯಾರೋಗ್ಯಭಾಗ್ಯವು
ತೌರಿನ ಸವಿಯಕ್ಕರೆಯೊಳು.

೧೮

ಹುಡುಕಿದುದಾಯಿತು ಬೇರೊಂದು ಮನೆಯನು
ಮನೆಯವರೊಪ್ಪಿಗೆವಡೆದು
ಹೊಸಪರಿಸರದೊಳು ಕಂಡು ಹೊಸಮನೆಯನು
ಸತಿ ನಲಿಯುವಳೆಂದು ಬಗೆದೆ.

೧೯

ಹತ್ತು ವರುಷಕೆ ಹಿಂದೆ ಸಂಬಳವೆಷ್ಟಿತ್ತು
ಬಾಡಿಗೆಯಷ್ಟಾಯಿತೀಗ
ಆದರು ಚಿಂತಿಸದಾಮನೆಯನು ಗೊತ್ತು–
ಮಾಡಿದೆ ಹೋದೆನು ಬೇಗ.

೨೦

ಭಾವಿಸಿದಂತೆಯೆ ದಿನದಿನಕುತ್ತಮ–
ವಾಗುತ ಬಂದಿತಾರೋಗ್ಯ
ಮನೆಯೊಳು ನೆಮ್ಮದಿಯಿದ್ದರೆ ಬೇರಾವು–
ದಿದಕಿಂತ ಮಿಗಿಲಾದ ಭಾಗ್ಯ.

೨೧

ಮಕ್ಕಳು ನರ್ತನ ವಿದ್ಯೆಯ ಕಲಿತರು
ಕಲಿತರು ತಾಯಿ ಸಿತಾರು
ಗೀತ ನರ್ತನಗಳ ಮೇಳದೊಳೊಂದಾಗಿ
ನಲಿದೆನು ನಾ ಕವಿಯಾಗಿ.

೨೨

ಮೈಸೂರಿಗೈತಂದ ಮೂರನೆ ವರ್ಷಕೆ
ಪುಟ್ಟಿದಳೆರಡನೆ ಮಗಳು
ಪ್ರೇಮವಲ್ಲರಿಯೊಳು ಗೇಣುಗೇಣಂತರಕೆ
ಬಿರಿದಂತ ಮೂರನೆ ಮಗಳು.

೨೩

ಸಂತೋಷವಾಯಿತು ಅತ್ತೆಮಾವದಿರಿಗೆ
ಬಂಧುಬಾಂಧವರಿಗೆ ನಮಗೆ
ಈ ಪುಟ್ಟತಂಗಿಯ ಮುದ್ದಾದ ಕೇಕೆಗೆ
ನಲಿವುಕ್ಕಿತಕ್ಕ ಅಣ್ಣರಿಗೆ.

೨೪

ಹೀಗೊಂದು ತೆರದೊಳು ನೆಮ್ಮದಿ ಮನೆಯೊಳು
ತುಂಬಿದ ದಿನ ಬರಲಾಗಿ
ಅತ್ತ ಕಾಲೇಜೊಳು ಗೆಳೆಯರ ಬಳಿಯೊಳು
ಕಳೆಯಿತು ಕಾಲ ಸುಖವಾಗಿ.

೨೫

ಕಷ್ಟವನೆಣಿಸದೆ ಕಾರ್ಯತತ್ಪರನಾದೆ
ವ್ಯಾಸಂಗದೊಳು ನಿಷ್ಠನಾದೆ
ಮುದ್ದಣ ಕವಿಯನು ಅಭ್ಯಾಸಮಾಡಿದೆ
ಆ ಕೃತಿಗಳ ಹೊರತಂದೆ.

೨೬

ಕರೆ ಬಂದ ಊರಿಗೆ ಹೋಗಿ ಕೊಂಡಾಡಿದೆ
ಕನ್ನಡನಾಡಿನೈಸಿರಿಯ
ಮನಕಿನಿದಾಗುವಂತೈದೆ ಬಿತ್ತರಿಸಿದೆ
ಕನ್ನಡ ನುಡಿಯ ಆ ಸವಿಯ.

೨೭

ಸಾಹಿತ್ಯವೊಂದೆಯೆ ನನ್ನ ಸಂಜೀವಿನಿ
ಅದೆ ನನ್ನ ತಾರಕ ಶಕ್ತಿ
ಮಿತ್ರ ಸಲ್ಲಾಪವೆ ಚಿತ್ತಕಾಹ್ಲಾದಿನಿ
ಅದರಿಂದಲೆಯೇ ನನ್ನ ಮುಕ್ತಿ.

೨೮

ಮತ್ತೆಮರುಕಳಿಸಿತು ಹಳೆಯ ಆ ರೋಗವು
ಕೆಟ್ಟಿತಾರೋಗ್ಯವು ಬೇಗ
ಸಲಸಲಕೀತೆರನಪ್ಪುದು ಚೋದ್ಯವು
ನಾನೆ ಮಂಕಾದೆನು ಆಗ.

೨೯

ಮಡಕೇರಿ ಮಂಗಳೂರುಡುಪಿ ಧರ್ಮಸ್ಥಳ
ಬೇಲೂರು ಹಳೆಬೀಡು ಎಂದು
ಸುತ್ತಾಡಿ ಬಂದೆವು ಹತ್ತಾರು ಕಡೆಗಳ
ಮನಕೆ ನೆಮ್ಮದಿಯಾಗಲೆಂದು.

೩೦

ಲೆಕ್ಕಣಿಯನು ಬಿಟ್ಟು ಸೌಟನು ಹಿಡಿದೆನು
ಒಕ್ಕಣೆ ನಿಂತಿತು ಹೀಗೆ
ಹೊತ್ತಿಗೆಯನು ಮುಚ್ಚಿ ಒಲೆಯ ಹೊತ್ತಿಸಿದೆನು
ಓದಿಗೆ ಮುಗಿತಾಯವಾಗೆ.

೩೧

ಬೆಂಗಳೂರಿಗೆ ಹೋದೆ ಧಾರವಾಡಕೆ ಹೋದೆ
ಮಡದಿ ಮಕ್ಕಳ ಕೂಡಿ ರಜೆಗೆ
ಪುಣೆಗೆ ಬೊಂಬಾಯಿಗೆ ಹೋದೆವಾನಂದದೆ
ವಿಹರಿಸಲೆಂದು ಬೇಸಿಗೆಗೆ.

೩೨

ಏನಾದರೇನಂತೆ ಮೊದಲಿನಂತೆಯೆ ಕಾಂತೆ
ಬಗೆಯೊಳು ಬೆಂಡಾದಳಂತೆ
ಮತ್ತೆ ನಾ ಬವಣೆಗೆ ಗುರಿಯಾದೆನೋರಂತೆ
ಕವಿಯಿತು ನನ್ನನು ಚಿಂತೆ.

೩೩

ಬಾಳಿನ ನಿತ್ಯದ ಕಥೆಯಾಯಿತೀ ಮಾತು
ಸುಯ್ಲಿನ ದನಿಯೆಬ್ಬಿಸಿದೆನು
ಆದರು ಮತ್ತೆ ಕಂಗೆಡದೆಯೆ ನಾನೋತು
ಆರೈದೆ ಮಡದಿ ಮಕ್ಕಳನು.

೩೪

ಮುಂದೇನು ತೋಚದೆ ದೈವವೆ ಶರಣೆಂದೆ
ಭವರೋಗ ವೈದ್ಯನನೆರೆದೆ
ಗುಣಪಡಿಸೆನ್ನಿನಿಯಳ ರುಜೆಯಿದನಿಂದೆ
ಸಲಿಸುವೆ ಹರಕೆಯನೆಂದೆ.

೩೫

ಕತ್ತಲು ಹರಿಯಿತೆ ಮುಂಬೆಳಗಾಯಿತೆ
ತಂಗಾಳಿ ತೀಡಿತೆ ಹೇಗೆ
ಭಾಗ್ಯವು ಚಕ್ರದ ಅರೆಗಳ ಸಾಲಂತೆ
ಮತ್ತೆ ಮೇಲೇರಿತೆ ಕೊನೆಗೆ.

೩೭

ಹರಕರುಣೋದಯವಾದರಸಾಧ್ಯವು
ತಾನೆಂಬುದಾವುದಿನ್ನುಂಟು
ಗೋಜುಗೋಜಾದುದು ನೇರಾಗಿ ಸಡಿಲುವು-
ದೊಡಸೆಯೆ ಕಗ್ಗದ ಗಂಟು.

೩೭

ಕದಡಿದ ಚಿತ್ತವು ತಿಳಿಯಿತು ಕತಕಕೆ
ತಾನಾಗಿ ತಿಳಿವಂತೆ ನೀರು
ಒಲಿದವರೊಲಿದರೆ ಅವನ ಸೌಭಾಗ್ಯಕೆ
ಆರುಂಟು ಬೆಲೆಗಟ್ಟುವವರು.

೩೮

ಮಧು ಮಧುರವು ನಮ್ಮ ಸಂಸಾರವೆನ್ನುವ
ಆನಂದದೀಯವಧಿಯೊಳು
ಪುಟ್ಟಿದನಣುಗನಿನ್ನೊಬ್ಬನು ಪ್ರೇಮ ವ-
ಲ್ಲರಿಯೊಳು ನಾಲ್ಕನೆಯರಳು.

೩೯

ನಾಲ್ವರೊಳಾದ್ಯಳು ನಾಗರತ್ನಳು ರಾಮ-
ಚಂದ್ರನು ಎರಡನೆಯವನು
ವತ್ಸಲ ಮೂರನೆಯವಳು ಪ್ರಕಾಶನು
ಮುದ್ದಿನ ನಾಲ್ಕನೆಯವನು.

೪೦

ಉಸಿರಿನ ಉಸಿರಾಗಿ ಕಣ್ಣಿನ ಕಣ್ಣಾಗಿ
ಜೀವದ ಜೀವವೆ ಆಗಿ
ಮುಂದಕೆ ಬರುತಿಹರಿವರು ಈ ನಾಲ್ವರು
ಮನೆಗೆ ಮಣಿ ದೀಪದಂತಹರು.

೪೧

ಸ್ವಂತಕೆ ಹೊಸಮನೆಯೊಂದನು ಕಟ್ಟಿದೆ
ಒಂಬತ್ತು ವರುಷದ ಹಿಂದೆ
ಮನೆಯೊಕ್ಕಲಿಗೆ ಬಂದರೂರವರೊಲವಿಂದೆ
ಅದೆ ಕಡೆ ದಸರವು ಎಂದೆ.

೪೨

ಸ್ನಾತಕೋತ್ತರ ತರಗತಿಗೆ ಕನ್ನಡವನು
ಬೋಧಿಸುವವಕಾಶವಾಗಿ
ತೋರಿದೆನೋದಿನೊಳಿನ್ನಷ್ಟು ಕಸುವನು
ವಾಣಿಯುಪಾಸಕನಾಗಿ.

೪೩

ಶಿಕ್ಷಣದೊಳು ಹೀಗೆ ಮೇಲುಮೇಲಕೆ ಸಾಗಿ
ಎಲ್ಲರ ಮೆಚ್ಚುಗೆ ಪಡೆದೆ
ಗುರುಜನರೆಸಗೇನನಿತ್ತರು ನಾ ಹೋಗಿ
ಶಿಷ್ಯರಿಗದನೆ ಬೋಧಿಸಿದೆ.

೪೪

ಮುಂದಿನ ಕಥೆಯನು ಹೇಳುವುದಾಗದು
ಅದು ತಲೆ ಕೆಡಿಸುವಂತಹುದು.
ನಲ್ಲೆಯು ಬಗೆಯಾಳದಾತಳಮುಳವಿಂದು
ಮತ್ತೊಮ್ಮೆಯುಕ್ಕಿತು ಕುದಿದು.

೪೫

ಮನೆಯೊಂದು ಮುರಿದರೆ ಮೊದಲಿಗಿಮ್ಮಡಿಯಹಾದಿ
ಮೆರೆವಂತೆ ಕಟ್ಟಿಸಬಹುದು.
ಮನವೊಂದು ಮುರಿದರೆ ಮೊದಲಿನಂತೊಂದಾದಿ
ತೋರ್ಪಂತೆ ಬೆಸೆಯುವುದರಿದು.

೪೬

ತಿಳಿಗೇಡಿ ಹೇಡಿಯು ಮನದ ಪೊಟ್ಟರೆಯೊಳು
ಒಮ್ಮೆ ಭೀತಿಯು ಹಕ್ಕಿ ಹೊಗಲು
ನೂರಾರು ಶಂಕೆಯ ಕಸಕಡ್ಡಿಗಳನೊಟ್ಟಿ
ನೆಲೆನಿಲುವುದು ಗೂಡುಕಟ್ಟಿ.

೪೭

ಹತ್ತಾರು ವರುಷದ ಹಿಂದಿನ ನೆನಹೊಂದು
ಚಿತ್ತದೊಳೊತ್ತುವುದೆಂದು
ದಿಕ್ಕುಗೇಡಿಯ ಹಾಗೆ ಏನೊಂದು ತೋಚದೆ
ಬವಳಿಗೊಂಡಳು ನಲ್ಲೆ ಬರಿದೆ.

೪೮

ಲೋಕವೆ ತಲೆಮೇಲೆ ಬಿದ್ದಿಹುದೆನುವಂತೆ
ವ್ಯಾಕುಲಗೊಂಡಳು ಕಾಂತೆ
ಬೇಕಾದ್ದು ಬರಲೆಂದು ಧೈರ್ಯದಿಂದಿದ್ದರು
ಕೆಮ್ಮನೆ ಸುಗಿದಳು ಭೀರು.

೪೯

ನಿಲಿಸುವೆನಿಲ್ಲಿಗೆ ಮುಗಿಯದ ನಲ್ಲೆಯು
ಬಗೆಯ ಆ ಬವಣೆಯ ವ್ಯಥೆಯು
ಬರೆಯಬುವೆನೆನ್ನ ಮಾನಸದ ಗಂಗೋತ್ರಿಯು
ಕರ್ಣಪೀಯೂಷದ ಕತೆಯು.

೫೦

ಕಾಳಿದಾಸನ ಕೃತಿಗಳನು ಕನ್ನಡಿಸಿದೆ
ಹೊಸ ಸಂಪುಟವನು ಹೊರತಂದೆ
ಆ ಭರ್ತೃಹರಿ ಅಮರು ಜಯದೇವ ಹಾಲಾದಿ–
ಗಳನನುವದಿಸಿದೆನೋದಿ.

೫೧

ಕನ್ನಡಕವಿ ರಸಋಷಿ ಕುಲಪತಿಯಾಗಿ
ಅಧಿಕಾರದೊಳು ಬಂದ ದಿನದೆ
ಮಾನಸಗಂಗೋತ್ರಿ ತಪದ ಸತ್ಫಲವಾಗಿ
ಮೂಡಿತು ಆತನ ಮನದೆ.

೫೨

ಮುಂದಿನ ನಾಲ್ಕೈದು ವರ್ಷದೊಳೋರಂತೆ
ಮಾನಸಗಂಗೋತ್ರಿ ಬೆಳೆದು
ರಂಜಿಸತೊಡಗಿತು ದಿನದಿನ ಕಳೆದಂತೆ
ಜ್ಞಾನಸತ್ರದ ರೂಪು ತಳೆದು.

೫೩

ಶೋಧನವೆನುವ ಶಿಲಾತಲತಲದೊಳು
ತಿಳಿವಿನ ಶೀತಲ ಜಲವು
ಸೆಲೆಯೊಡೆದುಗುತಂದು ಮನವೆಂಬ ಕೊಳದೊಳು
ತುಂಬುವುದಿದು ಪುಣ್ಯಫಲವು.

೫೪

ಲೇಖನ ಭಾಷಣಗಳ ಭಗೀರಥರತಿ–
ಚತುರರು ನೂರಾರು ಬುಧರು
ಜ್ಞಾನ ತೀರ್ಥವನಿದನೆಲ್ಲರ ಸನ್ಮತಿ
ಗೊಯ್ಯುವರು ತೃಷೆಯನಿಂಗಿಪರು.

೫೫

ಇಂಥ ಗಂಗೋತ್ರಿಯೊಳಾನು ಅಧ್ಯಾಪಕ–
ನಾದೆನು ಹಂಗಾಮಿಯಾಗಿ
ಸ್ನಾತಕೋತ್ತರ ತನಗತಿಯೊಳು ಶಿಕ್ಷಕ-
ನೆನಿಸಿದೆನಲ್ಲಿಗೆ ಹೋಗಿ.

೫೬

ಮತ್ತೆ ಮಹಾರಾಜ ಕಾಲೇಜಿಗೈತಂದೆ-
ನರುದಿಂಗಳವಧಿಯ ಕೊನೆಗೆ
ಮರಳಿ ಸೇವಂಕವಾಗಿ ಗಂಗೋತ್ರಿಗೈದಿದೆ
ಬಂದೆನು ತಿರುಗಿ ಈ ನೆಲೆಗೆ.

೫೭

ಗಂಗೋತ್ರಿಯೊಳು ಹೋಗಿ ಕೊನೆಗೊಮ್ಮೆ ನೆಲೆನಿಂತೆ–
ನೊಂಬತ್ತು ತಿಂಗಳ ಹಿಂದೆ
ಶೋಧನ ಬೋಧನ ಕಾಯಕವನು ನೋಂತೆ
ಕೈವಲ್ಯವಾಯಿತು ಎಂದೆ.

೫೮

ಶಿಕ್ಷಕವೃತ್ತಿಯ ಪಾವನ ಯಾತ್ರೆಯ
ಕೊನೆಮೆಟ್ಟಿಲನು ಹತ್ತಿನಿಂದೆ
ಹೆಮ್ಮೆಯ ಮೈಸೂರು ವಿಶ್ವವಿದ್ಯಾಲಯ
ತನ್ನ ಕಂದನನೆತ್ತಿತೆಂದೆ.

೫೯

ಕನ್ನಡ ದೇವಿಯ ಉಜ್ವಲ ಭಕ್ತರು
ದಕ್ಷರು ಶಿಕ್ಷಕೋತ್ತಮರು
ನುತರು ಜವರೇಗೌಡರೆನ್ನ ಸನ್ಮಿತ್ರರು
ಅಲ್ಲಿ ಪ್ರಾಧ್ಯಾಪಕರಿಹರು.

೬೦

ಬೋಧನ ಶೋಧನ ಸತ್ವಸಮರ್ಥರೆ
ಎಲ್ಲರು ಗುರುವರ್ಗದವರು
ಕನ್ನಡ ಶಾಖೆಯ ಭವ್ಯಪರಂಪರೆ–
ಗೊಪ್ಪುವ ಗುಣವಿರುವವರು.

೬೧

ಬುದ್ಧಿಗೆ ಭಾವಕೆ ದೊರೆವುದಾಹಾರವು
ಗಂಗೋತ್ರಿಗೈತಂದ ಜನಕೆ
ಈ ಜ್ಞಾನ ಸತ್ರವು ಘನವು ಗಂಭೀರವು
ಪುಷ್ಟಿತುಷ್ಟಿಗಳುಂಟು ಮನಕೆ.

೬೨

ಮನೆಯೊಳು ಕಷ್ಟಗಳೆಷ್ಟಿದ್ದರೇನಂತೆ
ಮಠದೊಳು ಸುಖವಾಯಿತೆನಗೆ
ತನುವೊಳು ಜಾಡ್ಯಗಳೆಷ್ಟಿದ್ದರೇನಂತೆ
ಮನದೊಳು ಗೆಲುವಾಯಿತೆನಗೆ.

೬೩

ಕಾವ್ಯಸಾಮ್ರಾಜ್ಞಿಯ ಓಲಗಶಾಲೆಯ
ಪುಗುವಂದು ದೊರಕಿತಭಯವು
ವಿಶ್ವಕವೀಂದ್ರರ ಸಸ್ನೇಹ ಪರಿಚಯ-
ವಾದೆನಗಿನ್ನಾವ ಭಯವು.

೬೪

ಒಲೆಯ ಮುಂದಿರುವಾಗ ತಲೆಯೊಳು ಸುಳಿವುದು
ಪಂಪನ ಪದ್ಯವದೊಂದು
ಮಕ್ಕಳಿಗೆರೆವಾಗ ಮನ ಮುಡಿಗೊಳುವುದು
ಕಾವ್ಯಗಂಗೆಯ ಬಿಂದುವಿಳಿದು.

೬೫

ಅಕ್ಕಿಯ ಕೈ ಕರ್ಚುತಿರುವಾಗ ಒಗೆಕರ್ಚು-
ವುದು ಕಾಳಿದಾಸನ ಅಡಿಯ
ದುಡಿದು ಮೈಸೋತಿತೆಂದೆನುವಾಗ ಮನ ಪೆರ್ಚು-
ವುದು ನೆನೆದಾತನ ನುಡಿಯ.

೬೬

ಸಾಹಿತ್ಯವನು ಕಂಡೆ ಸಂಸಾರದೊಳು ಹೀಗೆ
ಸಾಂಗತ್ಯವಾಗಿಸಿ ಕೊನೆಗೆ
ಇಲ್ಲದೆ ಹೋದರೆ ಉಸಿರಾಡುವುದು ಹೇಗೆ
ಹೊಗೆಗಟ್ಟಿದೀ ಗೂಡಿನೊಳಗೆ.

೬೭

ಪದವಿಯ ಮೂರನೆ ವರ್ಷದೊಳಿರುವಳು
ಹಿರಿಯವಳೊಬ್ಬಳು ಮಗಳು
ಹತ್ತನೆ ವರ್ಗದೊಳೋದುತಲಿರುವಳು
ಕಿರಿಯಳು ಪ್ರೌಢಶಾಲೆಯೊಳು.

೬೮

ಪದವಿಯ ಪೂರ್ವದೊಳಿಹ ತರಗತಿಯೊಳು
ಹಿರಿಯವನೋದುತಲಿಹನು.
ಆ ಪ್ರಾಥಮಿಕ ನಾಲ್ಕನೆಯ ತರಗತಿಯೊಳು
ಕಿರಿಯವನೋದುತಲಿಹನು.

೬೯

ಬೆಳೆಯಲಿ ಬಾಳಲಿ ಬೆಳಗಲಿ ತೊಳಗಲಿ
ಅವರು ವಿದ್ಯಾವಂತರಾಗಿ
ಆಯುರಾರೋಗ್ಯಾದಿ ಭಾಗ್ಯವ ಪಡೆಯಲಿ
ಮೆರೆಯಲಿ ಸಿರಿವಂತರಾಗಿ.

೭೦

ಶಿಕ್ಷಕ ವೃತ್ತಿಯೊಳೀವರ್ಷವೆನಗಿದು
ಬೆಳ್ಳಿಯ ಹಬ್ಬದ ವರ್ಷ
ಗೃಹಿಯಾಗಿ ಸಹ ಸಂದಿತಿಂದಿಗಿಪ್ಪತ್ತೈದು
ಅದರಿನಿಮ್ಮಡಿಸಿದೆ ಹರ್ಷ.

೭೧

ಇಂಥ ಉತ್ಸವದೊಳು ದೇವರನೆರೆಯುತೆ
ಸತಿಸುತರನು ಸಲಹೆಂದು
ಬೆಳ್ಳಿಯ ನೆನಪಿನ ಗುರುತಿಗಿದೆನುವಂತೆ
ಈ ಕೃತಿಯನು ತಂದೆನಿಂದು.

೭೨

ನಮಗೀಗ ಹಿರಿಯರು ಚಿಕ್ಕಪ್ಪನಿರುವರು
ನಮ್ಮ ತಂದೆಯ ತಮ್ಮನವರು
ಮುಪ್ಪಿನ ಮುಪ್ಪಿನೊಳಿರುವರಿಂದಾದರು
ಆತ್ಮ ತೇಜೋನ್ವಿತರವರು.

೭೩

ಮಗನೊಡನಿರುವರು ನಮ್ಮ ಕಕ್ಕಂದಿರು
ಬೆಂಗಳೂರಿನ ಮನೆಯಲ್ಲಿ
ಮನವಿಹುದಾದರು ಮಗಳು ಅಳಿಯಂದಿರು
ಬಾಳುವ ಶೃಂಗೇರಿಯಲ್ಲಿ.

೭೪

ಅವರ ಕುಮಾರನು ಸಂಗೀತಗಾರನು
ಹೆಸರು ಲಕ್ಷ್ಮಣಶಾಸ್ತ್ರಿಯೆಂದು
ಸಂಗೀತ ಶಿಕ್ಷಕನಾಗಿ ವಿಖ್ಯಾತನು
ಬಹುದೊಡ್ಡ ವಿದ್ವಾಂಸನಿಂದು.

೭೫

ಮಗಳು ಕಮಲಮ್ಮನು ಶೃಂಗೇರಿಯೂರೊಳು
ಗಂಡನ ಮನೆಯೊಳಗಿಹಳು
ಖ್ಯಾತರು ಲಕ್ಷ್ಮೀನಾರಾಯಣಾಖ್ಯರು
ಆಕೆಯ ಯಜಮಾನವರು.

೭೬

ಹಿರಿಯವನವರಣುಗನು ಸುಬ್ರಹ್ಮಣ್ಯನು
ಅಭಿನಯ ಚತುರನು ನಟನು
ಪಡೆದಿಹನಾತನು ಓದಿ ಕನ್ನಡವನು
ಸ್ನಾತಕೋತ್ತರಪದವಿಯನು.

೭೭

ಓದುತಲಿರುವರು ಮತ್ತಿನ ಮಕ್ಕಳು
ಊರಿನ ಪ್ರೌಢಶಾಲೆಯೊಳು
ಆಕೆಯ ಕಂಡರೆ ಚಿಕ್ಕಂದಿನಿಂದಲು
ನನಗೆ ಅಕ್ಕರೆ ಬಹುಮಿಗಿಲು.

೭೮

ಶ್ರೀ ಲಕ್ಷ್ಮಿಯೆನುವವಳವಳಕ್ಕನೊಬ್ಬಳು
ವರ್ಷಗಳಾದವು ಹೋಗಿ
ಆ ಗುಣವಂತೆಯ ನೆನೆದೊಡನೆನಗಳು–
ಬರುವುದು, ಅವಳಂಥ ತಂಗಿ.

೭೯

ಮೂರುವರ್ಷದ ಹಿಂದೆ ಕಡೆಯುಸಿರೆಳೆವರು
ನಾದಿನಿ ಸೀತಮ್ಮನವರು.
ಮುಂದೊಂದು ವರ್ಷಕೆ ನನಗಿಲ್ಲವಾದರು
ಆ ನನ್ನ ಚಿಕ್ಕಮ್ಮನವರು.

೮೦

ಬಹು ಸಾವು ಕಂಡೆನು ಬಹು ನೋವನುಂಡೆನು
ಒಳಲಿ ಬೆಂಡಾದೆನು ನಾನು
ಸತ್ತವರಿಗೆ ಅತ್ತು ಸಾಕಾಯಿತತ್ತರು
ಬಾರದು ಈಗ ಕಣ್ಣೀರು.

೮೧

ನಂಟರು ಹೋದರು ಇಷ್ಟರು ಹೋದರು
ಹೋದರು ಗೆಳೆಯರಾದವರು
ಗುರು ಜನವಳಿದರು ಹಿರಿಜನ ಸಂದರು
ಹೋದರು ಮುತ್ತಿನಂಥವರು.

೮೨

ಮಡದಿಯನಾರೈವೆ ಮಕ್ಕಳಿಗುಣಿಸೀವೆ
ಬಂದವರನು ನೋಡಿಕೊಳುವೆ
ಮನೆಯೆ ತಪೋವನ ಪೂಜೆ ಗೃಹಕೃತ್ಯವೆ
ದೇವರಿಗಿದೆ ನನ್ನ ಸೇವೆ.

೮೩

ಎಡೆದೊಳೆ ಹೋದರು ಹೇ ಬಾಜು ಎಂದರು
ಎಚ್ಚರದೊಳೆ ನಡಸಿದರು
ನನ್ನ ಬಾಳಿನ ಗಾಡಿಗಪಘಾತವೆನುವುದು
ನಿತ್ಯದ ಮಾತಾಯಿತಿಂದು.

೮೪

ಸಂಸಾರದೊರಳಿಗೆ ವಿಧಿ ರುಬ್ಬುಗುಂಡಾಗಿ
ಚಟ್ನಿಮಾಡಿದನೆನ್ನ ತಿರುವಿ
ತಿರುವಿದರಿನ್ನಿಷ್ಟು ಹೋದೀತು ಹಾಳಾಗಿ
ಧರ್ಮಣೆ ನೀನೇದು ಬರುವಿ.

೮೫

ಬ್ರಹ್ಮಚಾರಿಯು ಹಾಗೆ ಸುಖವು ಒಬ್ಬಂಟಿಗ-
ನವನಿಗೆ ಸಂಸಾರ ವಿರಳ
ದುಃಖವು ಬಹುದೊಡ್ಡ ಸಂಸಾರವಂದಿಗ
ಹೆಂಡಿರು ಮಕ್ಕಳು ಬಹಳ.

೮೬

ಎದುವರೆಗೆಮಗನುಕೂಲವು ದೈವವು
ಅದುವರೆಗೆಮಗೆ ಪೌರುಷವು
ಎಂದಿಗೆ ದೈವವು–ವಿಪರೀತವಾಗುವು–
ದಂದಿಗೆ ಗಂಡರೆ ನಾವು.

೮೭

ಕೇವಲ ಮಾನವ ಯತ್ನದೊಳೇನಿದೆ
ದೈವದ ಸಹಕಾರವಿರದೆ
ಒಂದೆತ್ತು ಎಳೆದರೆ ಬಂಡಿಯು ಹೋಹುದೆ
ಮತ್ತೊಂದು ಎತ್ತಡಿಯಿಡದೆ.

೮೮

ಬಾಳಿನ ಹಿನ್ನೆಲೆ ತಿಳಿದಿದ್ದರೊಳ್ಳಿತು
ನನೆಲ್ಲ ಗೆಳೆಯರಿಗೆನಲು
ತುಸು ನೀಳವಾಗಿಯೆ ಮನದೊಳು ಮೂಡಿತು
ಪೂರ್ವೇತಿಹಾಸದ ನೆಳಲು.

೮೯

ಬರಿ ನೆಳಲಾದರೆ ಕವಿವುದು ಕತ್ತಲು
ನೆಳಲಿನ ಜೊತೆಗಿದೆ ಬೆಳಕು
ಬೆಳಕು ಕತ್ತಲುಗಳು ಮುತ್ತಿಹವತ್ತಲು
ಸುತ್ತಲು ಮುಗಿಲಿಗು ನೆಲಕು.

೯೦

ನೆಳಲೊಳು ಕತ್ತಲ ಮರೆಯೊಳು ಕುಳಿತಿದ್ದು
ಚಲನಚಿತ್ರವ ನೋಳ್ಪ ಹಾಗೆ
ಬೆಳಕೊಳು ಹಗಲಿನ ಥಾಳದೊಳಿರುತಿದ್ದು
ನೋಡಲು ಆದೀತೆ ನಿಮಗೆ.

೯೧

ಕೆಲರು ವಸಂತವ ಲೆಕ್ಕವನಿಡುವರು
ಶರದವನೆಣಿಪರು ಕೆಲರು
ಮಳೆಗಾಲಗಳನೆಣಿಸುವ ಪರಿಪಾಟವು
ನನ್ನದು ನನಗಿದು ಹಿತವು.

೯೨

ಕೊಳೆ ಹೋಗಿ ಕಸ ಕೊಚ್ಚಿ ಹೊಸ ನೀರು ಒರುವುದು
ತರುವುದು ತಂಪನು ನೆಲಕೆ
ಮಳೆ ಬಿಸಿಲುಗಳಾಡಿ ಹರುಷವನೆರೆವುದು
ಇಂದ್ರಚಾಪವು ಮೂಡಿ ಮನಕೆ.

೯೩

ನೋಡಿಹೆನೈವತ್ತು ಮಳೆಗಾಲವನು ನಾನು
ಕೊಸರಿಗೆ ಸಂದಿಶಿನ್ನೊಂದು
ಗುಡಗಿನ ಮಿಂಚಿನ ಸಿಡಿಲಿನ ಮಳೆಯನು
ಕಂಡುಂಡು ದಣಿದಿಹೆನಿಂದು.

೯೪

ಬಾಳಿನ ಹಾಳೆಯ ಹಿಂದಿನ ಪುಟಗಳು
ಅಚ್ಚಾಗಿ ಸ್ಮೃತಿಪಟಲದೊಳು
ಏಳು ಬಣ್ಣಗಳಾಗಿ ಮೂಡಿತು ಕೃತಿ ಹೀಗೆ
ಮುಂದಾಗಿ ಹೃನ್ಮನಗಳಿಗೆ.

೯೫

ಕಂಬಳಿ ಹುಳುವಿನ ಗುರುತು ಭೂಪಟದೊಳು
ಸಂಕೇತವದ್ರಿಗೆ ಹೇಗೆ
ಸಾಂಗತ್ಯದೊಳು ಬಂದ ಇಂಥ ಸಂಗತಿಗಳು
ಬಾಳಿನ ಘಟನೆಗಳ ಹಾಗೆ.

೯೬

ಮನದ ಪೈರೊಳು ಹಚ್ಚೆ ಹೊಯ್ದಂತೆ ಹಸುರಾಗಿ
ನಿಂತಂಥ ಸಂಗತಿಗಳನು
ಕೆಲವನು ಗುರುತಿಸಿ ಹೇಳಿದೆ ಹಾಡಾಗಿ
ಹೊಸರೀತಿ ಸಾಂಗತ್ಯಗಳನು.

೯೭

ಅಲ್ಲೊಬ್ಬನಿಲ್ಲೊಬ್ಬ ಆನೆಯ ಮುಟ್ಟಿದ
ಕುರುಡರ ಕಥೆ ಮಾಡಬೇಡಿ
ಓರಂತೆ ಓದದೆ ಆದ್ಯಂತವಾಗಿದ–
ನುಂತೆ ನೀಂ ಶಂಕಿಸಬೇಡಿ.

೯೮

ಜ್ಞಾನದ ವಾರ್ಧಿಗೆ ಕಟ್ಟಲಿ ಕಟ್ಟೆಯ
ನಳ ನೀಲ ಹನುಮರ್ಮೈತರಲಿ
ಮಳಲಿನ ಸೇವೆಯು ಅಳಿಲಿನ ಭಕ್ತಿಯು
ನನ್ನ ಕೈಂಕರ್ಯವುಮಿರಲಿ.

೯೯

ನಾಡಿದು ಗೆಲ್ಲಲಿ ನುಡಿಯಿದು ಗೆಲ್ಲಲಿ
ಗೆಲ್ಲಲಿ ಕನ್ನಡ ಜನವು
ಗೆಲ್ಲಲಿ ಸತ್ಯವು ಗೆಲ್ಲಲಿ ಧರ್ಮವು
ಗೆಲ್ಲಲಿ ಕನ್ನಡತನವು.

೧೦೦

ಶಾಂತಿಸಂತೋಷಗಳೊದಗಿ ಬರಲೆನ್ನುವೆ
ತುಷ್ಟಿ ಪುಷ್ಟಿಗಳಾಗಲೆನುವೆ
ಸರ್ವರಿಗಮೃತವು ದೊರೆಯಲೆಂದೆನ್ನುವೆ
ದೇವರ ದಯವಾಗಲೆನುವೆ.

ನಾಲ್ಕನೆಯ ನೂರು

೧

ಲೋಕಸನ್ಮಾನ್ಯನು ಆ ಮಂಕುತಿಮ್ಮನು
ಅನುಭಾವಿ ಕವಿ ತತ್ವವಿದನು
ಕಾವ್ಯದ ಮಾತೊಳು ನೀತಿಯನೊರೆದನು
ಅವನಡಿಗಳಿಗೆರಗುವೆನು.

೨

ಮನವೆ ಬಾನಂಗಳ ದುಗುಡವೆ ಮಳೆಮೋಡ
ಕವಿಗಣ ಸೂಕ್ತಿಯೆ ದಿನಪ
ಮೂಡಿತು ಮಳೆ ಬಿಸಿಲಿನ ಮೇಳದೊಳು ನೋಡ
ಕವಿತೆಯ ಈ ಇಂದ್ರಚಾಪ.

೩

ಹಲವು ಹಾಡಿನ ಹಕ್ಕಿ ಹಲವು ಭಾವದ ಹಕ್ಕಿ
ಬಂದಿಲ್ಲಿ ಬೀಡನು ಬಿಟ್ಟು
ಚಿಲಿಪಿಲಿಯೆನುತಿವೆ ಮರಿಯಿಕ್ಕಿ ಮುದವುಕ್ಕಿ
ಕೃತಿಯಿಂದು 'ರಂಗನತಿಟ್ಟು.'

೪

ಕೆಲವಕೆ ದನಿ ಚಂದ ಕೆಲವಕೆ ಗರಿ ಚಂದ
ಕೆಲವಕೆ ರಂಕೆಯೆ ಚಂದ
ಒಂದೊಂದು ಹಕ್ಕಿಯೊಳೊಂದೊಂದು ತೆರದಂದ
ನೋಡಿ ನಲಿದಾಡೆಲೆ ಕಂದ.

೫

ಪೆರವರ ಬರಹದೊಳಿರುವ ಸಂಗತಿಗಳು
ಮನ್ಮತಿಯನು ಬೆಳಗುವುವು
ಕತ್ತಲು ಹೋಹುದು ತೆರೆದ ಹೊತ್ತಗೆಯೊಳು
ನಲಿವುದು ಬೆಳಕಿಗೆ ಮನವು.

೬

ಕಾವ್ಯದ ಮಾತಾಗಿ ನವಸುಭಾಷಿತವಾಗಿ
ಸುಂದರ ಸಾಮತಿಯಾಗಿ
ನೀತಿಯನೊರೆವೆನು ಸುಕುಮಾರಮತಿಗಾಗಿ
ಗುಡಜಿಹ್ವಿಕಾನ್ಯಾಯವಾಗಿ

೭

ಅನ್ಯಭಾಷೆಯ ಸೂಕ್ತಿ ಹಲವು ಬಂದಿಹವಿಲ್ಲಿ
ನನ್ನವು ಕೆಲವಿಹವಿಲ್ಲಿ
ಮುನ್ನಿನಾರ್ಯರ ಮಾತು ಚೆನ್ನ ಕನ್ನಡದಲ್ಲಿ
ನನ್ನಿಂದಲಳವಟ್ಟುದಿಲ್ಲಿ.

೮

ಸಾಂಗತ್ಯವಾಗಿದೆ ಗಾದೆಯ ಮಾತಿಲ್ಲಿ
ಬೆರೆತಿಹುದನುಭವವಿಲ್ಲಿ
ಹಾಸ್ಯದ ರಸಜೇನು ಒಸರುತಲಿಹುದಿಲ್ಲಿ
ಶೃಂಗಾರ ಕಟ್ಟಿಹುದಿಲ್ಲಿ.

೯

ಬೆಳ್ಳಿಯ ದೇಗುಲ ಚಿನ್ನದ ಬಾಗಿಲು
ಒಳಗಡೆ ಬಹು ಮುತ್ತುರತ್ನ
ಬೀಗದ ಕೈ ತಂದು ಬಾಗಿಲು ತೆರೆಯಲು
ನೀನೊಮ್ಮೆ ಮಾಡು ಪ್ರಯತ್ನ.

೧೦

ಅನುವಾದವೆನಲಾರೆ ಅಲ್ಲವೆಂದೆನಲಾರೆ
ಮನಸಿಗೆ ಒಪ್ಪಿಗೆಯಾಗೆ
ಪ್ರಾಸವ ಕೂಡಿಸಿ ಬರೆದೆ ನಾ ಮನಸಾರೆ
ತ್ರಾಸವಾಗದ ಹಾಗೆ ಹೀಗೆ.

೧೧

ನೂರಾರು ಬರೆದೆನು: ಮೂರಾದರೂ ನಿಮ-
　ಗೊಪ್ಪಿಗೆಯಾದರೆ ಸಾಕು
ಅರಿತವರೊಮ್ಮೆ ತಲೆದೂಗಿದರಿನ್ನೆಮ-
　ಗದಕಿಂತ ಹೆಚ್ಚೇನು ಬೇಕು.

೧೨

ನೀನೂದಿ ತೋರದೆ ಹೋದರೆ ಏನಿದೆ
　ಇದು ಒಂದು ಬಿದಿರಿನ ಕೊಳಲು
ನಾನೂದಿ ನೋಡಿದೆ ಹೋಯೆಂಬ ಸುಯ್ಯೊಂದೆ
　ನಾಚುವೆ ಹೀಗೆಂದುಕೊಳಲು.

೧೩

ಬೇಲದ ಗಾತ್ರದ ತಮ್ಮಡೆ ಹರಕನು
　ನೋಡದೆ ಮುಚ್ಚದೆ ಖಳರು
ಸಾಸಿವೆಕಾಳಿನ ಹೆರರುಡೆ ಹರಕನು
　ನೆರೆನೋಡಿ ನಗೆಯಾಡಿದಪರು.

೧೪

ವಿದ್ಯೆಯು ಶೃಂಗಾರವಿದ್ದರು ಖಳರನು
　ದೂರದೊಳಿಡಿ ನೀವು ನಮಿಸಿ
ಹೆಡೆಯೊಳು ರತ್ನವೆ ಇದ್ದರು ಹಾವನು
　ನಲಿವಂತೆ ನಾವು ಪರಿಹರಿಸಿ.

೧೫

ಕವನವನೊಂದನು ಕವಿ ವಿರಚಿಸುವನು
　ಲಾಲಿಪರುತ್ತಮರದನು
ಗಿಡವು ಹೂ ಬಿಡುವುದು ಹೂವಿನ ಕಂಪನು
　ಸವಿವನು ಒಯ್ಯು ಮಾರುತನು.

೧೬

ಭುವನದ ಭಾಗ್ಯವು ಬಿರಿಬಿರಿ ಬಿರಿದಾಗ
ಕವಿ ರಚಿಪನು ತನ್ನ ಕೃತಿಯ
ರಸಿಕರ ಮನವುಕ್ಕಿ ತೆರೆತೆರೆ ಹರಿದಾಗ
ಕೃತಿ ಪಡೆವುದು ಸಫಲತೆಯ.

೧೭

ನಲಿಯರು ಕುಜನರು ರಸಿಕರು ನಲಿವಂತೆ
ಕವಿಯ ಸುಭಾಷಿತ ಕೇಳಿ
ಚಂದ್ರನ ಉದಯಕೆ ಕಡಲುಕ್ಕಿ ಮೊರೆವಂತೆ
ಕೆರೆಯುಕ್ಕಿ ಮೊರೆವುದೆ ಹೇಳಿ.

೧೮

ಮತ್ತಿನ ಕರ್ಮಫಲಂಗಳ ಮನಸಾರೆ
ಬ್ರಹ್ಮನೆ ಬರೆ ಸಹಿಸುವೆನು
ಅರಸಿಕರೆದುರೊಳು ಕೃತಿಯನೊಪ್ಪಿಸಲಾರೆ
ಹಣೆಯೊಳು ಬರೆಯದಿರಿದನು.

೧೯

ವಿಬುಧರು ಧರೆಯೊಳು ನೀತಿಯನೊರೆದರು
ಐವತ್ತು ಶತಮಾನದಿಂದೆ
ಮುಂದೆ ಮತ್ತೈವತ್ತು ಶತಮಾನ ಸಂದರು
ಜನರಿರ್ಪರಂದಿನ ತೆರದೆ.

೨೦

ರಮಣೀಯವಾದೊಂದು ರತ್ನಭೂಷಣದಿಂದೆ
ಭಾಮಿನಿ ಶೋಭಿಸುವಂತೆ
ಧ್ವನಿರಮ್ಯವಾದೊಂದೆ ಪದವನಿಟ್ಟುದರಿಂದೆ
ಕವಿವಾಣಿ ಶೋಭಿಪುದಲ್ತೆ.

೨೧

ಸರಿಯಲ್ಲವೀದಾರಿ ನಿನಗೆಂದು ಶುನಿಯೊಂದು
ಬೊಗಳಿದರೆನಗೇಕೆ ಚಿಂತೆ
ಮತ್ತೊಂದು ಶುನಿಯದಕುತ್ತರವೀವುದು
ನಾ ದಾರಿನಡೆವೆನೋರಂತೆ.

೨೨

ಸುಂದರ ಕೃತಿಯೊಳು ಕುಂದಿರುವೆಡೆಯೊಳೆ
ಬೆರಳಿಡುವವನು ನೋಡು ಖಳನು
ಸುಂದರ ವಪುವೊಳು ವ್ರಣವಿರುವೆಡೆಯೊಳೆ
ಕುಳಿತುಕೊಳ್ವುದು ನೋಡು ನೊಳನು.

೨೩

ಕರ್ಣರಸಾಯನವೆನಿಸುವ ಕೃತಿಯೊಳು
ದೋಷೈಕ ದೃಷ್ಟಿಯು ಖಳರು
ಮುಳ್ಳನೆ ಸವಿಯುವ ಒಂಟೆಯು ತೆರೆದೊಳು
ಕುಂದನೆ ಪರಿಗಣಿಸುವರು.

೨೪

ತನ್ನನು ಹೊಗಳನು ಹೆರರನು ತೆಗಳನು
ಆಡನು ಬಿರುನುಡಿಗಳನು
ಕೇಡನು ಬಗೆಯನು ಕೋಡನು ಕೊಂಕನು
ಕರುಬನು ಸಭ್ಯನಾದವನು.

೨೫

ಸುಕವಿಯೆ ಬಲ್ಲನು ಮಿಕ್ಕವರರಿಯರು
ಸುಕವಿಯ ಕಾವ್ಯ ಮರ್ಮವನು
ಸ್ವರ್ಣಕಾರನೆ ಬಲ್ಲನುಳಿದವರರಿಯರು
ಚಿನ್ನದ ಚಿತ್ರ ಕರ್ಮವನು.

೨೬

ಹೊಸತನು ಹಾಡುವುದೆನ್ನಿಂದಲಾಗದು
ಹೊಸತಾವುದಿರುವುದು ಹೇಳು
ಈ ಜಗದೊಳಗಿಹುದೆಲ್ಲವು ಹಳೆಯದು
ನನ್ನ ಸುಭಾಷಿತ ಕೇಳು.

೨೭

ಈಗ ಈ ಹಕ್ಕಿಯು ಕೂಗಿದ ಸಿಳ್ಳೆಯ
ಕೇಳಿದೆಯಲ್ಲವೆ ನೀನು
ಸಿಳ್ಳೆಯ ಈ ದನಿ ಈ ಹಕ್ಕಿಯಜ್ಜಿಯ
ಕೊರಳಿನೊಳಿರಲಿಲ್ಲವೇನು.

೨೮

ತಾತನದೇ ಕಣ್ಣು ಅಬ್ಬೆಯದೇ ಬಣ್ಣ
ತಂದೆಯು ಹಾಗೆಯೆ ಗೂನು
ನಿನ್ನದು ಎನ್ನುವುದಾವುದು ಹೇಳಣ್ಣ
ಹಳಬನೊ ಹೊಸಬನೊ ನೀನು.

೨೯

ಬಾರೆಂದು ಕರೆದರೆ ಬರುವುದಿಲ್ಲೆನ್ನುವೆ
ಹೋಗೆಂದರೊಡನೆಯೆ ಬರುವೆ
ಚಂಡಿಯ ಕಥೆಯನು ನೆನಪಿಗೆ ನೀ ತರುವೆ
ಪ್ರತಿಭೆಯೆ ನಿನಗಿದು ತರವೆ.

೩೦

ತಾ ದೊಡ್ಡ ಕವಿಯಲ್ಲವಾದರು ಈತನು
ಅನ್ಯರ ತೆಗಳುವನಂತೆ
ತಾನಿರುವಂದಕೆ ಹಂದಿಯು ಮರಿಯನು
ಎಮ್ಮೆಯುಂ ಕರುವೇಡಿಪಂತೆ.

೩೧

ಅರಸಿಕರೆದುರೇಕೆ ಕವಿತೆಯನೋದುವೆ
ವ್ಯರ್ಥಸಾಹಸ ಬೇಡ ಮನವೆ
ಕೋಣನ ಮುಂದೇಕೆ ಕಿನ್ನರಿ ಮಿಡಿಯುವೆ
ಬೆರಳನು ನೋಯಿಸಿಕೊಳುವೆ.

೩೨

ಅಜ್ಞನಾದವನಿಗೆ ಕವಿತೆಯನೊರೆವುದು
ಹೆಣಕೆ ಕಚಕುಳಿ ಇಟ್ಟಹಾಗೆ
ರಸಿಕ ಶೇಖರನಿಗೆ ಕವಿತೆಯನೊರೆವುದು
ವೀಣೆ ತಂತಿಯ ಮಿಡಿದ ಹಾಗೆ.

೩೩

ಬೊಗಸೆಯೊಳಿರ ಹೂ ಕೈಗಳನೆರಡನು
ಪರಿಮಳಗೊಳಿಸುವುದಲ್ತೆ
ಎಡ ಬಲಗಳ ಭೇದವೆಣಿಸದಕ್ಕರೆಯನು
ಸುಮನಸರೆಮಗೀವರಲ್ತೆ.

೩೪

ಆಪತ್ತು ಬಂದರು ಬಂದರು ಸಂಪತ್ತು
ಬರ್ಪುದು ಮಹಿಮವಂತರಿಗೆ
ವೃದ್ಧಿಕ್ಷಯಂಗಳು ಚಂದ್ರಮಗಾದತ್ತು
ಆದತ್ತೆ ಬಡತಾರೆಗಳಿಗೆ.

೩೫

ದುಷ್ಟರ ಸಂಗದೊಳಳಿಯುವುದಿಲ್ಲವು
ಸಜ್ಜನರವಿಚಲ ಮನವು
ವಿಷಮಯವಾದೀತೆ ಚಂದನವೃಕ್ಷವು
ಘನಘೋರ ಸರ್ಪವೇಷ್ಟಿತವು.

೩೬

ವ್ಯಜನದವೋಲಿರ್ಪರಿಳೆಯೊಳು ಸುಜನರು
ಚಾರುವಂಶೋದ್ಭವರಿವರು
ಪರರ ಪರಿತಾಪವನಿರದೆ ಪರಿಹರಿಪರು
ಪರಿಪರಿ ತಿರುಗುತಲಿವರು.

೩೭

ನೆತ್ತಿ ಬಿರಿದರು ಚಂದ ದಂತ ಮುರಿದರು ಚಂದ
ಗಿರಿವಿದಾರಣದೊಳು ಕರಿಗೆ
ಗುರುತರ ಕಾರ್ಯದೊಳಪಯಶ ಸಹ ಚಂದ-
ವಪ್ಪುದು ಮಹಿಮವಂತರಿಗೆ.

೩೮

ಸ್ನೇಹವನೆಣಿಸನು ಗಣಿಸನು ಪಾತ್ರವ-
ನಂತೆ ದಶಾಂತರಗಳನು
ರತ್ನದೀಪದ ಹಾಗೆ ಲೋಕಹಿತಾರ್ಥವ
ಬಗೆದೆಸೆದಪನು ಉತ್ತಮನು.

೩೯

ಸುಧೆಯನೆ ಕರೆವುದು ಚಂದ್ರನ ಬಿಂಬವು
ವಿಷವನೆ ಸುರಿವುದು ಹಾವು
ತಣಿವಹುದಸುವಿಗೆ ಸಜ್ಜನರುದಯವು
ಖಳಜನರುದಯವು ಸಾವು.

೪೦

ಗುಣವುಂಟು ದೋಷವುಂಟೆಲ್ಲದರೊಳು ನೋಡು
ಇದರಿಂದಲಾಗಿದೆ ಸೃಷ್ಟಿ
ಗುಣವಿದು ದೋಷವಿದೆಂದು ನಿರ್ಣಯವಮಾಡು-
ವುದೆ ಎಲ್ಲ ಕಲೆಗಳ ದೃಷ್ಟಿ.

೪೧

ಆಯ್ದುಕೊಂಡರೆ ಸಾಕು ಸಾವಿರ ಬಿಡಿಗಳ-
ಲೊಬ್ಬೊಬ್ಬರೊಂದೊಂದರಂತೆ
ಸಂತೋಷಪಡುವೆನು ಸಾವಿರ ಜನಗಳ
ಮೆಚ್ಚಿಕೆಯನು ಪಡೆದಂತೆ.

೪೨

ಕತ್ತಿ ಕತ್ತರಿಯನು ಸಾಣೆಯು ಹಿಡಿವರು
ಸೂಜಿಯು ಚೂಪುಗೊಳಿಸುವರು
ಕಲ್ಲು ಮುಳ್ಳುಗಳನು ಮೊನಚುಗೊಳಿಸುವರಾರು
ಕಳ್ಳ ಸುಳ್ಳರ ಗುರುವಾರು.

೪೩

ನೋಡಿದೆವೇನೆಂದು ಕೇಳಿದೆವೇನೆಂದು
ಚಿಂತಿಪರುತ್ತಮೋತ್ತಮರು
ತಿನ್ನುವೆವೇನೆಂದು ಕುಡಿದಪೆವೇನೆಂದು
ಚಿಂತಿಪರಧಮರಾದವರು.

೪೪

ಎತ್ತಿನ ಗಾಡಿಯು ಕೆಳಗಡೆಯೊಳೆ ತೂರಿ
ಹೋಗುತಲಿದ್ದರು ಶುನಕ
ತಾನೆಯೆ ಗಾಡಿಯನೆಳೆಯುವೆನೆಂದಾರಿ
ಬಡಬಡಿಸುವುದು ಕೊನೆತನಕ.

೪೫

ಕತ್ತಿಯು ಬಾಯಿ ತಾ ಡೊಂಕಾದ ಮಾತ್ರಕೆ
ಕತ್ತರಿಸಿದ ಕಬ್ಬು ಡೊಂಕೆ
ಮತ್ತಿನ ಚಿತ್ತವು ಡೊಂಕಾದ ಮಾತ್ರಕೆ
ಬಿತ್ತರಿಸಿದ ಕಬ್ಬ ಕೊಂಕೆ.

೪೬

ನಾನಷ್ಟು ಹೇಳಿದೆ ನೀವಷ್ಟು ಹೇಳಿರಿ
ನನಗಿಂತ ಚೆನ್ನಾಗಿ ಹೇಳಿ
ಹಾಗೆ ಹೇಳುವ ಮೊದಲೊಂದಿಷ್ಟು ತಾಳಿರಿ
ಮೊದಲಿದನೊಲಿದೊಮ್ಮೆ ಕೇಳಿ.

೪೭

ಏಕನು ನಾನಸಹಾಯನು ವೃದ್ಧನು
ಪರಿವಾರ ಹೀನನು ಕೃಶನು
ಸ್ವಪ್ನದೊಳಾದರು ಹೀಗೆ ಮೃಗೇಂದ್ರನು
ಭ್ರಮೆಗೊಂಡು ಚಿಂತಿಪನೇನು.

೪೮

ದುರ್ದೈವದಿಂದೊಮ್ಮೆ ದುಸ್ತರ ಕೂಪಕೆ
ಸಿಂಹವು ಬಿದ್ದರು ಭರದೆ
ಮದಗಜ ಕುಂಭ ವಿದಾರಣ ಕಾರ್ಯಕೆ
ಮನವಿಡುವುದನು ಮಾಣುವುದೆ.

೪೯

ಆಳದ ಮಡುವಿನೊಳಾಡುತಲಿದ್ದರು
ತಾನು ನಿಗರ್ವಿ ರೋಹಿತನು
ಉಂಗುಟ ಮಾತ್ರದ ನೀರಿನೊಳಿದ್ದರು
ಶಫರಿ ತಾ ಫುರ್ಫುರಾಯಿತನು.

೫೦

ಹೊಸದೋಣಿಯೆಂದಂಜಿ ಹೋಹೆಯ ಬೇಡಿಗೆ
ಒಮ್ಮೆ ಸಾಹಸವನು ಮಾಡು
ಹಳೆಯರೆಗಳ ಪರಿಚಯವಹುದೋಡಿಗೆ
ನೀರಿನೊಳಿಳಿಯಿಸಿ ನೋಡು.

೫೧

ಜಗದೊಳಗೊಬ್ಬನು ಮೇಲೆದ್ದು ನಲಿವಂದು
ಒಬ್ಬನು ಕುಸಿದು ಬೀಳುವನು
ಇತ್ತ ಚಂದ್ರನು ಮೂಡಿ ಮೇಲೇರುತಿರುವಂದು
ಅತ್ತ ಸೂರ‍್ಯನು ಮುಳುಗುವನು.

೫೨

ಹೆರರನು ನಿಂದಿಸುವೆಡೆಯೊಳು ಗಾಂಪನು
ಸಹ ವಾಗ್ಮಿಯಾಗುವನು
ವಾಗ್ಮಿಯು ಸಹ ಕಡುಗಾಂಪನು ತನ್ನನು
ನಿಂದಿಸಿಕೊಳುವಂದು ತಾನು.

೫೩

ಕಾವ್ಯವು ರಸಿಕರಿಗಮೃತವು ಅಮೃತವು
ಕಾಮಿನಿಯರು ಕಾಮಿಗಳಿಗೆ
ವಿತ್ತವು ಜೀನರಿಗಮೃತವು ಅಮೃತವು
ಚಿರಶಾಂತಿ ಸಂನ್ಯಾಸಿಗಳಿಗೆ.

೫೪

ಕೇಳ್ವುದು ಶಾಂತಿಯು ಬಯಸುವಿರಾದರೆ
ಸಂತರ ವಾಗಮೃತವನು
ಖೇದವು ಮರಳಿ ಸಂಭವಿಸದು ತಳೆದರು
ಹೃದಯದೊಳೇಗಳುಮದನು.

೫೫

ಮರ್ಮದೊಳೂರಿದ ಖಳರ ವಾಗ್ಬಾಣದೆ
ಸಂತರು ಬಹುನರಳುವರು
ಸತ್ಪುರುಷರ ವಚನಾಮೃತ ಲೇಪದೆ
ಮರಳಿ ಸಂತೋಷಿಪರವರು.

೫೬

ಮುತ್ತಿ ಝೇಂಕರಿಸುವ ಅಳಿಗಳಿಂದೆಸೆಯುವ
ಮಾಮರ ದೊರೆಯುವವರೆಗೆ
ಪಿಕವೆ ಬೇರೆಡೆಯೊಳು ವಿರಸದ ದಿವಸವ
ನೀಗು ಹೇಗಾದರು ಕೊನೆಗೆ.

೫೭

ನರಜನ್ಮ ದುರ್ಲಭವದರೊಳು ದುರ್ಲಭ
ವಹುದು ಪಾಂಡಿತ್ಯದ ಸೊಗವು
ಅದರೊಳು ದುರ್ಲಭ ಕಾವ್ಯವು ದುರ್ಲಭ
ವದರೊಳು ಪಾಪಿಗೆ ರಸವು.

೫೮

ತರುಗಳು ಮೆರೆವುವು ಪಣ್ಗಳ ಹೊರೆಯೊಳು
ಲತೆಗಳು ಪುಷ್ಪ ಭಾರದೊಳು
ಕವಿಗಳು ಮೆರೆವರು ಅರ್ಥದ ಹೊರೆಯೊಳು
ಪೆಣ್ಗಳು ಶೀಲಭಾರದೊಳು.

೫೯

ರಮಣೀಯನಾದರು ವೈರಾಗ್ಯವಿರದಿರೆ
ಮಠದೊಳು ಯತಿ ಶೋಭಿಸುವನೆ
ಕಮನೀಯನಾದರು ಪಾಂಡಿತ್ಯವಿರದಿರೆ
ಸಭೆಯೊಳು ಕವಿ ಶೋಭಿಸುವನೆ.

೬೦

ಸಜ್ಜನ ಸಂಗವು ತೋರಿ ಸುಗತಿಯನು
ದೂರಗೈವುದು ಕುಮತಿಯನು
ಬಹುದಿನಗಳ ಪಾಪವನು ಪರಿಹರಿಪುದು
ಕರುಣೆಯು ಕಲಿಯಿರೆನ್ನುವುದು.

೭೧

ಕೊರಳೊಳು ವಿಷವುಂಟು ತಲೆಯೊಳು ಹಾವುಂಟು
ನಡುಹಣೆಯೊಳು ಬೆಂಕಿಯುಂಟು
ಆದರು ಭಕ್ತರ ಭವದುರಿ ತಣಿಯದೆ
ಹರ ನಿನ್ನ ತನುಕಾಂತಿಯಿಂದೆ.

೭೨

ಕಲ್ಲನೊಂದೊಂದನದಾವನು ಮೆಲ್ಲನೆ
ತೆಗೆದೊಯ್ವನವನೆಯೆ ಕೊನೆಗೆ
ಅದ್ರಿಯ ಕರಗಿಸಿದಾತನು ತಾನೆಸೆ
ಅರ್ಹನು ವಿಜಯಮಾಲಿಕೆಗೆ.

೭೩

ಇರ್ಕಡೆಯೊಳು ಸೂಜಿ ಮೊನಚಾದುದಾದರೆ
ಹೊಲಿಯಬಹುದೇನನು ನೀನು
ಕಲೆಗಳೆಲ್ಲದರೊಳು ಪರಿಣತನಾದರೆ
ಮಾಳ್ಪುದಾದರು ತಾನದೇನು.

೭೪

ಹೋದೀತೆ ಬಾಲವನೊಮ್ಮೆಗೆ ಬೀಸಿದ-
ರೆತ್ತಿನ ಬೆನ್ನಿನ ನೊಣವು
ಮುಗಿದೀತೆ ಒಮ್ಮೆಗೆ ಬೈದು ಗದ್ದರಿಸಿದ
ಮಾತ್ರಕೆ ದುಷ್ಟರುಪಟಳವು.

೭೫

ಕುಡಿದವನಿವನೆಂದು ಪೇಳ್ವುದು ಸುಲಭವು
ಆತನು ಕುಡಿದಿರುವಾಗ
ಬಾಯಾರಿದವನಿವನೆನುವುದು ಕಷ್ಟವು
ಆತನು ಬಾಯಾರಿದಾಗ.

೬೬

ದೈವವು ಮಂತ್ರವು ತೀರ್ಥವು ವೈದ್ಯವು
ದ್ವಿಜನು ದೈವಜ್ಞನು ಗುರುವು
ಲೋಗರಿಗಿವು ದಿಟ ಸಿದ್ಧಿಯನೀವುವು
ಆ ಸಿದ್ಧಿ ಭಾವಾನುಗುಣವು.

೬೭

ಹಣವನಿಚ್ಛಿಸುವುದು ಪಾರ್ಥಿವಗಡಣವು
ವ್ರಣವನಿಚ್ಛಿಸುವುದು ನೊಣವು
ಪ್ರಿಯವು ದುರ್ಜನರಿಗೆ ಕಲಹ ಕಚ್ಚಾಟವು
ಶಾಂತಿ ಸಜ್ಜನರಿಗೆ ಗುಣವು.

೬೮

ಸ್ವಸ್ಥಾನದೊಳು ನಕ್ರನಾನೆಯನಾದರು
ಸೆಳೆದಪನತಿ ಸುಲಭದೊಳು
ಪ್ರಖ್ಯಾತನಾಗಿರಲವನೆನಿತೆಳೆದರು
ಭಷಕನು ಸಹ ಭಂಗಿಸುವನು

೬೯

ಹೇಗೆ ಮಲಯಾಚಲಗಂಧ ಸಂಸರ್ಗದೆ
ಚಂದನವಪ್ಪುದಿಂಧನವು
ಹಾಗೆ ಮಹಾತ್ಮರ ಮನದ ಸಂಸರ್ಗದೆ
ಸಾಧುವಪ್ಪುದು ಖಳ ಜನವು.

೭೦

ಚಂದನ ಬಹುತಂಪು ಚಂದನಕಿಂತಲು
ಬಹುತಂಪು ಚಂದ್ರಮಂಡಲವು
ಮತ್ತಿನ ಚಂದನ ಚಂದ್ರರಿಗಿಂತಲು
ಬಹುತಂಪು ಶಿಷ್ಟರ ಮನವು.

೭೧

ಅಲ್ಪವಾದರು ಬಿಂದು ಮುಕ್ತಕವಪ್ಪುದು
ನಿರ್ಮಲ ಶುಕ್ತಿಯೊಳಿರಲು
ಅತ್ಯಲ್ಪವೆಂದಿಹುದತಿಮೌಲ್ಯವೆನಿಪುದು
ನಿರ್ಮಲ ಪಾತ್ರದೊಳಿರಲು.

೭೨

ನಿನ್ನೆದುರೊಳು ನಿಂದು ಕೈಮಾಡಿದವನನು
ಹಿಡಿದೀಯೆ ತಡೆದೀಯೆ ನೀನು
ನಿನ್ನ ಹಿಂಗಡೆಯೊಳು ಪಿಸುಣಾಡುವವನನು
ಹಿಡಿದೀಯ ತಡೆದೀಯ ನೀನು.

೭೩

ನ್ಯಾಯ ಸಮ್ಮತವಲ್ಲದಂತಹ ಹೊಗಳಿಕೆ
ಲೇಸಲ್ಲವೆಂದಿಗು ತಗದು
ನ್ಯಾಯ ಸಮ್ಮತವೆನುವಂತಹ ತೆಗಳಿಕೆ-
ಯದಕಿಂತ ಲೇಸನ್ನಿಸುವುದು.

೭೪

ಕತ್ತೆ ಎಂದಾದರು ನಿನ್ನನು ಒದ್ದರೆ
ಮರಳಿ ನೀನೊದೆಯದಿರದಕೆ
ಕತ್ತೆಯ ಒದೆಯನು ಹಿಂದಿರುಗಿಸಿದರೆ
ನೋವಿನ ಬಹುಪಾಲು ನಿನಗೆ.

೭೫

ಎಳಸಿದ ವಸ್ತುವು ದುಸ್ಸಾಧ್ಯವಾದರೆ
ಬೈದು ಹೋಗುವುದುಂಟು ಜನರು
ಎಟುಕದ ದ್ರಾಕ್ಷಿಯ ಬೈದುದನರಿಯಿರೆ
ಹುಳಿಯೆಂದು ನರಿಯುಣ್ಣನವರು.

೭೬

ದುಂಬಿ ಮಕರಂದವನೀಂಟಿದುದಾದರೆ
ಜೇನನು ಕೊಡುವುದು ಮರಳಿ
ಜೇಡನಾತೆರದಿಂದಲೀಂಟಿದನೆಂದರೆ
ವಿಷವನು ಬಿಡುವನು ಕೆರಳಿ

೭೭

ಪರಿಚಯವಿದ್ದವರೊದ್ದರು ಕಡುಲೇಸು
ಗೊತ್ತು ತಿದ್ದುವರೆಮ್ಮನೆಂದು
ಪರಿಚಯವಿರದವರೊಲಿದರು ಕಡು ಹೇಸು
ಗೊತ್ತೆ ಮುದ್ದಿಪರೇಕೆ ಎಂದು.

೭೮

ಸ್ಕೂಟರು ಹೆಳವನಿಗೇನುಪಯೋಗವು
ಬೋಳನಿಗೇಕೆ ಬಾಚಣಿಗೆ
ಅರಸಿಕನಿಗೆ ಏಕೆ ಕಾವ್ಯದ ಗಮಕವು
ಟ್ರಾನ್ಸಿಸ್ಟರೇಕೆ ಕೆಪ್ಪನಿಗೆ.

೭೯

ದೊಡ್ಡವರವರೆಂದು ಆದರಿಸುವಿರೇಕೆ
ದೊಡ್ಡದಾದರು ಸಪ್ಪೆ ಗೆಣಸು
ಸಣ್ಣವರಿವರೆಂದು ಕಡೆಗಣಿಸುವಿರೇಕೆ
ಸಣ್ಣದಾದರು ಖಾರ ಮೆಣಸು.

೮೦

ಹರಿವುದು ಸುಲಭವು ಹೊಲಿವುದು ಕಷ್ಟವು
ಸೃಷ್ಟಿ ಕಷ್ಟವು ನಾಶ ಸುಲಭ.
ನುಡಿವುದು ಸುಲಭವು ನಡೆವುದು ಕಷ್ಟವು
ಆಟ ಕಷ್ಟವು ನೋಟ ಸುಲಭ.

೮೧

ಕೂರೆಗೆ ತಿಗುಣೆಗೆ ದೂರ ಹೋಗುವುದೇಕೆ
ಇದ್ದಾವು ನಿಮ್ಮ ಬಟ್ಟೆಯೊಳು
ನಿಮಗಾಗದವರಿಗೆ ದೂರ ಹೋಗುವುದೇಕೆ
ಇದ್ದಾರು ನಿಮ್ಮೆದುರಿನೊಳು.

೮೨

ಕೇದಗೆ ಬನದೊಳು ಮುಳ್ಳಿನ ಪೊದೆಯೊಳು
ದುಂಬಿಯೆ ಮೊರೆಯುವೆ ಬರಿದೆ
ಅಲ್ಲೆಷ್ಟು ಮೊರೆದರು ಮಾಲತಿ ತೆರದೊಳು
ಮತ್ತೊಂದು ಹೂ ಸಿಕ್ಕಲಿಹುದೆ.

೮೩

ಬದುಕಿದ್ದನೆಂತೆಂಬುದೆಮಗದೆ ಮುಖ್ಯವು
ಸತ್ತನು ಹೇಗೆಂಬುದೇಕೆ
ಬದುಕಿದುದಲ್ಲದೆ ಸಾವಿನ ವಿವರವು
ನಾಳೆಯ ಚರಿತೆಗೆ ಬೇಕೆ.

೮೪

ಈ ಕಾವ್ಯ ಆ ನಾಟ್ಯವೀ ಚಿತ್ರವೆಂದೋಡು–
ತಿರುವುದು ಚಿತ್ತವೆ ತರವೆ
ಗಿರಿ ಕಾಡು ತೊರೆ ಮೋಡು ಮರ ಬಳ್ಳಿಗಳ ನೋಡು
ನೂರ್ಮಡಿ ಮೋದವೆ ತರವೆ.

೮೫

ಕನ್ನಡವನೆ ಓದಿ ಕನ್ನಡವನೆ ಬರೆ–
ದಾತ್ಮಸಂಸ್ಕಾರವ ಪಡೆದೆ
ಕನ್ನಡವನೆ ಆಡಿ ಕನ್ನಡವನೆ ಹಾಡಿ
ರಸವಶನಾದೆನೋರಂತೆ.

೮೭

ಕನ್ನಡವೇ ಗುರು ಕನ್ನಡವೇ ದೈವ
ಕನ್ನಡವೇ ನನ್ನ ಜೀವ
ಕನ್ನಡವೇ ತಾಯಿ ಕನ್ನಡವೇ ತಂದೆ
ಕನ್ನಡವೇ ದಾರಿ ಮುಂದೆ.

೮೭

ಸಂತರಾದವರೆಷ್ಟು ಉಪದೇಶವಿತ್ತರು
ತಿದ್ದಿಕೊಳಲಾರರು ಖಳರು
ನದಿಗಳು ಹೊಸ ನೀರನೆಷ್ಟು ತಂದೆರೆದರು
ಸಿಹಿಯಾಗದಬ್ಧಿಯ ನೀರು.

೮೮

ಹಲವಾರು ತೋಟದೊಳಸವಸದೊಳು ನುಗ್ಗಿ
ಹೂಗಳ ತಿರಿದೆನು ಹಿಗ್ಗಿ
ಮಾಲೆಗಟ್ಟಿಹೆನಿಲ್ಲಿ ನಾನವುಗಳನಿಂತು
ನನಗೊಪ್ಪುವಂತೆ ಸಮಂತು.

೮೯

ಸೃಷ್ಟಿಯ ಚೆಲುವನು ನೋಡಿ ಆನಂದಿಸು
ಕಷ್ಟವ ಮರೆತಿಲ್ಲಿ ಸುಖಿಸು
ಪುಷ್ಟಿಯ ತುಷ್ಟಿಯ ಪಡೆದು ಸಂತೋಷಿಸು
ದೃಷ್ಟಿವೈಶಾಲ್ಯವ ಗಳಿಸು.

೯೦

ಓದಿರುವಾತಗೆ ಮೌಢ್ಯವೆಂಬುವುದಿಲ್ಲ
ಜಪಗೈವನಿಗೆ ಪಾಪವಿಲ್ಲ
ಮೌನಿಯಾದವನಿಗೆ ಕಲಹವೆಂಬುವುದಿಲ್ಲ
ಜಾಗ್ರತನಿಗೆ ಭಯವಿಲ್ಲ.

೯೧

ಅವನು ಹೆರರವಗುಣಗಳನೆಣಿಸದೆ
ವೈರವನೆಣ್ಣದೆ ಮನದೆ
ಗುಣವನೆ ಗಣಿಸುವನವನೆಯೆ ಜಗದೊಳು
ಉತ್ತಮನೆನುವರು ಕೇಳು.

೯೨

ಸಾವಿರಗಟ್ಟಲೆ ಶಾಬ್ದಿಕರಿರುವರು
ತಾರ್ಕಿಕರಿರುವರು ಬಹಳ
ಜಗದೊಳು ಚಾರುಸರಸಾಲಾಪ ಚತುರರು
ಕವಿವರರಿರುವುದು ವಿರಳ.

೯೩

ಗುಣಗಳಿಗೆಲ್ಲಕೆ ಭೂಷಣ ರೂಪವು
ಶೀಲಕೆ ಭೂಷಣ ಕುಲವು
ಸಿದ್ಧಿಯು ಭೂಷಣವೆನಿಪುದು ವಿದ್ಯೆಗೆ
ಭೋಗವೆ ಭೂಷಣ ಸಿರಿಗೆ.

೯೪

ಪದಶಬ್ದಕಾತರನಾಗಿಹನೀತನು
ಮಾರ್ಗದರ್ಶನ ಸುಖಿಯಿವನು
ರಸಭೋಗಿಯೀತನು ಧ್ವನಿಮಗ್ನನೀತನು
ಕವಿಯಂತೆ ಕಾದಲನಿಹನು.

೯೫

ಎಲ್ಲರು ಕಂಡರು ಕೇಳಿದರೆಲ್ಲರು
ಕೂಗಿತು ಹಾಗೊಂದು ಕಾಗೆ
ಕೇಳಿದರಾದರು ಬಹುಮಂದಿ ಕಾಣರು
ಕೋಗಿಲೆ ಹಾಡಿತು ಹೀಗೆ.

೯೭

ಕಾಲ್ನಡೆಯೊಳು ಬಹ ಬುಧನಿಗೆ ಸಮನಲ್ಲ
ಹಯದ ಮೇಲೈತಹ ಖಳನು
ಪುಳಿನದೊಳಾಡುವ ಹಂಸನಿಗೆಣೆಯಲ್ಲ
ಮರನೇರಿ ಕುಳಿತ ವಾಯಸನು.

೯೭

ಹಿಡಿದರೆ ಹಿಡಿತುಂಬ ಬಿಟ್ಟರೆ ಜಗವೆಲ್ಲ
ಕವಿಯ ಸುಭಾಷಿತ ಹೀಗೆ,
ಒಂದಡಿ ಇಳೆಗೆಲ್ಲ ಒಂದಡಿ ನಭಕೆಲ್ಲ
ವಾಮನ ಬೆಳೆದೆದ್ದ ಹಾಗೆ.

೯೮

ಸಿದ್ಧಿ ಸಾಧನೆ ಹಾಗೆ ವಿದ್ಯೆ ಬೋಧನೆ ಹಾಗೆ
ಬುದ್ಧಿ ಸಹವಾಸದ ಹಾಗೆ
ವೃದ್ಧಿ ದುಡಿಮೆಯ ಹಾಗೆ ಶುದ್ಧಿ ಮೀಹದ ಹಾಗೆ
ಲದ್ದಿ ಆಹಾರದ ಹಾಗೆ.

೯೯

ಸಭ್ಯರು ಮಾತನೊಂದಾಡದೆ ಹೋದರು
ನಿಜಗುಣದಿಂದೆಸೆದಪರು
ಹಲವರು ಮೆಚ್ಚಿದ ರತ್ನವು ತನ್ನದೆ
ಗುಣವನು ಹೊಗಳಿಕೊಳ್ಳುವುದೆ.

೧೦೦

ಮಾಗಿದ ಗಾಯದ ಗುರುತನು ಕಂಡರೆ
ನಗುವುದಿದೇತಕೆ ನೀನು
ಗಾಯಗಳಿಲ್ಲದೆ ರಣವನು ಗೆಲುವರೆ
ವಜ್ರಕಾಯನೆ ಹೇಗೆ ನೀನು.

ಐದನೆಯ ನೂರು

೧

ಸುಗುಣಾನುರಾಗನು ಗರಲಾಭಿರಾಮನು
ರಾಗಾದಿದೋಷರಹಿತನು
ಶ್ರೀ ವಿಶ್ವನಾಥನು ಗಿರಿಜಾಸಹಾಯನು
ನಮ್ಮನು ಸಲಹಲಿ ಶಿವನು.

೨

ಮುಖವು ಚಂದ್ರನ ಹಾಗೆ ತುಟಿಯು ತೊಂಡೆಯ ಹಾಗೆ
ನಯನವು ಕಮಲದ ಹಾಗೆ
ಪಾಣಿ ಚಿಗುರಿನ ಹಾಗೆ ವಾಣಿ ಜೇನಿನ ಹಾಗೆ
ಮನವೇಕೆ ಕಲ್ಲಿನ ಹಾಗೆ.

೩

ನಾಳೆಗೆ ಗೆಲುವೆನು ನಾಳೆ ನಾ ಹೋರುವೆ
ಎಂದು ನೀನಾಡುತಲಿರುವೆ
ಇಂದೆಯೆ ತಡವಾಗಲಿಲ್ಲವೆ ಸುಜ್ಞರು
ನಿನ್ನೆಯೆ ಜಯ ಸಾಧಿಸಿದರು.

೪

ಉರಿಯುವ ಚಿತೆಯನು ನೋಡಿದ ವೈದ್ಯನು
ವಿಸ್ಮಯಗೊಂಡನು ನಿಂದು
ನಾನು ಹೋಗಿರಲಿಲ್ಲ ನನ್ನಣ್ಣನಿರಲಿಲ್ಲ
ಆರದೀ ಕೈವಾಡವೆಂದು.

೫

ಕ್ರೌಂಚ ಸಾರಸ ಭೇಕ ಬಕ ಕರ್ಕ ಮತ್ಸ್ಯಾದಿ
ಜೀವಿಗಳೆನಿತಿದ್ದರೇನು
ಅರಸಂಚೆವಿಂಡುಗಳೋಳಿಯಿಂದಾಡದಿ-
ದ್ದರೆ ಕೊಳ ಸೊಗಸುವುದೇನು.

೬

ಪರಶಿವ ಬರಸೆಳೆದಪ್ಪಿದ ಸೊಗದೊಳು
ಪಾರ್ವತಿ ಕಣ್ಣು ಮುಚ್ಚಿದಳು
ಕೊರಳಿನ ಗರಳದ ಸೋಂಕಿನೊಳಂಜುತೆ
ಹಮ್ಮದಂಬೋದಳೆನುವಂತೆ.

೭

ಮುಳುಗಿಸಬಹುದು ನೀ ನಗೆಯ ವಾಹಿನಿಯೊಳು
ಹೆರರಿತ್ತ ಕಿರುಕುಳಗಳನು
ಬೆಳೆಯಿಸಬಹುದು ನೀನೀ ನೀರ ನೆರವೊಳು
ನಲುಮೆಯ ಗಿಡಬಳ್ಳಿಗಳನು.

೮

ಗಂಡಸಿಗಿರುವಳು ಹೆಂಗಸು ಬಿಲ್ಲಿಗೆ
ಬಿಗಿದೊಂದು ಹೆದೆ ಹೇಗೆ ಹಾಗೆ
ಅವನನು ಅವಳು ಬಾಗಿಸಿದರು ಅವನಿಗೆ
ಅವಳು ವಿಧೇಯಳು ಕೊನೆಗೆ.

೯

ಸ್ವಾಗತವೀವುದು ಕಮ್ಮನೆ ಮೆಲುಗಾಳಿ
ಬಿಸಿಲಪ್ಪಿಕೊಳುವುದು ಬಂದು
ಕುಶಲವೆ ನೀವೆಂದು ಬೆಳಗೊಳುವುದು ಗಿಳಿ
ಉಪವನವೆನಿತಂದವಿಂದು.

೧೦

ಕಾಗೆಯು ಹಾರಿದರಂಜುವೆ ಹಗಲೊಳು
ತುಂಗೆಯ ದಾಟುವೆ ಇರುಳು
ಲೋಕದ ಕಣ್ಣಿಗೆ ನೀ ಮಣ್ಣನೆರಚುವೆ
ಪೊಲ್ಲಮೆಯೊಳು ಮರಿತಿರುವೆ.

೧೧

ನಿನ್ನೊಳು ನೀರು ಅತ್ಯಲ್ಪವು ಕೂಪವೆ
ಆಳದೊಳಿರುವುದು ಒಳಗೆ
ಆದರು ನೀರನು ತುಂಬಿ ನೀ ಕಳುಹುವೆ
ಇಳಿದರೆ ಬರಿಗೊಡ ಕೆಳಗೆ.

೧೨

ಕಳೆದಪವಾನೆಯು ನೆತ್ತಿಯಿನೊಗೆದೊಂದು
ಹೊಲೆಯನು ಮಿಂದು ನಾವೆಂದು
ಈಕೆಯು ಕೊರಳಿನ ಕಾಂತಿಯು ಹೊಳೆಯೊಳು
ಮುಳುಗಿವೆ ತೋರಮುತ್ತುಗಳು.

೧೩

ಸತ್ಯದೇವತೆ ಬಹು ಬೆಲೆಯುವಳವಳನು
ಯುದ್ಧ ಬಂದೊದಗಿದ ದಿನದೆ
ಸುಳ್ಳಿನ ಮೈಗಾವಲಿನ ಪಡೆಯೊಂದನು
ರಚಿಸಿ ರಕ್ಷಿಸಬೇಕು ಭರದೆ.

೧೪

ಮನದೊಳಡಂಗಿದೊಂದಿಂಗಿತವನು ಹೇಳೆ-
ನದನು ನೀ ತಿಳಿಯೆನ್ನುವೋಲೆ
ಕೊರಳಿನ ಸರವನು ಮೆಲ್ಲನೆ ತೆಗೆದೆಳೆ-
ದೇತಕೆ ತೋರುವೆ ಬಾಲೆ.

೧೫

ಗಲ್ಲಕೆ ಕೈಬೆರಳೊಂದನು ನೀನೂರೆ-
ಗೊಟ್ಟೇಕೆ ನಿಂತೆಯೆ ನೀರೆ
ಆರನು ನಿರುಕಿಸಿ ನೋಡುವೆ ನೀನೋರೆ
ನೋಟದೊಳಾ ನಲ್ಲನಾರೆ.

೧೬

ಏತದ ತಲೆತೂಗಿ ನೀರನು ತಂದಿತು
ಪಾತಾಳದಾ ತಳದಿಂದ
ತಾತನ ತಲೆತೂಗಿ ನಗೆಯನು ತಂದಿತು
ಮುಂಡಾಸು ಬಿದ್ದುದರಿಂದ.

೧೭

ಮನವು ನಪುಂಸಕವೆಂದೆ ನಾನವಳನು
ಕರೆತರಲ್ಪಟ್ಟಿದೆ ಮನವ
ರಮಿಸಿತದಲ್ಲಿಯೆ ವಂಚಿತನಾದೆನು
ಪಾಣಿನಿಯೆಂತಹ ಕಿತವ.

೧೮

ಆಡಿ ತೋರಿಸಿದರೆ ಅರವತ್ತು ಗುಣವುಂಟು
ಆಡುವುದಾದರೆ ಆಡು
ಮಾಡಿ ತೋರಿಸಿದರೆ ಮುನ್ನೂರು ಗುಣವುಂಟು
ಮಾಡುವುದಾದರೆ ಮಾಡು.

೧೯

'ಅಲೆ ಬಲೆ ಚೆನ್ನಿಯೆ ಎಲೆ ಎಲ್ಲಿ ಮಡಗಿದ್ದೆ'
ಗಂಡನು ಕೇಳಿದ ನಿಂತು
'ಒಣಗಿ ಹೋಗುವುದೆಂದು ಒಲೆ ಮೇಲೆ ಮಡಗಿದ್ದೆ'
ಹೆಂಡತಿ ಉತ್ತರ ಬಂತು.

೨೦

ದೊಣೆಗೇಕೆ ಚಿತ್ತಾರ ಕಣೆಗೇಕೆ ಸಿಂಗಾರ
ಗುರಿಯನು ಕಂಡೆಚ್ಚದವಗೆ
ಒಳ್ಳೆಯ ಬಿಲುಗಾರಗಿಲ್ಲವೊ ಬಡಿವಾರ
ಅವನೇಕಲವ್ಯನ ಹಾಗೆ.

೨೧

ಅವಕಾಶವೇ ಮುಖ್ಯ ಕಾರಣವಲ್ಲವೆ
ಯಾರು ಏನಾಗಿಹರದಕೆ
ಸಮಯ ಸಂದರ್ಭಗಳೊದಗದೊಡೇಗೈವೆ
ಕೇವಲ ವಿದ್ಯೆಯೆ ಸಾಕೆ.

೨೨

ನೆಲವನು ಅಪ್ಪುತ ನೊರೆಯನು ಸೂಸುತ
ಮೆಲ್ಲನೆ ಅರಚುತ ಸತತ
ತೆರೆ ತೋಳು ಬೀಸುತ ಮಲರೋಗಿಯೆನುವೋಲು
ಬಿದ್ದಿದೆ ನೋಡಿದೊ ಕಡಲು.

೨೩

ಉಟ್ಟ ಸೀರೆಯು ಕಪ್ಪು ತೊಟ್ಟ ರವಿಕೆಯು ಕಪ್ಪು
ಜಡೆ ಕಪ್ಪು ರಿಬ್ಬನ್ನು ಕಪ್ಪು
ಕನ್ನಡಕವು ಕಪ್ಪು ಕೈ ಬಳೆ ಸಹ ಕಪ್ಪು
ನೋಡಿ ಆದೆನು ನಾನೆ ಕಪ್ಪು.

೨೪

ಕಣ್ಣೀರು ನಿಟ್ಟುಸಿರಿಗೆ ಕೊನೆ ಮೊದಲಿಲ್ಲ
ನೋವಿಗೆ ನಿಲುಗಡೆಯಿಲ್ಲ
ಮೆದುವಲ್ಲ ಸಿಹಿಯಲ್ಲ ಹಾಲು ಬಾಯಿಯವೋಲು
ಬಾಣಂತಿಖಾರವೊ ಬಾಳು.

೨೫

ಕಪ್ಪಿಲ್ಲ ಕಣ್ಣೊಳು ಕೆಂಪಿಲ್ಲ ತುಟಿಯೊಳು
ಮಾನಿನಿ ಬಿಚ್ಚಿದೆ ಹೆರಳು
ಮನದ ಮಾನದ ಮರವಿದನೆಂತೊ ಬಹುಮೆಲ್ಲ-

ಸಹನೆಲ್ಲ ಕಡಿದಿಹನಲ್ಲ.

೨೬

ಮೇಲಕೆ ಹತ್ತಿರಿ ಮುಂದಕೆ ಬನ್ನಿರಿ
ಎಂದು ಕಂಡಕ್ಟರು ಕರೆಯೆ.
ಉಳಿದೆಲ್ಲ ಕಡೆಯೊಳು ಹಿಂದಕ್ಕೆತಳ್ಳಿಸಿ-
ಕೊಂಡವನಾನಂದಕೆಣೆಯೆ.

೨೭

ಚೆಂದುಟಿ ಹವಳವು ಸುಲಿಪಲ್ಲು ಧವಳವು
ನೀಲವು ಕುಟಿಲ ಕುಂತಳವು
ಕಂಗಳು ಕಾಳವು ಕದಪು ಸುಪೀತವು
ಅದ್ಭುತ ವರ್ಣಸಂಗಮವು.

೨೮

ಯಮರಾಯನನುಜರೆ ಹೇ ವೈದ್ಯರಾಜರೆ
ಮಣಿವೆವು ಮುಡಿಬಾಗಿ ನಾವು
ಪ್ರಾಣವನೊಂದನೆ ಯಮರಾಜನೊಯ್ದರೆ
ಧನವನುಮೊಯ್ವಿರಿ ತಾವು.

೨೯

ಕಪಟದ ಕಪಟವು ತೂಗಿದುದಾಲಕೆ
ಸಂಶಯದಿಲಿ ಹೋಯ್ತು ಬಿಲಕೆ
ಭೀತಿಯ ಗೂಬೆಯು ಓಡಿತು ಗೂಡಿಗೆ
ಅರಿವಿನ ಬೆಳಗಾಯಿತೊಳಗೆ.

೩೦

ಶ್ರೀಕಾಂತೆ ಭೂಕಾಂತೆಯರು ನಮ್ಮನುಳಿವರು
ಮುಂದೆ ಅನ್ಯರನೊಲಿದಪರು
ಓರ್ವಳು ತೊರೆಯಳು ಪರಮ ಪತಿವ್ರತೆ
ಅವಳೆಯು ಪರ ಕೀರ್ತಿಕಾಂತೆ.

೩೧
ಸಮವಸ್ತ್ರವೇತಕೆ ಶಸ್ತ್ರಾಸ್ತ್ರವೇತಕೆ
ಕೋವಿ ಕವಾಯಿತು ಬೇಕೆ
ನಿನ್ನೋರೆ ನೋಟಕೆ ಹಗೆ ತಾನೆ ಕೈಸೆರೆ
ಯುದ್ಧವಿಲ್ಲದೆ ಗೆಲುವೆ ಧೀರೆ.

೩೨
ಕರುವೊಂದು ಕೆರೆಯೊಳು ನೀರನು ಕುಡಿದರೆ
ಕೆರೆಯೆಲ್ಲ ಬತ್ತಿತೆನ್ನುವರೆ
ಹೇಳಿದನೀ ಮಾತನೊಬ್ಬ ಕಂಡಕ್ಟರೆ
ಸೈಯೆಂದರಹ ಬಸ್ಸಿನವರು.

೩೩
ಪಿತನು ರತ್ನಾಕರ ಲಕ್ಷ್ಮಿ ಸಹೋದರಿ
ಆದರು ಶಂಖದ ನಿಲವು
ಭಿಕ್ಷೆಯೊಳೂಳುವುದಾಯಿತಿದಚ್ಚರಿ
ಭಾಗ್ಯಾನುಸಾರವೂ ಫಲವು !

೩೪
ಸಿದ್ಧತೆಯಿಲ್ಲದೆ ಕೆಲಸಕೆ ಮುಂದಾಗೆ
ಬರಿಯೊಂದು ಹಗರಣವಲ್ತೆ
ಒಲೆಯೊಳೊಗ್ಗರಣೆಗೆ ಸೌಟಿಟ್ಟು ಎಣ್ಣೆಗೆ
ಗಾಣಿಗನೆಡೆಗೋಡಿದಂತೆ.

೩೫
ಜಡೆಯನು ಕೈಬೆರಳಿಗೆ ಸುತ್ತಿಕೊಳ್ಳುವೆ
ಕರವಸ್ತ್ರವನು ಹಿಂಡುತಿರುವೆ
ಬಾಗುವೆ ಬಳುಕುವೆ ಬಳೆಗಳನೆಣಿಸುವೆ
ಕಳ್ಳನೋಟವ ಬೀರುತಿರುವೆ.

೩೬

ಆನೆಗೆ ಅಡಿ ಸನ್ನೆ ಕುದುರೆಗೆ ತೊಡೆ ಸನ್ನೆ
ಹೆಣ್ಣಿಗೆ ಕಣ್ಣಿನ ಸನ್ನೆ
ಮನ್ನಗೆ ತುಟಿಸನ್ನೆ ಕೆಪ್ಪಗೆ ಕೈ ಸನ್ನೆ
ಹೆಡ್ಡಗೆ ಬಡಿಗೆಯು ಸನ್ನೆ.

೩೭

ಕೊಲಿಸಿತು ಚಿನ್ನದ ಸರದೊಂದುಪಾಯಕೆ
ನಾಗರಹಾವನು ಕಾಗೆ
ಶಕ್ತಿಯಿಂದಾಗದುದಾಗದೆ ತಂತ್ರಕೆ
ತಂತ್ರಗೈವುದು ನೀನು ಹಾಗೆ.

೩೮

ನಮ್ಮನು ಕೊಲುವುದು ನಮ್ಮ ಅನುಮಾನವೆ
ಸುಮ್ಮನೆ ಸಂಶಯ ತರವೆ
ಹಾಲನೆ ಕೊಟ್ಟರು ವಿಷವೆಂದು ದೂರುವೆ
ವಿಷವನೆ ಕೊಟ್ಟರೇಗೈವೆ.

೩೯

ಹುಟ್ಟಿ ಬಂದವರೆಲ್ಲ ಕಷ್ಟದೊಳಿರುವರು
ಧನ್ಯರು ಹುಟ್ಟದಿರುವವರು
ಉಸಿರಾಡುವವರೆಲ್ಲ ಸಂಕಟಪಡುವರು
ಧನ್ಯರು ಉಸಿರು ನಿಂತವರು.

೪೦

ವಿರಹಿಗಳೆದೆಯನು ಬಿರಿಸುವ ಮಳೆಮೋಡ
ಗಗನದೊಳಿದ್ದಿದೆ ನೋಡ
ಗುಡುಗೇನು ಮಿಂಚೇನು ಭೋರೆಂಬ ಮಳೆಯೇನು
ಪತಿ ಬಾರದಿರೆ ಗತಿಯೇನು.

೪೧

ಮೂಜಗವನೆ ಗೆಲ್ಲುವಾಸೆಯ ತೋರ್ಪರು
ಎಲ್ಲ ಕಾಮಿನಿಯರು ಹೊರಗೆ
ಪುರುಷರೆ ತಮ್ಮನು ಗೆಲ್ಲಲೆಂದೆಲ್ಲರು
ಬಯಸುವರಾಂತರ್ಯದೊಳಗೆ.

೪೨

ನಮ್ಮವನಿವನೆಂದು ಅನ್ಯನು ಅವನೆಂದು
ಅಲ್ಪರು ಪರಿಗಣಿಸುವರು
ವಸುಧೆಯೆ ತಮ್ಮ ಕುಟುಂಬವೆಂದೆಣಿಪರು–
ದಾರ ಚರಿತ್ರರು ಘನರು.

೪೩

'ನೀವೊಂದು ಸೀರೆಯನೆನಗಾಗಿ ತಂದಂತೆ
ನಾ ಕಂಡೆ ಕನಸನು ನಿನ್ನೆ'
'ನಾಳೆ ಆ ಸೀರೆಯ ನೀನುಟ್ಟು ಮೆರೆದಂತೆ
ಕನಸನು ಕಾಣೆನ್ನ ಚೆನ್ನೆ.'

೪೪

ಕಟ್ಟಲು ಎತ್ತಿಲ್ಲ ಬಿತ್ತಲು ಕಾಳಿಲ್ಲ
ಉಳುವೊಡೆ ಹೊಲ ತನಗಿಲ್ಲ
ಆದರು ನಮ್ಮೂರ ಹೈದನು ಸುಮ್ಮನೆ
ಹೊತ್ತು ಕೂರಿಗೆ ಕುಣಿತಾನೆ.

೪೫

ಅತ್ತರೆ ಅಳು ಚಂದ ನಕ್ಕರೆ ನಗು ಚಂದ
ನುಡಿದರೆ ನುಡಿ ಬಹು ಚಂದ
ಮುನಿದರೆ ಮುನಿಸಂದ ಒಲಿದರೆ ಒಲವಂದ
ಬಿಸವಂದವೀ ಕಂದನಂದ.

೪೭

ಮಳೆಯನು ಕರೆಯುವ ನೀರಿನ ಮೋಡವು
ಕಪ್ಪಗಿದ್ದರೆ ನಷ್ಟವೇನು
ಹತ್ತಿಗು ಹಗುರಾದ ಶರದದ ಮೋಡವು
ಬೆಳ್ಳಗಿದ್ದರೆ ಲಾಭವೇನು

೪೭

ಗೊತ್ತಾದ ಗುರಿಯನು ಗೊತ್ತಾದ ಕಾಲಕೆ
ಮುಟ್ಟುವುದಾದರೆ ನೋಡು
ಹತ್ತಾರು ದಾರಿಯೊಳಲೆಯುವುದೇತಕೆ
ನೇರವಾದೊಂದರೊಳೋಡು.

೪೮

ತಾವರೆಯೆಂದರೆ ನೀರನು ಕಾಣೆನು
ಇಂದುವೊ ಎನೆ ಕಾಣೆ ಕಲೆಯ
ಲಲಿತ ವಿಲಾಸದ ವಚನದೊಳರಿತೆನು
ವದನವಿದೆಂದು ಕಾದಲೆಯ.

೪೯

ನೆಲ ಮೆದುವೆಂದು ನೀ ಮೊಳಕೈಯೊಳಗೆವರೆ
ಗಾಳಿಯು ಗುದ್ದಿ ನೋಯುವರೆ
ತಲೆಗಟ್ಟಿಯೆಂದು ನೀ ಕಲ್ಲನು ಹಾಯ್ವರೆ
ಛಾಯೆಯು ಸೆಣಸಿ ಹೋರುವರೆ.

೫೦

ಪದವಿ ತಪ್ಪಿದ ಮೇಲೆ ನಂಟರಿಷ್ಟರೆ ನಮಗೆ
ಕಟ್ಟಿಟ್ಟ ಹಗೆ ಕಾಣ ಕೊನೆಗೆ
ದೃಷ್ಟಾಂತವನು ಕೇಳು, ಕೆರೆ ಬತ್ತಿ ಬರಿದಾಗೆ
ಆಪ್ತನೆ ವೈರಿ ತಾವರೆಗೆ.

೫೧

ದೇವರೆಂದೊಬ್ಬನು ನಿಜವಾದರಿರುವುದು
ರಜದ ಮೇಲಿರುವನೊ ಹೇಗೆ
ಅಂತಲ್ಲದಿರಲೆಮಗೊಂದಾದ ಮೇಲೊಂದು
ದುಃಖವು ಬರಬಹುದೆ ಹೀಗೆ.

೫೨

ಕುವಲಯ ಮಾಲೆಯ ಪೋಲ್ವುದು ನಯನವು
ಪೋಲ್ವುದು ಶಶಿಯನು ಮುಖವು
ಕಿಸಲಯ ಲೀಲೆಯ ಪೋಲ್ವುದು ಅಧರವು
ಬಹು ಸುಖ ನಿನ್ನ ಸಮ್ಮುಖವು.

೫೩

ನೋಡದ ನೋಟದೊಳೆನ್ನನು ಕಂಡಳು
ಮುನಿಯದ ಮುನಿಸೊಳು ಮುನಿದು
ನುಡಿಸಿದಳೆನ್ನನು ನುಡಿಯದ ನುಡಿಯೊಳು
ಒಲವರವಿಂತಪ್ಪುದಿನಿದು.

೫೪

'ಮದನ ಕೈಗೋಲೆಯ ಬೇಲೂರು ಗುಡಿಯೊಳು
ಕೊರೆದವರಾರೆಂದು ಒದರಿ'
ಕೇಳಿದ ರಭಸಕೆ ಶಾಲೆಯ ಮಕ್ಕಳು
ನಾವಲ್ಲವೆಂದರು ಹೆದರಿ.

೫೫

ಕಾಡನು ಮೇಡನು ಸುತ್ತಾಡಿ ಬಂದೆವು
ಹಾದೆವು ಕಣಿವೆಯ ಗಿರಿಯ
ಹಾಡಿದ ಹಕ್ಕಿಯನಾಲಿಸಿ ನಿಂದೆವು
ಮಿಂದೆವು ತುಂಗೆಯ ತೊರೆಯ.

೫೭

ಸಜ್ಜೆ ಕೋಣೆಗೆ ಚಂದ ಗೆಜ್ಜೆ ಕುಣಿತಕೆ ಚಂದ
ಬೊಜ್ಜೆ ಪುಡಾರಿಗೆ ಚಂದ
ಲಜ್ಜೆ ವಧುವಿಗೆ ಚಂದ ಅಜ್ಜ ಅಜ್ಜಗೆ ಚಂದ
ಮಜ್ಜಿಗೆ ಊಟಕೆ ಚಂದ.

೫೭

ಮುಖ ಚಂದ್ರಕಾಂತವು ಕುಂತಲ ನೀಲವು
ಪದ್ಮರಾಗವು ಪಾದತಲವು
ಅಧರವು ಹವಳವು ಕಣ್ಣು ವೈಡೂರ್ಯವು
ಆರೀಕೆ ರತ್ನದಾಗರವು.

೫೮

ಶೈಲಾಗ್ರದೊಳು ನಿಂದ ಸಾಧುಃಶಾಖಿಗಳನು
ಓವೊ ದವಾನಲ ಬರಿದೆ
ನೀನು ಸುಟ್ಟುರುಹಿದೆ ಬೀಸಿ ಸಮೀರನು
ಪ್ರೇರಿಸುತಿರೆ ಹಿಂದಿನಿಂದೆ.

೫೯

ಮಾನಕೆ ಮಾನಿಷ್ಠರಂಜಿ ಹಿಂಜರಿದರೆ
ಆ ಮಾನಗೇಡಿಯು ನೋಡಿ
ತನಗೆಯೆ ಅಂಜಿ ಹಿಂಜರಿದರು ಭಾಪುರೆ.
ಎಂದುಬ್ಬಿ ಮೆರೆವನು ಖೋಡಿ.

೬೦

ನಾಲಗೆಯಿಂದಲೆ ಇಹಪರವೆನುವರು
ನಾಲಗೆ ಪುಣ್ಯದ ತವರು
ನಾಲಗೆ ತುದಿಯೊಳು ಲಕ್ಷ್ಮಿ ಶಾರದೆಯರು
ನೆಲಸಿಹರೆನುವರು ಬುಧರು.

೬೧

ನಾರನು ಉಟ್ಟರೆ ನಾರದನಾದಾನೆ
ಬೂದಿಯ ಬಳಿದರೆ ಶಿವನೆ
ನೇಮವಿದ್ದವನಿಗೆ ಕಾಮವು ಕಡಿಮೆಯೆ
ನಾಮವಿದ್ದವರೆಲ್ಲ ಮಡಿಯೆ.

೬೨

ಮಿಕ್ಕಿಲ್ಲ ಕೊಳವನು ಓ ರಾಜಹಂಸನೆ
ತೊರೆದಿಲ್ಲಿ ನೀ ಬಂದೆಯೇಕೆ
ಜನರಿಲ್ಲಿ ಹಂಸನೆಂದೆನುವರು ಬಕನನೆ
ತೆರಳು ನೀ ಬೇರೊಂದು ಕೊಳಕೆ.

೬೩

ಕರಡಿಯ ಮೈಯಿಗೆ ಕಸ್ತೂರಿಯೇತಕೆ
ಹಂದಿಗೆ ಚಂದನವೇಕೆ
ಕೋಳಿಯು ಕಾಲಿಗೆ ಕಿರುಗೆಜ್ಜೆಯೇತಕೆ
ನಾಯಿಗೆ ಅಂದಣವೇಕೆ.

೬೪

ಮೈಯ ಲಾವಣ್ಯವು ಏನು ಮಾಧುರ್ಯವು
ನೋಟದೊಳೇನೆಂಥ ಮಧುವು
ಮುಖದ ಚಂದಿರನಿಂದಲೊಗೆದ ನಗೆಜೊನ್ನವು
ಹೊಳೆಯಾಗೆ ಮುಳುಗಿತು ಮನವು.

೬೫

ಹೊಕ್ಕಿತು ನಿನ್ನನು ಕಾಮನ ಸಾಯಕ
ಮುಕ್ಕುವೆ ಮಣ್ಣನು ಯುವಕ
ಸಿಕ್ಕ ಸಿಕ್ಕವರನು ನೋಡಿದರೇನುಂಟು
ಕನ್ನಡಿಯೊಳಗಣ ಗಂಟು.

೧೬

ಚಂಡ ಸಮೀರಣ ದಾರುಣ ಚರಿತವ
ನೀನು ಆಚರಿಸಿದೆ ಭರದೆ
ಚಾತಕ ಚಂಚು ಪುಟೋದರಕಿಳಿಯುವ
ನೀರ ನಿವಾರಿಸಬಹುದೆ.

೧೭

ಆಕಾಶ ಮಂಚದೊಳೆಷ್ಟೊಂದು ರೋಗಿಗ–
ಳಿರುಳೆಲ್ಲ ನರಳುವರೀಗ
ನಿದ್ರಿಸಲರಿಯದೆ ಕಣ್ಣೆವೆ ಮುಚ್ಚದೆ
ಜಾಗರ ಗೈವರು ಒರಿದೆ.

೧೮

ಕರ್ಮವನೆಸಗುವುದೆಮ್ಮ ಸದ್ಧರ್ಮವು
ದೈವದಧೀನವು ಫಲವು
ಕೈಯೊಳು ಗಾಳಿಯ ಕಟ್ಟಿಕೊಂಡೋಡರು
ಓಡನು ನಡಸುವಂಬಿಗರು.

೧೯

ನೀರುಳ್ಳಿಯನು ಕಚ್ಚಿ ಬಾಯಿ ನಾರುವುದೆಂದು
ದೂರಿದರದಕಾವ ಕುಂದು
ಒಂದನು ಸವಿದು ಮತ್ತೊಂದರ ಸೊಗವನು
ಕೋರುವುದೇತಕೆ ನೀನು.

೨೦

ತಿಳಿನೀಲಿ ಬಾನೊಳು ಬೆಳ್ಳನೆ ಮುಗಿಲೊಂದು
ಮೆಲ್ಲನೆ ತೇಲುತಲಿಹುದು
ತಣ್ಣನೆ ಕೊಳದೊಳು ತೆಳ್ಳನೆ ಅಲೆಯೊಂದು
ಜಲವೀಣೆ ನುಡಿಸುತಲಿಹುದು.

೭೧

ಬೀದಿಯ ವಿದ್ಯುತ್ತಿನೊಂದು ಕಂಬದ ಮೇಲೆ
ಸ್ವಿಚ್ಚಿನ ಪೆಟ್ಟಿಗೆಯೊಳಗೆ
ಗೂಡು ಕಟ್ಟಿದ ಗುಬ್ಬಿ ಸುಖವಾದುದೆನುವೋಲೆ
ಸುಖವಹುದೀಜಗ ನಿನಗೆ,

೭೨

ವರಪುಷ್ಪವತಿಲತೆ ಬಾಗಿ ತಬ್ಬಿದಳೆಂದು
ಮಿಂದೆದ್ದು ವಿಮಲವಾರಿಯನು
ಮತ್ತೆ ಸೋಂಕುವಳೆಂದು ಅಂಜಿ ಮಾರುತನಿಂದು
ಮೆಲ್ಲಮೆಲ್ಲನೆ ಬರುತಿಹನು.

೭೩

ನಿನ್ನ ಮಹಾಪೂರವಿಳಿದು ತಟಿನಿಯೆ
ಜಲಧರ ಸಮಯವು ಕಳೆಯೆ
ತಟ ತರು ಪಾತನ ಪಾತಕವೊಂದೆಯೆ
ಬಹುಕಾಲ ಉಳಿವುದು ತಿಳಿಯೆ.

೭೪

ಬೇಗನೆ ನಡೆಯಿರೆ ಬಂದಿತು ಬಸ್ಸೆಂದು
ಬಾಲೆಯರೋಡಿದರತ್ತ
ನಿಡಿದುಸಿರೆಳೆದರು ಬಾಲಕರುಸ್ಸೆಂದು
ತಲೆಕೆಳಗಾಯಿತು ಚಿತ್ತ.

೭೫

ಗೆಡ್ಡೆಯ ಹೊಲ ಹೀನ ಗೊಡ್ಡು ಹೆಂಡತಿ ಹೀನ
ಮೆಡ್ಡೆಯ ಬೋನವೆ ಹೀನ
ಹೆಡ್ಡನ ನೆರೆ ಹೀನ ಮಡ್ಡನ ಗುರಿ ಹೀನ
ಬಡ್ಡಿಯ ಸಾಲವೆ ಹೀನ

೭೬

ತೋಳವು ಅಡಿತಪ್ಪಿ ಹಳ್ಳಕೆ ಬಿದ್ದಾಗ
ಮೈಯೆಲ್ಲ ಕಲ್ಲಿನ ಘಾಯ
ಸತ್ತು ಬಿದ್ದಿರುವುದೆಂದು ಹಾವನು ಕಂಡಾಗ
ವಾಯಸ ಸಹ ವೈನತೇಯ.

೭೭

ಹೆಡೆಯೆತ್ತಿ ಬುಸುಗುಡುತವರೆವರನು ಕಚ್ಚಿ
ಹುತ್ತವ ಹಾವು ಹೊಗುವವೋಲು
ಕಂಡವರನು ಬೈದು ಸಿಕ್ಕವರನು ಚುಚ್ಚಿ
ಹೊಕ್ಕಳು ಕೋಣೆಯನಿವಳು.

೭೮

ಭುವನಕ್ಕೆ ಶರಧಿಯು ಸಹಜದಾವರಣವು
ಪ್ರಾಕಾರ ಭವನಕಾವರಣ
ನೃಪತಿಯು ದೇಶಕ್ಕೆ ರಕ್ಷೆಯಾವರಣವು
ಶೀಲವು ಸತಿಯರಾವರಣ.

೭೯

ತಲೆ ನರತಿರಲೇನು ಸಲೆ ಕಲಿತಿರಲೇನು
ಕಲೆಗಾರನಾಗಿರಲೇನು
ಕುಲ ಶುದ್ಧವಿರಲೇನು ಒಲವನಿತಿರಲೇನು
ಮಣೆವನು ಧನಿಕನಿಗವನು,.

೮೦

ಮದಗಜಗಾಮಿನಿ ಕಾಮಿನಿ ಬಂದಳು
ಲೀಲೆಯಿಂದಲಸ ಭಾವದೊಳು
ತನ್ನಡಿಯುಗುರಿನ ಕೆಂಬೊಗರಲರೊಳು
ಇಳೆಯನು ಪೂಜಿಪವೋಲು.

೮೧

'ಮಾಂಸವ ತಿನುವೆಯ?' 'ಸುರೆಯಿಲ್ಲದಿರಲೇಕೆ?'
'ಭಿಕ್ಷುವೆ ಮದ್ಯವೂ ಪ್ರಿಯವೆ?'
'ಹೆಣ್ಣಿದ್ದರಿಷ್ಟವ!' 'ಹಣವೆಲ್ಲಿ?' 'ನಿನಗೇಕೆ
ದ್ಯೂತ ಚೌರ್ಯಗಳಿಂದ ಪಡೆವೆ!'

೮೨

ಇಪ್ಪತ್ತು ವರುಷದ ಹಿಂದಿನ ಕಥೆಯೇನು
ನಗೆಯೇನು ನಲಿವೇನು ಆಗ
ಇಂದಿನ ವ್ಯಥೆಯೇನು ಮುಂದಿನ ಗತಿಯೇನು
ಹಗಲಲ್ಲೆ ಇರುಳಾಯಿತೀಗ.

೮೩

ಜನ್ಮ ಜನ್ಮಾಂತರದಾವುದೊ ಕರ್ಮವು
ಕಾಡುತಲಿಹುದೆನ್ನನಿರದೆ
ಶಾಪವೊ ಪಾಪವೊ ಬಾಳಿನೊಳೀನೋವು
ಶತ್ರುವಿಗೂ ಬೇಡ ತಂದೆ.

೮೪

ಬಿಸಿ ಆಲುಗೆಡ್ಡೆಯ ಬಾಯೊಳಗಿಟ್ಟಂತೆ
ಕಸಿವಿಸಿಗೊಳುತಿದೆ ಜೀವ
ಹುಸಿಯಲ್ಲವೊ ಹಾಳು ಸಂಸಾರದೀ ಚಿಂತೆ
ಮುಸುಕಿನ ಗುದ್ದಲ್ಲೊ ದೇವ.

೮೫

ಏನನೊ ನೋಡುವ ಏನನೊ ನುಡಿಯುವ
ಮತ್ತೆ ನೀನೇನನೂ ಬಗೆವೆ
ಇದ್ದಕ್ಕಿದ್ದಂತೆಯೆ ಕಂಬನಿ ಮಿಡಿಯುವ
ಮತ್ತಯ್ಯೊ ಕಿಲಕಿಲ ನಗುವೆ.

೮೬

ಒಲವನು ತೋರಿಸಿಕೊಳಲಾರದವರನು
ಒಲಿದವರೆಂದೆನ್ನಬಹುದೆ
ಅನುನಯದಿನಿನುಡಿಗಳನಾಡದವರನು
ಕಲಿತವರೆಂದೆನ್ನಲಹುದೆ.

೮೭

ಬಿಟ್ಟಿಯೆ ಸಿಕ್ಕುವುದಾದರೆ ಹೆಣ್ಣೊಂದು
ನನಗೊಂದು ನಮ್ಮಪ್ಪಗೊಂದು
ತೆರಕೊಟ್ಟು ತರುವ ಹಾಗಿದ್ದರೆ ಮುದುಕನು
ನಮ್ಮಪ್ಪ, ಹುಡುಗನು ನಾನು.

೮೮

ಅಷ್ಟದಿಕ್ಪಾಲಕರು ಬಂದು ವಂಚಿಸಿದರು
ನಿಷ್ಠೆಯಿಂದಿರುವಂಥ ಸತಿಯು
ಭ್ರಷ್ಟಳಾಗುವುದಿಲ್ಲವಿದನು ನೀನರಿತಿರು
ದೃಷ್ಟವು ದಮಯಂತಿ ಕಥೆಯು.

೮೯

ಗೊಂದಲದೊಳು ನೊಂದು ಬೇನೆಯನುಂಡೆನು
ಬಂಧನದೊಳು ಬಳಲಿಹೆನು
ಸಂಸಾರದೊಳು ಬೆಂದು ಬೇಸರಗೊಂಡೆನು
ಶಾಂತಿಯನರಸುತಲಿಹೆನು.

೯೦

ಲೋಲ ತಾರೆಗಳೆಸೆವಿರುಳಿನ ಮೊಗವನು
ರಾಗದಿಂದೆಳೆಯೆ ಚಂದ್ರಮನು
ಅರಿಯಳು ಕಳಚಿದ ಕತ್ತಲೆಯುಡೆಯನು
ಒಲವಿನಭರದೊಳು ತಾನು.

೯೧

ಕುಡಿಹುಬ್ಬು ಬಿಲ್ಲಾಗೆ ಕಡೆನೋಟ ಕಣೆಯಾಗೆ
ಬಂದೆ ನೀ ಶಬರಿಯ ಹಾಗೆ
ಬೇಟೆಗೆ ಗುರಿಯಾಗಿ ಬಂದೆ ನಾನೆದುರಿಗೆ
ಮನವಾಯಿತೆರಳೆಯ ಹಾಗೆ.

೯೨

ಬಿದ್ದಳೊ ಎಂದೊಳಗಿದ್ದವರಂಜುತೆ
ಕಾತರಗೊಳ್ಳುವ್ರೊಲೆಸಗಿ
ಹೂವ್ರೊಂದು ಬಳ್ಳಿಯಿಂದುದುರಿದುದೆಂಬಂತೆ
ಬಸ್ಸಿನಿಂದಿಳಿದಳು ಬೆಡಗಿ.

೯೩

ಮಹಿಮರ ಮಹಿಮೆ ತಾನುಳಿದಿಹುದವರಿಗೆ
ಅನ್ಯರನೆರೆಯದವರೆಗೆ
ಬಲಿಯನು ಬೇಡಿದಂದಾದಿ ನಾರಾಯಣ
ವಾಮನನಾದನು ಕಾಣ.

೯೪

ಯುದ್ಧವೊಂದಿರಬೇಕು ಯುದ್ಧದಿಂದಲೆ ಬದುಕು
ಯುದ್ಧದಿಂದಲೆ ಜಗಕೆ ಬೆಳಕು
ಮಾನವ ಕುಲಕೋಟಿ ಕೋಟಿಯುದ್ಧವ ಹೂಡಿ
ಉದ್ಧಾರವಾಗಿದೆ ನೋಡಿ.

೯೫

ದ್ಯುತಿಗುಂದಿದರ್ಕನು ಪಡುಗಡೆ ನೋಡಿರಿ
ಮುಳುಗುತಲಿರುವನು ಭರದೆ
ಉದಯವು ಪತನಕೆ ಕಾರಣವೆಂದು ಸಿರಿ-
ವಂತರಿಗರುಹುವ ತೆರದೆ.

೯೬

ದೋಷವು ಸಹ ಗುಣವೆನಿಸುವುದಾತನು
ಬಂದರೆ ಒಡೆಯರ ಮನಕೆ
ಹೆಳವನು ಅರುಣನು ಆದರು ಸೂರ್ಯನು
ಕರೆದನು ಸಾರಥಿತನಕೆ.

೯೭

ಜಲಧಿಯ ನಾ ಬಹು ಹಿರಿಯನೆಂದೆನದಿರು
ನೀನಲ್ಪ ತೆಗೆ ಸಾಕು ಪೊಗರು
ಕುಡಿಯುವ ನೀರನು ಮತ್ತೆಲ್ಲೊ ತರುವರು
ನಿನ್ನೊಳು ಚರಿಸುವಂಬಿಗರು.

೯೮

ಮುಖದ ಪ್ರಶ್ನಾರ್ಥಕ ಚಿನ್ಹೆಯನಳಿಯಿಸು
ಹುಬ್ಬಿನ ಗಂಟನು ಬಿಡಿಸು
ನನ್ನನುನಯದಿನಿನುಡಿಗಳನಾಲಿಸು
ಒಡವ ಜೀವವನುಳಿಸು.

೯೯

ಬೀಸುವ ಕೈಯೊಂದು ಹುಟ್ಟಿನ ಪೋಲಾಗೆ
ಸೆರಗು ಹಾಯಿಯ ಪಟವಾಗೆ
ಗಾಳಿಯ ಕಡಲೊಳು ತೇಲಿಸಿ ಬಿಟ್ಟಳು
ತನುವೆಂಬ ದೋಣಿಯನಿವಳು.

೧೦೦

ವನವೆಲ್ಲ ಗಂಧದ ಮರವಾಗಲೆನುವರು
ಕೆಲರನುಭವವಿರದವರು
ಒಮ್ಮೆ ಹಾಗಾದರೆ ನೀರೊಲೆಗಿಡುವರು
ಗಂಧದ ಮರವನೆ ಜನರು.

ಆರನೆಯ ನೂರು

೧

ಬ್ರಹ್ಮ ಮುರಾರಿ ಸುರಾರ್ಚಿತಲಿಂಗವೆ
ನಿನಗಿದೊ ಕೈಯ ನಾ ಮುಗಿವೆ
ನಿರ್ಮಲ ಭಾಸಿತ ಶೋಭಿತ ಲಿಂಗವೆ
ಪಾಲಿಸು ನನ್ನನೆಂದೆರೆವೆ.

೨

ಏಗಿರಿವಾಸವೊ ಏನುಪವಾಸವೊ
ಏಸುಕಾಲದ ತಪವೊ ಜಪವೊ
ಈ ಅರಗಿಳಿಯಿಂದು ಕಚ್ಚಿತು ನಿನ್ನಯ
ಕೆಂಪನೆ ತೊಂಡೆಯ ತುಟಿಯ.

೩

ಕಾಣದ ತಳದೊಳು ರತ್ನವನವಿತಿಟ್ಟು
ತೃಣವನು ಶಿರದೊಳು ತೊಟ್ಟು
ನೀನುರವಣಿಸಿದರೇನು ಸಮುದ್ರವೆ
ರತ್ನ ರತ್ನವೆ ತೃಣ ತೃಣವೆ!

೪

ಮಾವಿನ ಬೇವಿನ ಬೇರುಗಳೊಂದಾಗಿ
ನೆಲದೊಳು ಹೆಣೆದುಕೊಂಡಾಗ
ಮಾವಿನ ಸಿಹಿ ಹೋಗಿ ಬೇವಿನ ಕಹಿಯಾಗಿ
ಮಾರ್ಪಾಟುಗೊಳುವುದು ಬೇಗ.

೫

ಟಾಂಗ, ರಿಕ್ಷಾಗಳ ಸೆಳೆಗೊಳಗಾಗದೆ
ನಿಂತೆ ತಾಸಿನ ತಪಗೈದೆ
ಪ್ರತ್ಯಕ್ಷವಾಯಿತು ಕಡೆಗೊಮ್ಮೆ ಆ ಬಸ್ಸು
ಫಲಿಸಿತು ನನ್ನ ತಪಸ್ಸು.

೬

ಕ್ಷಣಕ್ಷಣಗಳು ಕೂಡಿ ವರುಷಗಳಾದವು
ಕ್ಷಣವನುಪೇಕ್ಷಿಸಬೇಡ
ಕಣಕಣಗಳು ಕೂಡಿ ಕಡಲುಗಳಾದವು
ಕಣವನು ಕಡೆಗಣಿಸಬೇಡ.

೭

ಧರಣಿಯ ಹೊರೆಯೊಳು ತಿಣುಕುವ ಫಣಿ ಮೇಲೆ
ಹಾಯಾಗಿ ಹರಿ ಮಲಗಿಹನು
ಶ್ರೀಮಂತರಾದವರರಿಯರೆಂದನುವೋಲೆ
ಹೆರವರ ಕಟುವೇದನೆಯನು.

೮

ಕಟ್ಟಿಗೆಯ ಹೊರೆಯನೆ ಹೊತ್ತರು ತಲೆಯೊಳು
ತುರುಬಿನೊಳಿರಲೊಂದು ಹೂವು
ಹೊರೆ ಭಾರವಾದಾಗ ಹೂವಿನ ಕಂಪೊಳು
ಕಡಿಮೆಯೆಂದೆನಿಪುದು ನೋವು.

೯

ಅರಿಯದ ತಾಣದೊಳರಿತವನಂದದೆ
ವ್ಯವಹರಿಪುದು ತರವೇನು
ಕೀಲನು ಕಳಚಿದ ಕೋಡಗನಂದದೆ
ಕೇಡನ್ನೈದುವನಂಥ ನರನು.

೧೦

ಕಾಡಿಗೆ ಕಣ್ಣವರು ಹೀಲಿಯ ತುರುಬವರು
ನೀಲಿಯ ಶಾಲೆಯುಟ್ಟವರು
ಕತ್ತುರಿ ಬೊಟ್ಟವರು ಸರಿದರು ಜನಗಳು
[illegible]

೧೧

ಹೊಸಮಳೆ ಬಂದಿತೆಂದೆನಗಾಯಿತಾನಂದ—
ವಿದು ಬರಿಮಳೆಯಲ್ಲವೆನಗೆ
ಕಾಡಿನ ಹೂಗಳು ಘಮಘಮ ಬಿರಿವುದ
ಕಾಂಬೆನು ಹನಿಹನಿಯೊಳಗೆ.

೧೨

ಮಾಂಸದ ಮುದ್ದೆಯು ವರಪಯೋಧರವೆಂದು
ಮುಖಮಧುವೆಂದು ಲಾಲವನು
ಮಾಂಸಾಸ್ಥಿಕೂಟವನಮಳಜಘನವೆಂದು
ತಿಳಿವನು ಕಾಮುಕಾತರನು.

೧೩

ಕಾಮನ ಪ್ರಜೆಯೊಳಸುಗೆಯು ಕೈಯಿಂದೆ
ನೀನಿಂದು ಮುಟ್ಟಿದ ಕತದೆ
ತೋರ್ಪುದು ಕಣ್ಣಿಗೆ ಮೂಡಿತಶೋಕದೆ
ಮತ್ತೊಂದು ಚಿಗುರೆಂಬ ತೆರದೆ.

೧೪

ಉದ್ಯಮವಿರಬೇಕು ಕಾರ್ಯದ ಸಿದ್ಧಿಗೆ
ಬರಿಯ ಮನೋರಥ ಸಲ್ಲ
ಮೃಗತತಿ ಮಲಗಿದ ಸಿಂಹದ ಬಾಯಿಗೆ
ತಾನಾಗಿ ಬೀಳುವುದಿಲ್ಲ.

೧೫

ಮಹಿಮರ ಮಹಿಮೆ ತಾನುಳಿದಿಹುದವರಿಗೆ
ಅನ್ಯರನೆರೆಯದವರೆಗೆ
ಬಲಿಯನು ಬೇಡಿದಂದಾದಿ ನಾರಾಯಣ
ವಾಮನನಾದನು ಕಾಣ.

೧೬

ನಿಶ್ಚಲವಾದಂಥ ಭವಿತವ್ಯತೆಯನುಂತೆ
ಓಡಿ ತಪ್ಪಿಸಿಕೊಳ್ಳಲರಿದು
ಹಕ್ಕಿಯ ಪುಕ್ಕಕೆ ಹತ್ತಿದ ಉರಿಯಂತೆ
ಅದು ನಿನ್ನ ಬೆನ್ನಟ್ಟಿಬಹುದು.

೧೭

ನಡು ಸಣ್ಣದಾದರೆ ಮನ ದೊಡ್ಡದಾದರೆ
ಕಾಂತೆ ಮೆಚ್ಚಾಗುವೆ ನೀನು
ನಡು ಮನಗಳ ಗಾತ್ರ ತಿರುಗುಮುರುಗಾದರೆ
ಮತ್ತೆ ನಾ ಹೇಳುವುದೇನು.

೧೮

ಮೌನದ ನೋಟವನೇತಕೆ ಬೀರುವೆ
ನನ್ನನಿಂತಿರಿವುದು ತರವೆ
ತಪ್ಪಿತು ಬಸ್ಸು ಹೊತ್ತಾಯಿತು ಬಂದೆನು
ಅದಕೆಂತು ಮುನಿಸೆಂಬುದೇನು.

೧೯

ಕೇಳದೆ ಹೋದರು ತಾವರೆ ಹೂವನು
ತಾನಾಗಿ ರವಿ ಬಿರಿಸುವನು
ಕೇಳದೆ ಹೋದರು ನೈದಿಲೆಯರಳನು
ತಾನಾಗಿ ಶಶಿ ನಗಿಸುವನು.

೨೦

ತಿಂಗಳ ಬೆಳಕಂತೆ ಕಣ್ಣಿಗೆ ಇನಿಯಳು
ಸುರೆಯಂತೆ ಮದಕ ಕಾರಣಳು
ಪ್ರಭುತೆಯ ತೆರನಂತೆ ಜನರನು ಸೆಳೆವಳು
ಎಲ್ಲರಂತಲ್ಲವೀ ಇವಳು.

೨೧

ಪತ್ತೆಡೆ ಯೊಳು ತೋಡಿ ಒಂದಡಿಯಷ್ಟನು
ಬರಲಿಲ್ಲ ನೀರೆನ್ನಬೇಡ
ಒಂದೆಡೆಯೊಳು ತೋಡು ಪತ್ತಡಿಯಷ್ಟನು
ಚಿಮ್ಮುವುದುದಕವು ನೋಡ.

೨೨

ಅವಳು ಗುಣರೂಪ ಶುದ್ಧಳಾದವಳು
ಸಹಜಳು ಸತ್ಯ ನಿರ್ಮಲಳು
ಅವಳು ಪತಿಗನುಕೂಲೆಯೆಂದೆನಿಪಳು
ನಾರಿಯಲ್ಲವು ಗೌರಿಯವಳು.

೨೩

ಕಾಲೇಜು ಹುಡುಗಿಯ ಕದ್ದು ನೋಡುವುದೇಕೆ
ತೆಗೆ ನಿನ್ನ ಕಪ್ಪು ಕನ್ನಡಕ
ಅವರಿವರನು ಕಂಡು ಹುಚ್ಚಾಗದಿರು ಜೋಕೆ
ಕೊನೆಮಾಡು ಬಿಡು ಸಾಕು ಕುಹಕ.

೨೪

ಮಿನುಗಿದರೇನಂತೆ ಮತಿಯಿಲ್ಲದವರಂತೆ
ಪಥ ಕಾಣದಲೆ ಇಂದ್ರಗೋಪ
ಮುಂದೆ ಮುಗ್ಗರಿಸುವ ಕತ್ತಲೊಳೋರಂತೆ
ಹಿಂಬದಿಗಾಯಿತು ದೀಪ.

೨೫

ಅಸಿಯಳ ಮೊಲೆಗಳ ಚೆಲುವಿನೊಳೋರಂತೆ
ನಾಟಿದ ನೋಟವನೆಳೆದು
ಯುವಕನು ಬೇರ್ಕೆರಸೆತ್ತುವನೆನುವಂತೆ
ಮುಡಿ ಕಡು ನಡುಗುತಲಿಹುದು.

೨೬

ಒಳ್ಳೆಯದನು ಮಾಡು ಎಲ್ಲಡೆಯೊಳು ನೀನು
ಬಲ್ಲಂತೆ ಎಲ್ಲ ರೀತಿಯೊಳು
ಒಳ್ಳೆಯದನು ಮಾಡು ಕೈಲಾಗುವಷ್ಟನು
ಎಲ್ಲರಿಗೆಲ್ಲ ವೇಳೆಯೊಳು.

೨೭

ನಾಗೋಲಿ ದಿನದೊಳೆ ಮದುವೆಯ ಸೊಗವನು
ಬಣ್ಣಿವುದೇತಕೆ ತಾಳು
ನಾಲ್ಕನೆ ವರುಷದೊಳಿದರೆಲ್ಲ ಚೆಲುವನು
ಬಣ್ಣಿಪುದಾದರೆ ಹೇಳು.

೨೮

ಭಾವಗೀತೆಯು ಹಾಗೆ ಹಳ್ಳಿಯ ಜೀವನ
ದೇವನೆ ಈ ಗೀತಕಾರ
ರುದ್ರನಾಟಕದಂತೆ ನಗರದ ಜೀವನ
ನರನೆ ಈ ನಾಟಕಕಾರ.

೨೯

ಅನುಭವ ಶಾಲೆಯ ಶುಲ್ಕ ದುಬಾರಿಯು—
ದಲ್ಲಿ ರಿಯಾಯಿತಿಯಿಲ್ಲ
ಆದರು ಮೂರ್ಖರು ಕಲಿಯಲು ಬೇರೆಯ
ಶಾಲೆಗೆ ಹೋಗುವುದಿಲ್ಲ.

೩೦

ಹಿಂದಿನ ಜನ್ಮದೊಳೆಸಗಿದ ಕರ್ಮವೆ
ದೈವವು ಸುಜ್ಞರ ಮತದೆ
ಅಂತಿರೆ ದೈವದ ಸಿದ್ಧಿಯು ಶಕ್ಯವೆ
ಪುರುಷಕಾರದ ನೆರವಿರದೆ.

೩೧

ಕೂಗುತ ಕರೆಯುತಲತ್ತಿತ್ತಲೋಡುತ
ದೊಣ್ಣೆಯ ತಿರುವುತ ಬಂದು
ಬೆಳೆಗಳ ತಿನ್ನುವ ದನಗಳನಟ್ಟುತ-
ಲಿರುವನು ಗೋವಳನಿಂದು.

೩೨

ಹೊತ್ತಿ ದವಾನಲಸುರಿದಾಗ ವನದೊಳು
ಸುಟ್ಟು ಮೇಲುಳಿದುದೆಷ್ಟೆಂದು
ಅಗ್ನಿಯು ಮರವೇರಿ ನೋಳ್ಪೊಂದು ಪರಿಯೊಳು
ಹೂತಮುತ್ತುಗ ಮರವಿಹುದು.

೩೩

ಗುರುಭಾರವಾದರು ಬಳಿಬಂದ ಮುಗಿಲನು
ಹೊರುವುದು ತಲೆಯ ಮೇಲಗವು
ಪ್ರೀತಿಯಿನ್ನೈತಂದ ಮಹಿಮರ ಮಹಿಮೆನು
ಪೂಜಿಪುದಾವ ಸೋಜಿಗವು.

೩೪

ಜಗದರ್ಧಭಾಗಕೆ ಅಧಿಪತಿಯೆನಿಸಿದ
ವಿಶ್ವವಿಜೇತನೆ ಕೊನೆಗೆ
ಹಗೆಗಳ ಕಡೆಯಿಂದಲೆರವಲು ಬೇಡಿದ-
ನಾರಡಿ ನೆಲವನು ತನಗೆ.

೩೫

ಹಸಿಹುಲ್ಲು ತಿನ್ನುವೆ ತಿಳಿನೀರು ಕುಡಿಯುವೆ
ತಂಪಾಗಿ ಮಲಗುವೆ ಹೀಗೆ
ಜಿಂಕೆಯೆಹಾಯಾಗಿ ಸೊಗದೊಳು ಬಾಳುವೆ
ನಿನ್ನ ಪ್ಪೊಲಿರುವಾಸೆ ನನಗೆ.

೩೬

ಗಡಿಗೆಯ ಮುಖವೇಕೆ ಗುಡುಗಿನ ದನಿಯೇಕೆ
ಸಿಡುಕಿನ ಪರಿತಾಪವೇಕೆ
ಮಡದಿ ನೀ ನನ್ನನು ಕಾಡುವುದೇತಕೆ
ಬಿಡು ಸಾಕು ಕೋಪವಿದೇಕೆ.

೩೭

ನಿತ್ಯನಿರಂತರ ದುಡಿಯುವುದಾದರೆ
ಕುಂದದೆ ಕುಗ್ಗದೆ ತನುವು
ಅನುಗಾಲ ಬಿಲ್ಲಿಗೆ ತಿರುವೇರಿಸಿಟ್ಟರೆ
ಮುರಿಯದೆ ಉಳಿವುದೆ ಧನುವು.

೩೮

ಕನ್ನೈದಿಲೆರೆಯನು ಬಂದನು ಕನ್ನೆಯ
ಕೆನ್ನೆಯ ಬೆಳ್ಳನೆಯುವನು
ಬಂದನು ಸೋಮನು ಸೊದೆವನಿ ಸೋನೆಯ
ಸಿಂಪಿಸಿ ತಣ್ಣನೆಯುವನು.

೩೯

ಉನ್ನತಶೀಲರು ಲೋಕಸನ್ಮಾನ್ಯರು
ಮಹಿಮರು ವಿಪುಳ ವರ್ಷಿಗಳು
ಭೂಮಿಯ ತಾಪವ ಕಳೆವರು ಭೂಪರು
ಕಳೆವಂತೆ ಮಳೆಯ ಮೋಡಗಳು

೪೦

ಬೆಚ್ಚನೆ ಬಿಸಿಲತ್ತ ಹಚ್ಚನೆ ಹಾಸತ್ತ
ಒಚ್ಚುತ ನೀನು ವಿರಮಿಸು
ಕಣ್ಣನು ಮುಚ್ಚುತ ಹುಲ್ಲನು ಕಚ್ಚುತ
ಹೊಚ್ಚನೆ ಸೊಗವನನುಭವಿಸು.

೪೧

ಕಣ್ಣು ಕುಂಬಳ ಹೋಳು ಹೊಟ್ಟೆ ಡೊಂಬರ ಡೋಳು
ಕೈಕಾಲು ಬಿದಿರಿನ ಕೋಲು
ಮೂಗು ನೀರಿನ ಹಳ್ಳ ಬಾಯಿ ಬತ್ತದ ಬಳ್ಳ
ಚೆನ್ನಿಯ ಆಕಾರ ಕುಳ್ಳ.

೪೨

ಕೊಟ್ಟಿಗೆ ಮನೆಯಲ್ಲ ಅಟ್ಟವು ದಿವಿಯಲ್ಲ
ಘಟ್ಟವು ಮೇರು ತಾನಲ್ಲ
ನಂಟನು ನೆರೆಯಲ್ಲ ಕುಂಟನು ಜತೆಯಲ್ಲ
ಬಂಟನು ಆಪ್ತ ತಾನಲ್ಲ.

೪೩

ಗಂಟೆಯೆಷ್ಟೆಂದಾಗ ಒಂಬತ್ತಕ್ಕಿನ್ನೈದು
ನಿಮಿಷಗಳೆನ್ನಲು ಹೋಗಿ
ಇದಕ್ಕಿನ್ನೊಂಬತ್ತು ನಿಮಿಷಗಳಿವೆಯೆಂದು
ನುಡಿದಳು ತಿರುಗುಮುರುಗಾಗಿ

೪೪

ಬಂಗಾರದಂತಹ ನಾ ಕೊಟ್ಟ ದಿನವನು
ನೀ ಮಣ್ಣು ಮಾಡಿದೆಯೆಂದು
ಕೆಂಪನೆ ಮುಖಮಾಡಿ ನನ್ನನೆ ನೋಳ್ಪನು
ದಿನಪನು ತಾ ಪೋಗುವಂದು

೪೫

ಧೃತಿ ಮತಿ ದಂಪತಿಯರ ವರಪುತ್ರನು
ವಿಜಯ ಸಿದ್ಧೇಶ್ವರನಿವನು
ಉತ್ಸಾಹ ವಿಶ್ವಾಸರೀತನಿಗಾಪ್ತರು
ಭೃತ್ಯರು ಶೌರ್ಯ ಸಾಹಸರು.

೪೭

ಮೆಟ್ಟಿಲು ಮೆಟ್ಟಿಲು ಹತ್ತಿದರಲ್ಲವೆ
ಬೆಟ್ಟದ ನೆತ್ತಿಯೊಳಿರುವೆ
ಹೆಜ್ಜೆಯ ಹೆಜ್ಜೆಯನೆತ್ತಿಟ್ಟರಲ್ಲವೆ
ಊರಿನ ಸನಿಹಕ್ಕೈತರುವೆ.

೪೭

"ಕಾದಲೆ ಕುಶಲವೆ' 'ಬದುಕಿಹಳೆಲೆ ಜೀಯ'
'ಕುಶಲವ ಕೇಳಿದೆ ಬಾಲೆ'
'ಬದುಕಿಹಳೆಲೆ ಜೀಯ' 'ನುಡಿದದ್ದೆ ನುಡಿವೆಯ ?'
'ಉಸಿರಾಡುತಿದೆ ಸತ್ತಳೆನಲೆ'.

೪೮

ಪರರ ತಪ್ಪೊಂದನು ಜನರು ಟೀಕಿಪರಲ್ತೆ
ತಮ್ಮ ಸಾವಿರ ತಪ್ಪ ಮರೆತು
ನಿನ್ನ ಬಾಲದೊಳೊಂದು ತೂತಿಪುದೆಂದಂತೆ
ಸಾರಣೆ ಸೂಜಿಯ ಕುರಿತು.

೪೯

ಗಂಡಸು ಉರಿಯುವ ಕೊಳ್ಳಿಯಪ್ಪೋಲಂತೆ
ಹೆಂಗಸು ಘೃತಕುಂಭದಂತೆ
ಬೆಂಕಿಯ ತುಪ್ಪವನೊಂದೆಡೆಯಿರಿಸರು
ಅದಕಾಗಿ ಪಂಡಿತೋತ್ತಮರು.

೫೦

ಎಲ್ಲಿಗೆ ಹೋಗುವುದೆಂದಿಗೆ ಸೇರುವು-
ದೇ ದಿಕ್ಕು ರೇವನ್ನು ವರಿವು
ತಮಗಿಲ್ಲದವರಿಗೆ ಮೇಗಾಳಿ ಕಿಗ್ಗಾಳಿ
ಗೊಂದಲವೇತಕೆ ಹೇಳಿ.

೫೧

ಹತ್ತಾರು ವರುಷದ ಹಿಂದಿನ ನೆನಹೊಂದು
ಚಿತ್ತದೊಳೊತ್ತುವುದೆಂದು
ಉನ್ಮತ್ತರಂದದೊಳಿರುವುದು ಸುಕರವೆ
ಮತ್ತೆ ಮತ್ತಳುವುದು ತರವೆ.

೫೨

ಶಾರದವಾಹಿನಿ ಪುಳಿನಗಳೆಡೆಯನು
ಮೆಲ್ಲನೆ ನಸು ತೋರುತಿಹಳು
ನವವಧು ನಾಚುತೆ ಪೌರವಾರಿನೆಡೆಯನು
ಮೆಲ್ಲನೆ ನಸುತೋರುವೋಲು.

೫೩

ಜನರೆಚ್ಚರಿರುವಾಗ ಚಂಚಲ ನೇತ್ರೆಯೆ
ಅವರ ಚೇತನವನು ನೀನು
ಹಗಲೊಳೆ ಕದಿಯುವೆ ನೀನೆಲ್ಲಿ ಕಲಿತೆಯೆ
ಇಂತಹ ಚೋರ ವಿದ್ಯೆಯನು.

೫೪

ಹಲ್ಲು ದಾಳಿಂಬೆಯ ಬಿತ್ತದ ತೆರನಿಹು-
ದದನೆತ್ತಿಕೊಳ್ಳುವೆನೆಂದು
ಮಾರನ ಅರಗಿಣಿ ಕೊಕ್ಕನು ಚಾಚಿಹು-
ದೆನುವಂತೆ ಮೂಗು ಬಾಗಿಹುದು.

೫೫

ದಾರಿದ್ರ್ಯ ಲಕ್ಷ್ಮಿಯೆ ನೀ ಕೊಟ್ಟ ಅಂಜನ-
ವದ್ಭುತ ಕೋ ಲಕ್ಷ ನಮುನ
ನಾ ಕಂಡನೆಲ್ಲರನಾರು ಕಾಣರು ನನ್ನ
ಪರಿಚಯವಿದ್ದರು ಮುನ್ನ.

೫೬

ತಣ್ಣನೆ ನೆಳಲನು ಹೆರರಿಗೆ ನೀಡುವೆ
ಬಿಸಿಲಿಗೆ ನೀ ತಲೆ ಕೊಡುವೆ
ಸಜ್ಜನರಂದದೆ ನೀನಿಹೆ ವೃಕ್ಷವೆ
ಹೆರರಿಗಾಗಿಯೆ ಹಣ್ಣು ಬಿಡುವೆ.

೫೭

ಬೇಡುವುದಿಲ್ಲವೊ ನಿನ್ನ ಜೀವನವನು
ಚಾತಕ ಪಕ್ಷಿಯವೋಲು
ಸಂತುಷ್ಟನಾಗುವ ದನಿಮಾತ್ರದೊಳು ನಾನು
ಜಲಧರಗೆಂದಿತು ನವಿಲು.

೫೮

ಕುಮುದನಾಥನು ಬಂದ ನೇತ್ರಾನಂದನು ಬಂದ
ಚಾರು ಸುಧಾಕರ ಬಂದ
ವ್ಯೋಮಸರೋವರ ರಾಜಹಂಸನು ಬಂದ
ಚಿತ್ತರಂಜನಲೋಲ ಬಂದ.

೫೯

ಒಣಕಲು ಗೌರಿಯನಿಣಿಕಿಣಿಕಿ ನೋಡಿದ-
ನೆಮ್ಮೂರ ಡೊಳುಹೊಟ್ಟೆ ಮಾದ
ವರಸಾಮ್ಯ ಚೆನ್ನಹುದೆಂದು ಕೊಂಡಾಡಿದ-
ರಿನ್ನಷ್ಟು ಉಬ್ಬಿದ ಹೃದ.

೬೦

ಕೆಲವರು ಸುತ್ತುತ್ತ ಕಾಡು ಮೇಡಲೆದರು
ಬಂದರು ಹಣ್ಣನು ತರದೆ
ಸಿಗಲಿಲ್ಲವೆಂದರು ಕಣ್ಣಿದ್ದು ಕುರುಡರು
ಸುಳಿದರು ಅತ್ತಿತ್ತ ಬರಿದೆ.

೬೧

ಈ ಚಿಂತೆ ಆ ಚಿಂತೆಯೆಂದಿಂತಿದೇನುಂತೆ
ಆಕುಲಗೊಳುವುದೆ ನೀನು
ಬಂದದ್ದು ಬರಲೆಂದು ಧೈರ್ಯದಿಂದಿರು ಕಾಂತೆ
ನೂಕಾಚೆ ಮನದ ಶಂಕೆಯನು.

೬೨

ಕತ್ತೆಗೆ ಕೇಸರಿ ಭಾತಿನ ರುಚಿಯೇಕೆ
ಮಣಿಹಾರ ಬೇಕೆ ಸೂಕರಗೆ
ಕಾವ್ಯಕಥಾಮೃತದಾಸ್ವಾದವೇತಕೆ
ಮೂರ್ಖಶಿಖಾಮಣಿ ನಿನಗೆ.

೬೩

ಹೆದ್ದಾರಿಯೊಳು ಮರವಿದ್ದರೆ ಕಡಿವರು
ಸೊಪ್ಪಿಗೆ ಸೌದೆಗೆ ಜನರು
ಬೆಳ್ಳನೆ ಕಪ್ಪನೆ ಪಟ್ಟೆಯನೆಳೆವರು
ಬಣ್ಣದ ಚೀಟಿ ಹಚ್ಚುವರು.

೬೪

ಹೂ ಬಂಡನುಣ್ಣುವ ಜೇನಿನ ನೊಣದಂತೆ
ನಿರ್ಮಲ ಭಕ್ತನ ಮನವು
ಸಿಕ್ಕಿದ ಕಡೆ ಹಾರಿ ಕೂರುವ ನೊಣದಂತೆ
ಲೌಕಿಕ ವ್ಯಕ್ತಿಯ ಮನವು.

೬೫

ತಮ್ಮ ಸಂಪತ್ತನು ಸಜ್ಜನರೆಲ್ಲರಿ–
ಗೀಯುವ ಗುಣವಂತರೆಷ್ಟು
ಸಿಹಿಯಾದ ಮಾಗಿದ ಹಣ್ಣನು ಪಾಂಥರಿ–
ಗೀಯುವ ವೃಕ್ಷಗಳೆಷ್ಟು

೬೬

ದುಡಿದು ನಾ ಸಣ್ಣಾದೆ ದುಡಿದು ನಾ ಹಣ್ಣಾದೆ
ದುಡಿಮೆಗೆ ಫಲವಿಲ್ಲವೆಂದೆ
ರಜರೂಪಿ ಭಗವಂತನೆಂದಿಗೃತಹನೆಂದೆ
ಅವನೆಯು ಗತಿ ನನಗೆಂದೆ.

೬೭

ಬಿರುಗಾಳಿ ಬಂದಾಗ ತರಗೆಲೆಯಾದರು
ಹಾರುವುದಾಕಾಶದತ್ತ
ತೆರೆತೆರೆಯುದ್ದಾಗ ನೊರೆಗುಳ್ಳೆಯಾದರು
ಬಿಬ್ಬನೆ ಬಿರಿವುದುನ್ಮತ್ತ.

೬೮

ಎಳ್ಳು ಕೊಬ್ಬರಿ ಬೆಲ್ಲ ಕಬ್ಬು ಬಾಳೆಯಹಣ್ಣು
ಪ್ಲಾಸ್ಟಿಕ್ಕು ಬುಟ್ಟಿಯೊಳಿಟ್ಟು
ಸ್ಕೂಟರಿನೊಳು ಬಂದಳೆಳ್ಳು ಬೀರುವ ಹೆಣ್ಣು
ಸಂಕ್ರಾಂತಿ ನೋಂಪಿಯ ತೊಟ್ಟು.

೬೯

ನಾನಿಂದು ಧರ್ಮದೊಳಿದ್ದರೆ ಕರುಣಿಸು
ಅಲ್ಲಿಯು ನೆಲೆ ನಿಲ್ಲುವಂತೆ
ನಾನಿಂದಧರ್ಮದೊಳಿದ್ದರೆ ತೆಗೆಯಿಸು
ಅಲ್ಲಿಯು ನೆಲೆ ನಿಲ್ಲದಂತೆ.

೭೦

ಗರಳದ ಸಾವಿರ ಹೆಡೆಯನು ಹೊತ್ತರು
ಗರ್ವವು ವಾಸುಕಿಗಿಲ್ಲ
ಚೇಳಿಗೆ ಗರಳವು ಹನಿಮಾತ್ರವಿದ್ದರು
ಕೊಂಡಿಯನೆತ್ತಿದೆಯಲ್ಲ.

೭೧

ಯೋಚಿಸಿ ಯೋಜನೆಯೊಂದನು ಹೊಂದಿಸು
ಅದರಂತೆ ಬಾಳನು ನಡಸು
ಬಾಳಿನ ಹೊಳೆಯೊಳು ಕಸದಂತೆ ತೇಲಿದ-
ರಾಗದು ಗುರಿಬೇಕು ಕಂದ.

೭೨

ಘನ ಪಂಡಿತೋತ್ತಮರಿಲ್ಲದ ಸಭೆಯೊಳು
ಸನ್ಮಾನ್ಯರಪರಲ್ಪವಿದರು
ಬಹುದೊಡ್ಡ ಮರಗಳು ಬೆಳೆಯದ ಊರೊಳು
ಹರಳಿನ ಗಿಡವೆ ಹೆಮ್ಮರವು.

೭೩

ತಂತಿಯಿಲ್ಲದ ವೀಣೆ ಲೋಕದೊಳಿನ್ನಿಲ್ಲ
ಚಕ್ರವಿಲ್ಲದ ರಥವಿಲ್ಲ
ನೂರು ಮಕ್ಕಳ ತಾಯಿಯಾದರು ಪತಿಯಿಲ್ಲ-
ದವಳಿಗೆ ಸುಖವೆಂಬುದಿಲ್ಲ.

೭೪

ದುಡಿಯುತಲಿದ್ದರೆ ಜೀವನದುದ್ದಕೆ
ಸುಬ್ಬನು ಸೋಮನ ಹೊಲಕೆ
ಸೋಮನು ಧನಿಕನು ಮುಂದೈದುವರ್ಷಕೆ
ಕೂಲಿಯೊಂದೆನ್ನುವರಿದಕೆ.

೭೫

ಜೀವನವೆನುವುದು ಬರಿಸುಳ್ಳು ಬರಿಜೊಳ್ಳು
ಹೀಗೆನುವವರುಂಟು ಕೆಲರು
ಒಪ್ಪಿಗೆ ನನಗಿದು, ಆಸೆಯ ಕುಸುರೆಳ್ಳು
ತಿನಿಸುವರಲ್ಲರು ಬುಧರು.

೭೬

ಹಗೆಂ ಒಬ್ಬನಿರಬೇಕು ಆವನನು ಯುದ್ಧದೆ
ಗೆಲ್ಲುವ ಛಲಬೇಕು ಕೇಳು
ಪೌರುಷ ಸಾಹಸಕವಕಾಶವಿರದಿರೆ
ವ್ಯರ್ಥವೇನಲ್ಲವೆ ಬಾಳು.

೭೭

ಮಗ ಇಲ್ಲದವನಿಗೆ ಮನೆಯೆಲ್ಲ ಶೂನ್ಯವು
ಕೆಳೆಯಿಲ್ಲದವಗೂರು ಶೂನ್ಯ
ಮೂರ್ಖನಾದವನಿಗೆ ದೆಸೆಯೆಲ್ಲ ಶೂನ್ಯವು
ಬಡವನಿಗೆಲ್ಲವು ಶೂನ್ಯ.

೭೮

ಹರಿ ಹೋಗಿ ಹಾವಿನ ಹಾಸಿಗೆ ಹಿಡಿದನು
ಶಿವ ಹಿಮಗಿರಿಯ ಹತ್ತಿದನು
ಗಗನಯಾತ್ರಿಗಳಾದರಾ ಸೂರ್ಯಚಂದ್ರರು
ಎಲ್ಲರು ತಿಗಣೆಗಂಜಿದರು.

೭೯

ಎಷ್ಟು ತಿಕ್ಕಿದರೇನು ಎಷ್ಟು ತೊಳೆಗಿದರೇನು
ಹಿತ್ತಾಳೆ ಬಂಗಾರವಲ್ಲ
ಮಣಭಾರ ಚಿನ್ನವ ಹೊತ್ತರೆ ಬಂತೇನು
ಬಡತೊತ್ತು ದೊರೆಸಾನಿಯಲ್ಲ.

೮೦

ಬಾಳೆಹಣ್ಣಾದರು ತಿನ್ನಿರಿ ನೀವೆಂದು
ಒತ್ತಾಯ ಮಾಡಿದರವರು
ಬಾಳೆ ಹಣ್ಣಾಗಿದೆ ಬೇರೊಂದು ಬೇಡೆಂದು
ನುಡಿದೆ ನಾ ನಕ್ಕರು ಕೆಲರು.

೮೧

ಥಳಥಳ ಹೊಳೆಯುವ ಚಿನ್ನಕೆ ಕಂಪಿಲ್ಲ
ಭಲೆಯೆಂಬರಿಲ್ಲವೊ ಕವಿಗೆ
ಘಮಘಮಗುಟ್ಟುವ ಕಸ್ತೂರಿ ಕೆಂಪಿಲ್ಲ
ಅಯ್ಯಯ್ಯೊ ಕಣ್ಣಿಲ್ಲ ವಿಧಿಗೆ.

೮೨

ನವ್ಯಕಾವ್ಯವ ಕುರಿತೊಬ್ಬರು ಹಿರಿಯರು
ಹಿಂದೊಮ್ಮೆ ಹೀಗೆ ಹೇಳಿದರು
ಕೃತಿಯೊಳು ಕಾವ್ಯವು ಹೆಚ್ಚಾಗಿ ತೋರಲಿ
ನವ್ಯವು ಕಡಿಮೆಯಾಗಿರಲಿ.

೮೩

ಬಸ್ಸಿನಿಂದಿಳಿದು ಹೋದವಳನು ನೀನುರೆ
ನೆನೆದು ಚಿಂತಿಸುವುದು ತರವೆ
ನೋಡು ಕಂಡಕ್ಟರು ಕೊಡುವನು ಚಿಲ್ಲರೆ
ತೆಗೆದುಕೊ ಮುಸುಕಿತೆ ಮರವೆ.

೮೪

ಸಂಸಾರವೆನುವುದು ಬಹುದೊಡ್ಡ ಸರ್ಕಸ್ಸು
ಇದ ನಡೆಸುವುದೆ ತಪಸ್ಸು
ಹುಲಿ ಕರಡಿಗಳಿಂದ ಸಾಮುಮಾಡಿಸಬೇಕು
ಹೊಡಿ ಮೂರುಲಾಗವನಬೇಕು.

೮೫

ನಳನು ಕಾಡನು ಸೇರಿ ಕಡುತಾಪವಡೆದರು
ಪಡೆದನು ಮರಳಿ ರಾಜ್ಯವನು
ಬೆಟ್ಟದಂತಹ ಕಷ್ಟವಿದ್ದರು ಸುಜನರು
ಪಡೆವರು ಕೊನೆಗೆ ಸೌಖ್ಯವನು.

೭೬

ಹಗೆ ಒಬ್ಬನಿರಬೇಕು ಅವನನು ಯುದ್ಧದೆ
ಗೆಲ್ಲುವ ಛಲಬೇಕು ಕೇಳು
ಪೌರುಷ ಸಾಹಸಕವಕಾಶವಿರದಿರೆ
ವ್ಯರ್ಥವೇನಲ್ಲವೆ ಬಾಳು.

೭೭

ಮಗನಿಲ್ಲದವನಿಗೆ ಮನೆಯೆಲ್ಲ ಶೂನ್ಯವು
ಕೆಳೆಯಿಲ್ಲದವಗೂರು ಶೂನ್ಯ
ಮೂರ್ಖನಾದವನಿಗೆ ದೆಸೆಯೆಲ್ಲ ಶೂನ್ಯವು
ಬಡವನಿಗೆಲ್ಲವು ಶೂನ್ಯ.

೭೮

ಹರಿ ಹೋಗಿ ಹಾವಿನ ಹಾಸಿಗೆ ಹಿಡಿದನು
ಶಿವ ಹಿಮಗಿರಿಯ ಹತ್ತಿದನು
ಗಗನಯಾತ್ರಿಗಳಾದರಾ ಸೂರ್ಯಚಂದ್ರರು
ಎಲ್ಲರು ತಿಗಣೆಗಂಜಿದರು.

೭೯

ಎಷ್ಟು ತಿಕ್ಕಿದರೇನು ಎಷ್ಟು ತೊಳೆಗಿದರೇನು
ಹಿತ್ತಾಳೆ ಬಂಗಾರವಲ್ಲ
ಮಣಭಾರ ಚಿನ್ನವ ಹೊತ್ತರೆ ಬಂತೇನು
ಬಡತೊತ್ತು ದೊರೆಸಾನಿಯಲ್ಲ.

೮೦

ಬಾಳೆಹಣ್ಣಾದರು ತಿನ್ನಿರಿ ನೀವೆಂದು
ಒತ್ತಾಯ ಮಾಡಿದರವರು
ಬಾಳೆ ಹಣ್ಣಾಗಿದೆ ಬೇರೊಂದು ಬೇಡೆಂದು
ನುಡಿದೆ ನಾ ನಕ್ಕರು ಕೆಲರು.

೮೧

ಥಳಥಳ ಹೊಳೆಯುವ ಚಿನ್ನಕೆ ಕಂಪಿಲ್ಲ
ಭಲೆಯೆಂಬರಿಲ್ಲಪ್ಪೊ ಕವಿಗೆ
ಘಮಘಮುಗುಟ್ಟುವ ಕಸ್ತೂರಿ ಕೆಂಪಿಲ್ಲ
ಅಯ್ಯಯ್ಯೊ ಕಣ್ಣಿಲ್ಲ ವಿಧಿಗೆ.

೮೨

ನವ್ಯಕಾವ್ಯವ ಕುರಿತೊಬ್ಬರು ಹಿರಿಯರು
ಹಿಂದೊಮ್ಮೆ ಹೀಗೆ ಹೇಳಿದರು
ಕೃತಿಯೊಳು ಕಾವ್ಯವು ಹೆಚ್ಚಾಗಿ ತೋರಲಿ
ನವ್ಯವು ಕಡಿಮೆಯಾಗಿರಲಿ.

೮೩

ಬಸ್ಸಿನಿಂದಿಳಿದು ಪೋದವಳನು ನೀಸುರೆ
ನೆನೆದು ಚಿಂತಿಸುವುದು ತರವೆ
ನೋಡು ಕಂಡಕ್ಟರು ಕೊಡುವನು ಚಿಲ್ಲರೆ
ತೆಗೆದುಕೊ ಮುಸುಕಿತೆ ಮರವೆ.

೮೪

ಸಂಸಾರವೆನುವುದು ಬಹುದೊಡ್ಡ ಸರ್ಕಸ್ಸು
ಇದ ನಡಸುವುದೆ ತಪಸ್ಸು
ಹುಲಿ ಕರಡಿಗಳಿಂದ ಸಾಮುಮಾಡಿಸಬೇಕು
ಹೊಡಿ ಮೂರುಲಾಗವೆನಬೇಕು.

೮೫

ನಳನು ಕಾಡನು ಸೇರಿ ಕಡುತಾಪವಡೆದರು
ಪಡೆದನು ಮರಳಿ ರಾಜ್ಯವನು
ಬೆಟ್ಟದಂತಹ ಕಷ್ಟವಿದ್ದರು ಸುಜನರು
ಪಡೆವರು ಕೊನೆಗೆ ಸೌಖ್ಯವನು.

೮೭

ಮನೆಯೊಳು ಬೆಚ್ಚಗೆ ಮಲಗಿರುವಾತನು
ತಾನೇನು ಹಿಡಿದಾನು ಮೀನು
ಹಿಡಿವುದು ಸಾಧ್ಯವೆ ಕೋಳಿಯ ಮರಿಯನು
ಕಾಡೊಳು ಮಲಗಿ ಜಂಬುಕನು.

೮೭

ಜಡ್ಜರು ಹೇಳಿದರೀಕೋಲ ತುದಿಯಲಿ
ಕಾಣುತಲಿಹನೊಬ್ಬ ಚೋರ
ಈ ತುದಿಯೊ ಆ ತುದಿಯೊ ಅಪ್ಪಣೆಯಾಗಲಿ
ಎಂದನು ಒಡನೆಯೆ ಚೋರ.

೮೮

ಉಬ್ಬಿದ ಎದೆಯೊಳು ತಗ್ಗಿದ ಪೊಡೆಯೊಳು
ತುಂಬಿದ ಘನ ನಿತಂಬದೊಳು
ಏರು ತಗ್ಗುಗಳಿರುವೀಕೆಯ ತನುವ್ಪೊಳು
ಜಾರನದಾವನು ಹೇಳು.

೮೯

ಮಳೆಗಾಲದೊಳು ನೀನು ಹಾಡುವುದಿಲ್ಲವೆ
ಕೇಳಿತು ಪಿಕವನು ಶುಕವು
ಕಪ್ಪೆಗಳೊಟಗುಟ್ಟುವೆಡೆಯೊಳು ಮೌನವೆ
ಲೇಸೆಂದು ಹೇಳಿತು ಪಿಕವು.

೯೦

ಕುರಿಯನು ತಿನ್ನಲು ಮೆಲ್ಲನೆ ತೋಳನು
ಬಂದರೆ ಮಂದೆಯ ಒಳಗೆ
ನೋಡಿದ ಹುಡುಗನು ಓಡೋಡಿ ಹೋದನು
ಬೇಗನೆ ತಂದೆಯು ಬಳಿಗೆ.

೯೧

ವರ್ತಕನೊಬ್ಬನು ಹೊಸಬ ಗಿರಾಕಿಗೆ
ಉಪದೇಶವಿತ್ತನು ಹೀಗೆ
ಬೇರೆ ಅಂಗಡಿಯಲ್ಲಿ ಮೋಸಹೋಗಲು ಬೇಡಿ
ವ್ಯಾಪಾರ ನಮ್ಮಲ್ಲೆ ಮಾಡಿ.

೯೨

ಶಾಲೆಯ ಮೇಷ್ಟರು ತುಂಟ ವಿದ್ಯಾರ್ಥಿಯ–
ನೆಂದರು ತೋರಿ ತರ್ಜನಿಯ
ಸಭ್ಯರ ಜೊತೆ ನೀನು ಸೇರಲಯೋಗ್ಯನು
ಹೋಗು ಹೆಡ್ಮಾಸ್ಟರ ಬಳಿಗೆ.

೯೩

ಮುಗಿಲು ಮೊಳಗಿದರೇನು ಮಿಂಚು ಮಿಂಚಿದರೇನು
ಸಿಡಿಲು ಬಂದೆರಗಿದರೇನು
ಅಂಜರು ಅಳುಕರು ರಮಣಾಭಿಮುಖಿಯರು
ಅಬಲೆಯರಭಿಸಾರಿಕೆಯರು.

೯೪

ನಿನ್ನೊಳು ನನ್ನೊಳು ಉಳಿದೆಲ್ಲ ಎಡೆಯೊಳು
ಇರುವವನೊಬ್ಬನೆ ವಿಷ್ಣು
ಒಬ್ಬನೆ ಆತ್ಮನ ಕಾಂಬುದೆಲ್ಲದರೊಳು
ನನ್ನೊಳು ಆಗು ಸಹಿಷ್ಣು.

೯೫

ಹಿಂದಿನ ಸೀಟಿನ ಗೆಳತಿಯ ನುಡಿಸುವೆ
ಇದು ಗೊತ್ತು ಬರಿನೆಪ ಜಾಣೆ
ಗೆಳತಿಯ ಹಿಂದೆ ಮತ್ತಾರನೊ ನೋಡುವೆ
ಏನು ಸಂಕೇತವೊ ಕಾಣೆ.

೯೭

ಬದುಕುವುದಲ್ಲದೆ ಸಾಯುವುದಲ್ಲವೊ
ಜೀವಿಗಳೆಲ್ಲರ ಬಯಕೆ
ಕೊಲಬೇಡ ಜೀವಿಯ ನೋಯಿಸಬೇಡವೊ
ದಯವಿರಬೇಕಿಹ ಪರಕೆ.

೯೭

ಅಕ್ಕನಿದ್ದರೆ ಭಾವ ರೊಕ್ಕವಿದ್ದರೆ ಸೂಳ
ಒಕ್ಕೊಳಗ ಹೊನ್ನಿದ್ದವೇಳೆ
ಊರೆಲ್ಲ ನಂಟರು ಜಗವೆಲ್ಲ ಬಂಟರು
ಮಕ್ಕಳು ಮಾತು ಕೇಳುವರು

೯೮

ಅತಿಮಾನದೊಳು ಪತನಾದನು ಕುರುರಾಯ
ಮಿತದೊಳು ನೆಗಳ್ವುದು ವಿಹಿತ
ಅತಿದಾನದೊಳು ಬದ್ಧನಾದನು ಬಲಿರಾಯ
ಅತಿಯನು ತೊರೆವುದು ಸತತ.

೯೯

ಲಕ್ಷ್ಮಿಯಾರಿಳಿಯಿರಿ ಎಂದು ಕಂಡಕ್ಟರು
ವ್ಯಂಗಸೂಚಕವಾಗಿ ನುಡಿಯೆ
'ಲಕ್ಷ್ಮಿಟಾಕೀಸೆನ್ನು' ಎಂದು ಆ ಡ್ರೈವರು
ತಿದ್ದಿದನವನನು ಒಡನೆ.

೧೦೦

ಮನುಜನು ಹುಲಿಯನು ಕಾಡೊಳು ಕೊಂದರೆ
ಬೇಟೆಯೆಂದೆನ್ನುವರದಕೆ
ಆ ಹುಲಿ ಅವನನೆ ತಾ ಕೊಂದು ತಿಂದರೆ
ಬೇಟೆಯೆಂದೆನಬಾರದೇಕೆ.

ಏಳನೆಯ ನೂರು

೧

ದೇವಿ ಕಾವೇರಿಯು ದಕ್ಷಿಣ ಗಂಗೆಯು
ಸರ್ವಶುಭಾಂಗಿವಾಹಿನಿಯು
ಪಾಪವಿದೂರೆಯು ವಾರಿ ತರಂಗೆಯು
ಕಲಿನಾಶಿನಿಯು ತಾಯೆ ಕಾಯು.

೨

ಕಂಡರೆ ದೇವರಿಗೆನ್ನಂಥ ಸಾಮಾನ್ಯ
ಜನರನು ಆನಂದ ಬಹಳ
ದೇವರ ಸೃಷ್ಟಿಯೊಳದಕಾಗಿ ಅತಿಮಾನ್ಯ-
ರಾದವರಿರುವುದು ವಿರಳ.

೩

ಶುನಿಯೊಂದು ನರನನು ಕಚ್ಚಿತು ಎಂದರೆ
ಅದು ಸುದ್ದಿಯಾಗುವುದಿಲ್ಲ
ನರನೊಂದು ಶುನಿಯನು ಕಚ್ಚಿದನೆಂದರೆ
ಅದು ಸುದ್ದಿಯೆನ್ನುವರೆಲ್ಲ.

೪

ಕೂಡಿಡಬಾರದು ಕೊಡಬೇಕು ಹಣವನು
ಕೊಟ್ಟು ತಾನುಣಬೇಕು ನರನು
ಕಂಡವರ್ಕೈತಂದು ಕೂಡಿಟ್ಟ ಜೇನನು
ಕೊಂಡೊಯ್ವರೆನೆ ಪೇಳ್ವುದೇನು.

೫

ಸಿರಿಯನಪಹರಿಸಲಿ ಸೆರೆಯೊಳಗಿರಿಸಲಿ
ತಲೆಯನೆ ತೆಗೆಯಲ್ಕೈತರಲಿ
ಏನಾದರಾಗಲಿ ಜಗದೊಳು ಸಭ್ಯರು
ಕೊಟ್ಟ ಮಾತನು ನಡಸುವರು.

೬

ಕಣ್ಣಿನ ಜೊತೆಯೊಳು ಕೂಡಿದ ಕತದೊಳು
ಕಪ್ಪಿಗೆ ದೊರಕಿತು ಪೆಂಪು
ಹಗ್ಗಕೆ ದೊರಕಿತು ಹೂವಿನ ಕತದೊಳು
ನಾಕದ ಲೋಕದಲಂಪು.

೭

ಸಂಸಾರವಿದು ಬಹು ಸೋಜಿಗವಾಗಿದೆ
ಸತಿಯಾರು ಸುತನಾರು ನಿನಗೆ
ಈ ಹಿಂದೆ ನೀನಾರಿಗೆಲ್ಲಿಂದ ನೀ ಬಂದೆ
ಚಿಂತಿಸಿಂತಿದನಿಷ್ಟು ಕೊನೆಗೆ.

೮

ಪಿಕವಧುವಿನ ಹಾಗೆ ಮೆಲ್ಲಗೆ ನುಡಿವಳು
ನೋಳ್ಪಳು ಹರಿಣಿಯ ಹಾಗೆ
ತುಹಿನಾಂಶುಲೇಖೆಯ ಹಾಗೆಯು ಹೊಳೆವಳು
ನಡೆವಳು ಹಂಸಿಯ ಹಾಗೆ.

೯

ಗುರುತರವಪರಾಧವೆನ್ನಿಂದಲಾಯಿತೆ
ಬಿರುಗಣ್ಣನೇತಕೆ ಬಿಡುವೆ
ವಿಕಳವಾಯಿತೆ ಮತಿ ವಿಸ್ಮೃತಿ ಮುಸುಕಿತೆ
ಉರಿದುರಿದೇತಕೆ ಕೆಡುವೆ.

೧೦

ಕರೆಗೊರಲನು ಬಂದ ಭಸಿತಧರನು ಬಂದ
ರಕ್ತ ಜಟಾಜೂಟ ಬಂದ
ಬಂದ ಫಾಲಾಕ್ಷನು ಬಂದ ಫಣಿಭೂಷನು
ಶಿವ ಬಂದ ಶಶಿಧರ ಬಂದ.

೧೧

ಕವಿ ಸಹೃದಯ ತತ್ವವನು ಕುರಿತೋಜರು
ಉಪದೇಶವಿತ್ತದ್ದು ಬಹಳ
ಶಿಷ್ಯರ ಬರಹಗಳೊಳ್ಳೆಯವಿದ್ದರು
ಓದಿ ಕೊಂಡಾಡಿದ್ದು ವಿರಳ.

೧೨

ಕಾಗೆಯೊ ಕತ್ತೆಯೊ ನಾಯಿಯೊ ತಡೆದರು
ಹೋಹುದು ಹೇಸಿಗೆಯುತ್ತ
ಹಂಸವೊ ಆನೆಯೊ ಸಿಂಹವೊ ಕರೆದರು
ಬಾರದು ಕಸಕಡ್ಡಿಯುತ್ತ.

೧೩

ಹರಿಕಥೆ ಮುಗಿವಾಗ ತಟ್ಟೆಯ ಹುಡುಗನು
ಹತ್ತಿರ ಬಂದುದು ಕಂಡು
ಜಿಪುಣರು ಮೂವರೊಳೊಬ್ಬನು ಬಿದ್ದನು
ನಡೆದರಿಬ್ಬರು ಹೊತ್ತುಕೊಂಡು.

೧೪

ಮರಣಕೆ ಸಮನಾದ ಭಯವಿಲ್ಲ ಬಡತನ-
ಕೆಣೆಯಾದ ಪರಿಭವವಿಲ್ಲ
ಹಸಿವಿಗೆ ಸಮನಾದ ನೋವಿಲ್ಲ ಅಜ್ಞಾನ-
ಕೆಣೆಯಾದ ಖೇದವಿನ್ನಿಲ್ಲ.

೧೫

ಅಂಚೆಗೆ ಹಾಕಲೆಂದೊಯ್ಯುವ ಕಾರ್ಡನೆ
ಕೈಯ ಬೀಸಣಿಗೆಯ ಮಾಡಿ
ಮುಖದೆದುರಾಡಿಸಿಕೊಳುತಿಹಳೊಯ್ಯನೆ
[illegible] ಚೆಡಗಿಯು ಮೋಡಿ ನೋಡಿ.

೧೬

ದಶಶತಕರಧಾರಿ ಕಲ್ಮಷಸಂಹಾರಿ
ಗ್ರಹಗಣ ಮಧ್ಯವಿಹಾರಿ
ಗಗನ ಸಂಚಾರಿ ತಾನಾದರು ರವಿಯನು
ರಾಹು ಬಂದಂಜಿಸಿದಪನು.

೧೭

ಎಂದಿಗು ಹೇಳನು ಬುದ್ಧಿವಂತನು ತನ-
ಗವಕಾಶ ಸಿಗಲಿಲ್ಲವೆಂದು
ಪಲವವಕಾಶಂಗಳನು ತಾಸು ಸುತ್ತಿನ
ಪರಿಸರದೊಳು ಕಾಂಬನಪುದು.

೧೮

ವೈರಾಗ್ಯವಾಯಿತೆ ಸಂಸಾರಸುಖದೊಳ-
ಗನ್ಯಾಯವೆನಿಸಿತೆ ಬದುಕು
ದೈವದ ಇಚ್ಛೆಯನೂಹಿಪುದಸದಳ-
ವೆನೆ ಬೆರಗಾವುದು ಇದಕು.

೧೯

'ಅತ್ತೆಯ ಮನೆಯೊಳು ಮಗಳೆ ನೀ ಹೇಗಿದ್ದೆ'
ಹೆತ್ತಮ್ಮ ಕೇಳಿದಳಿಂತು
'ಮೊಳಕಯಿ ಚಿಲುಕಕೆ ತಗುಲಿದ ಹಾಗಿದ್ದೆ'
ಉತ್ತರ ಮಗಳಿಂದ ಬಂತು.

೨೦

ಬೆಳ್ಳಿಯ ನಾಲಗೆ ಹೊರಳುವ ವಾಗ್ಮಿಗೆ
ಪುಸ್ತಕಬೇಕೆ ಭಾಷಣಕೆ
ನಾಗಸಂಪಿಗೆ ಹೂವು ಮುಡಿಯುವ ನಾರಿಗೆ
ನಾರಿನ ಹಂಬಲವೇಕೆ.

೨೧

ಬೆಳ್ಳನೆ ಉಡೆಯುವರು ಮೊಲ್ಲೆಯ ಮುಡಿಯುವರು
ಮೈಯೆಲ್ಲ ಚಂದನದವರು
ಮುತ್ತಿನ ಸರದವರು ಸರಿದರು ಜನಗಳು
ಅರಿಯರು ಬೆಳುದಿಂಗಳಿನೊಳು.

೨೨

ಆಗಾಗ ತುಸು ಮೌನ ತುಸು ಮುನಿಸಿದ್ದರೆ
ಬಲಿವುದು ಸೋಜನುರಾಗ
ಸೌದೆಯ ತುಸು ಕುಕ್ಕಿ, ಅಲುಗಿಸುತಿದ್ದರೆ
ಒಲೆ ಹೊತ್ತಿ ಉರಿವುದು ಬೇಗ.

೨೩

ತಾನರಿತವನೆನುವುದನರಿತಾತನು
ಜಾಣನು ನೀನನುಸರಿಸು
ಅರಿತವನೆನುವುದರರಿವಿರದಾತನು
ನಿದ್ರಿಪನವನನೆಚ್ಚರಿಸು.

೨೪

ಹಿತವರ ಮನೆಯೊಳು ಗಂಜಿಯ ಕುಡಿದರು
ಅದು ನಮಗಮೃತಕೆ ಸಮನು
ಅಹಿತರ ಮನೆಯೊಳು ಅಮೃತಾನ್ನವುಂಡರು
ನಮಗದು ಗರಳಕೆ ಸಮನು.

೨೫

ಸರಿಯಾದ ಜೋಡಿಯು ಈ ಗಂಡ ಹೆಂಡಿರು
ಕೇಳಿದಳವನನು ಕಾಂತೆ.
ಅಹುದಹುದೆಂದನು ಗೊರೆಯುವನೀತನು
ತಕ್ಕೆಡೆಯೊ ಶತಕೆಷ್ಟಿಯಂತೆ.

೨೬

ಪಾಂಡಿತ್ಯವಿದೆ ಕಾಣ ಚಾತುರ್ಯವಿದೆ ಕಾಣ
ಇದೆಕಾಣ ಸಕಲ ಸುಬುದ್ಧಿ
'ವ್ಯಯವಿರಲಾಯಕೆ ಕಡಿಮೆಯಾಗಿಯೆ ಜಾಣ'
ಇದೆ ಪರಮ ಪರಿತೋಷ ಸಿದ್ಧಿ.

೨೭

ಎಮ್ಮೆ ಬೇಲೂರಲ್ಲಿ ಕರುವು ಆಲೂರಲ್ಲಿ
ಕಲಗಚ್ಚು ಕೋಲಾರದಲ್ಲಿ
ಹಾಲನು ಕುಡಿವನು ವಿಧಿ ಆತುಕೊಂಬಲ್ಲಿ
ಮನೆಯಲ್ಲೇ ಮೈಸೂರಿನಲ್ಲಿ.

೨೮

ಭಾವವು ಹೊಸತೆನೆ ಹಾವವು ಹೊಸತೆನೆ
ಹೊಸತೆನೆ ಮೈಸಿರಿ ಠೀಕು
ಚೆನ್ನೆಯಸೇಕೆಯು ಬೆಸೆದ ವಿಧಾತನ
ಹೊಸಬ ತಾನಾಗಿರಬೇಕು.

೨೯

ಭವದೊಳು ತೊಳಲುವ ದೀನ ಸಂಸಾರಿಯ
ಕುಶಲವ ಎಂದೆನ್ನಲೇಕೆ
ಬೆಂಕಿಯ ಉರಿಯೊಳು ಸಿಲುಕಿದ ಜೀವಿಯ
ಸುಟ್ಟಿತೆ ಮೈಯನ್ನಲೇಕೆ.

೩೦

ಪತ್ನಿಯೆ ಸಕಲ ಸುಖಂಗಳ ಮೂಲವು
ಧಾನ್ಯವೆ ಐಶ್ವರ್ಯ ಮೂಲ
ವಿನಯವೆ ಸಕಲ ಗುಣಂಗಳ ಮೂಲವು
ದರ್ಪವೆ ವಾದದ ಮೂಲ.

೩೧

ಸ್ವಾತಿಯ ಮಳೆಹನಿ ಹಾವಿನ ಬಾಯೊಳು
ಬಿದ್ದರೆ ವಿಷವಾಗಲಿಹುದು
ಅಂಥದೆ ಮಳೆಹನಿ ಕಪ್ಪೆಯ ಚಿಪ್ಪೊಳು
ಬಿದ್ದರೆ ಮುತ್ತಾಗಬಹುದು.

೩೨

ಕಾಣುವ ಕಾತರ ಕಾಣದೆ ಹೋದರೆ
ಕಂಡರೆ ವಿರಹದುಮ್ಮಳವು
ಕಾಣದೆ ಪೋದರು ಕಂಡರು ಭಾಪುರೆ
ನಿನ್ನಿಂದ ನನಗಿಲ್ಲ ಸುಖವು.

೩೩

ಉಪಕಾರವೆಸಗಿದರಪಕಾರಗೈವರು
ಜಗದೊಳು ದುಷ್ಟರಾದವರು
ಹಾಲೆರೆದರೆ ತಾನೆ ಫಲವೇನು ಹಾವಿಗೆ .
ವಿಷವರ್ಧನವೆ ತಾನೆ ಕೊನೆಗೆ.

೩೪

ಸಿಂಹದ ಗುಹೆಯನು ಪೊಕ್ಕರೆ ಸಿಗುವುದು
ದಂತದ ಮುತ್ತಿನ ರಾಸಿ
ಜಂಬುಕದೆಡೆಯನು ಪೊಕ್ಕರೆ ಸಿಗುವುದು
ಗೊರಸಿನ ಚರ್ಮದ ಹೇಸಿ.

೩೫

ಒಳ್ಳೆಣ್ಣೆ ತಂದೆನು ಕೈಯೆಣ್ಣೆಯಾಯಿತು
ನಾನೇನು ಮಾಡಲಿ ಮತ್ತೆ
ಸೊಸೆಯೆಂದ ಮಾತಿನ ಬೆಡಗರಿವಾಯಿತು
[illegible]

೩೬

ತನಗರಿವಿಲ್ಲವೆಂಬರಿವಿಲ್ಲದಾತನು
ಮೂರ್ಖನು ನೀ ದೂರವಿರಿಸು
ತನಗರಿವಿಲ್ಲವೆಂಬರಿವಿರುವಾತನು
ಮುಗ್ಧನು ನೀ ಬುದ್ಧಿ ಕಲಿಸು

೩೭

ಅತಿಥಿದೇವರು ನಮ್ಮ ಮನೆಗೊಮ್ಮೆ ಬಂದಂದು
ಎಲ್ಲರಿಗಾನಂದವಹುದು
ಅಮರರು ನಲಿವರು ಪಿತರರು ಕುಣಿವರು
ಋಷಿಗಳು ಗಾನಮಾಡುವರು.

೩೮

ಆಸೆಯ ಬಿಡಬೇಡ ಭರವಸೆಯಿಂದಿರು
ಮುಂದೊಳ್ಳಿತಾಗುವುದೆಂದು
ಮುಗಿಲಿನ ಮರೆಯೊಳು ಮರಯದಿರವಿತಿರು-
ವನು ಸೂರ್ಯನ್ಯೈತಪನೆಂದು.

೩೯

ಸ್ವಾರಾಜ್ಯ ಭೂರಾಜ್ಯ ಮತ್ತೆ ಭುವ್ವೇರಾಜ್ಯ-
ದೈಶ್ವರ್ಯವೆಷ್ಟಿದ್ದರಿರಲಿ
ಯಾರ ಅಧೀನವು ಅಲ್ಲವೆಂಬವಿಭಾಜ್ಯ-
ತೃಪ್ತಿಯ ಭಾಗ್ಯವನಗಿರಲಿ.

೪೦

ಹಿಂದಾಗಿ ಹೋದುದಕಂದೇಕೆ ಯೋಚನೆ
ಮುಂದೇನು ಎಂದೇಕೆ ಚಿಂತೆ
ವರ್ತಮಾನಕೆ ಹೊಂದೆ ಬಾಳುವ ಧೀರನೆ
ಮಾನ್ಯನು ಮತಿವಂತನಲ್ತೆ.

೩೧

ದಾನವು ಕೈಗಳಿಗೊಪ್ಪುವಾಭರಣವು
ಸತ್ಯವು ಕೊರಳಿಗಾಭರಣ
ಶ್ರೋತ್ರಕೆ ಒಪ್ಪುವಾಭರಣವು ಶಾಸ್ತ್ರವು
ಏತಕೆ ಮಿಕ್ಕ ಆಭರಣ.

೩೨

ಅಜ್ಞಾನವೆನುವುದು ದುಃಖಕಾರಣವೆಂದ–
ರಾಮಾತು ನಿಜವಪ್ಪುದೇನೆ
ಹೊಸಹೊಸತನು ಕುರಿತೆಮಗಾಗುವಾನಂದ–
ವಜ್ಞಾನದಿಂದಲೆ ತಾನೆ-

೩೩

ಸ್ಥಾನವನಾರ್ಜಿಸು ಸಿರಿಯ ಸಂಪಾದಿಸು
ಸಾಧ್ಯವಾದರೆ ಮಾನದಿಂದೆ
ಅಂತಲ್ಲವಾದರೆ ಎಂತಾದರಾರ್ಜಿಸು
ಧನವನು ಪದವಿಯನಿಂದೆ.

೩೪

ಎಲೆ ಮೀನಲೋಚನೆ ಏತರ ಯೋಚನೆ
ಏನೆಂಥ ಯಾಚನೆ ದೀನೆ
ಮಾಚದೆ ಮನವನು ಹೇಳು ನಿನ್ನಿನಿಯನು
ಬಹನೆಂದು ಬಹಲಿಲ್ಲವೇನು.

೩೫

ನೋವಿಲ್ಲದಿರುವಂಥ ಆದಿ ಅಂತ್ಯಗಳಿಲ್ಲ
ಸುಖಕೂಡ ನೋಳ್ಪೊಡೆ ನೋವೆ
ಹೆರರು ನೋವುಂಡರು ಬಂದೆವು ನಾವೆಲ್ಲ
ಪುತ್ತ್ರ ಕೊಳಲೆಸವು ನೊಂದು ನಾವೆ.

೪೬

ಕಾಲವೊಂದಿರಲಾಗಿ ಸಹನೆಯೊಂದಿರಲಾಗಿ
ಉಪ್ಪುನೇರಿಳೆ ಸೊಪ್ಪುಕೂಡ.
ತೆಳ್ಳನೆ ಬೆಳ್ಳನೆ ರೇಸಿಮೆ ನೂಲಾಗಿ
ಮಾರ್ಪಾಟುಗೊಳುವುದು ನೋಡ.

೪೭

ಮರದ ಆ ತುದಿಯೊಳು ನೋಡು ಎತ್ತರದೊಳು
ಸೀಬೆ ಹಣ್ಣಾಗಿದೆ ಹೇಗೆ
ಕಣ್ಣಿಗೆ ಕಂಡರು ಕೈಗೆಟುಕದವೋಲು
ಭವದ ಸುಖಂಗಳು ಹಾಗೆ.

೪೮

ಧನಿಕನು ಒಬ್ಬಟ್ಟು ತಿನುತಾನೆ ಒಬ್ಬಟ್ಟು
ಒಡವನು ಸಹ ತಿನ್ನುತಾನೆ
ನುಡಿದರು ಪಂಡಿತರೆರಡರ್ಥವನ್ನಿಟ್ಟು
ಜನ ಮೆಚ್ಚಿಕೊಂಡರು ಒಡನೆ.

೪೯

ಧರ್ಮದಿಂದರ್ಥವು ಕೈಸಾರಲಿರ್ಪುದು
ಧರ್ಮವು ಸುಖವನಿತ್ತಪುದು
ಧರ್ಮದಿಂದೆಲ್ಲರಿಗೆಲ್ಲವು ದೊರೆವುದು
ಧರ್ಮದ ಸಾರವೀ ಜಗವು.

೫೦

ಉಪ್ಪಿಗೆ ಸಮನಾದ ರುಚಿಯಿಲ್ಲ, ಜ್ಞಾನಕೆ
ಎಣೆಯಾದ ಬಾಂಧವ್ಯವಿಲ್ಲ
ಧರ್ಮಕೆ ಸಮನಾದ ನಿಧಿಯಿಲ್ಲ ಕೋಪಕೆ
ಸಮನಾದ ವೈರಿಯಿನ್ನಿಲ್ಲ.

೫೧

ಸಂಪತ್ತಿನೊಳು ಹೇಗೆ ಆಪತ್ತಿನೊಳು ಹಾಗೆ
ಹಿರಿಯರ ಪರಿಯೊಂದೆಯಲ್ತೆ
ಮೂಡುವಂದಿರುವಂತೆ ಸೂರ್ಯನು ಕೆಂಪಗೆ
ಮುಳುಗುವಂದಿರ್ಪನೋರಂತೆ.

೫೨

ನಾ ಕಾಣದಿದ್ದರು ಕ್ಷಣಕಾಲ ನಿನ್ನನು
ಉತ್ಕಂಠಳಾಗುತೆ ನಾನು . . .
ಇಷ್ಟು ಸಾಕಿನ್ನೊರೆದುಳಿದ ಅಪ್ರಿಯವನು
ನಿನಗಾಗಬೇಕಾದುದೇನು.

೫೩

ಭಕ್ತಿಯ ನೆಪದೊಳು ಗುಡಿಗೆಂದು ನೀ ಬಂದೆ
ಬಂದಳು ಮನದನ್ನೆ ಹಿಂದೆ
ಆಷಾಢಭೂತಿಯು ನಚ್ಚಿನ ಶಿಷ್ಯರು
ನಿಮ್ಮಂತೆ ಬಹುಮಂದಿ ಇಹರು.

೫೪

ಬೇಡ ಸುಧೀರನು ಬೇಡ ವಿದ್ವಾಂಸನು
ಹಡೆತಾಯಿ ಭಾಗ್ಯಶಾಲಿಯನು
ವನದೊಳು ತೊಳಲಿದರಲ್ಲವೆ ಶೂರರು
ಕೃತವಿದ್ಯರವರು ಪಾಂಡವರು.

೫೫

ಶಿಷ್ಯರ ವಿತ್ತವನಪಹರಿಸುವ ಗುರು
ಹಲವರು ಲೋಕದಲಿಹರು
ಶಿಷ್ಯರ ಚಿತ್ತವನಪಹರಿಸುವ ಗುರು
ಜಗದೊಳು [illegible] ದುರ್ಲಭರು.

೫೭

ಸ್ಮರಣೆಗೆಣೆಯಾದ ತಪವಿಲ್ಲ, ಕರುಣೆಗೆ
ಮೀರಿದ ಧರ್ಮ ಮತ್ತಿಲ್ಲ
ತೃಷ್ಣೆಗೆ ಮಿಗಿಲಾದ ರುಜೆಯಿಲ್ಲ ಒಲುಮೆಗೆ
ಮಿಗಿಲಾದ ಸುಖ ಬೇರೆ ಇಲ್ಲ.

೫೭

ನಿರ್ದಯ ಮದನನು ಮೂಳೆಯ ಮುರಿವೊಲು
ಹೂಗಣೆಗಳನೆಸೆದಿಹನು
ಉಳಿವುದೊ ಅಳಿವುದೊ ಜೀವವಿದೆನುವೊಲು
ನಾನಿಲ್ಲಿ ನರಳುತಲಿಹೆನು.

೫೮

ನೀನೊಬ್ಬ ಯಜಮಾನನಾದರೆ ಕೆಲವೊಂದು
ವಿಷಯಕೆ ಕಡುಕುರುಡನಾಗು
ನೀನೊಬ್ಬ ಸೇವಕನಾದರೆ ಕೆಲವೊಂದು
ವಿಷಯಕೆ ಕಡು ಕಿವುಡನಾಗು.

೫೯

ತಲೆಮೇಲೆ ಬರುವುದು ತನ್ನನು ತುಳಿದರು
ಎಂದೆದ್ದ ದಾರಿಯ ಧೂಳು
ಧೂಳಿಗು ಕಡು ಕೀಳು ಪರಿಭವವಾದರು
ಕೆರಳದ ಮನುಜನ ಬಾಳು.

೬೦

ಮೆರೆದು ಪೌರುಷವನು ಜನರು ಸಮರ್ಥರು
ದೈವವನೊತ್ತರಿಸುವರು
ಕಷ್ಟದೊಳಿದ್ದರು ಸತ್ವಸಂಪನ್ನರು
ಕಡೆಯೊಳು ಜಯವಡೆದಪರು.

೬೧

ಬಂದನು ಸೂರ್ಯನು ಬಂದನಾದಿತ್ಯನು
 ಬಂದನು ಕಮಲ ಬಾಂಧವನು
ಬಂದನು ಉದಯಾದ್ರಿ ಶಿಖರದ ರತ್ನನು
 ಬಂಧೂಕ ಸುಮದ ಸನ್ನಿಭನು.

೬೨

ಬೆಳಗು ಬೈಗಿನ ನಡುವೆ ಕಳೆದು ಹೋಯಿತು. ತಾನೆ
 ಚಿನ್ನದ ಹೊಚ್ಚ ಹೊಸ ಗಂಟೆ
ಅರವತ್ತು ವಜ್ರದ ನಿಮಿಷದ ಕೆತ್ತನೆ
 ಮತ್ತದು ಸಿಕ್ಕುವುದುಂಟೆ.

೬೩

ಅತ್ತೇನು ಇತ್ತೇನು ಮರೆಯೊಳು ಶಿವಿವನು
 ಎತ್ತಣಿಂದಾದರು ಹೇಡಿ
ಎದುರೆದುರೊಳು ನಿಂತು ಕಾದುವ ವೀರನು
 ಹೊಡೆವನು ಗುರಿಯಿಟ್ಟು ನೋಡಿ.

೬೪

ನುಡಿದಳು ಸತ್ಯದೊಂದಪರಾವತಾರವು
 ತಾನೆಂದು ನನಗಿಂದು ನಲ್ಲೆ
ಏವೇಳ್ವುದಮುದೆಂದೆನವಳೆಂದುದೆಲ್ಲವು
 ಸುಳ್ಳೆಂದು ಖಂಡಿತ ಬಲ್ಲೆ.

೬೫

ತಮ್ಮ ನೀರನು ತಾವೆ ಕುಡಿಯುವು ನದಿಗಳು
 ಅನ್ಯರ ತೃಷೆ ನೀಗಲಿಹವು
ತಮ್ಮ ಹಣ್ಣನು ತಾವೆ ತಿನ್ನವು ಮರಗಳು
 ಅನ್ಯರ ಕಷ್ಟಕೆ ಕಳೆವುವು.

೬೬

ವಿಭವಂಗಳಸ್ಥಿರ ದೇಹವಶಾಶ್ವತ
ಮೃತ್ಯುವೂ ನಿತ್ಯ ಸನ್ನಿಹಿತ
ಆದರಿಂದಲಿಹಪರ ಸಾಧಕವೆನುವಂಥ
ಧರ್ಮವನಾರ್ಜಿಸು ಸತತ.

೬೭

ಬಳಿಪ್ಪುದು ಕತ್ತಲೆ ಮೈಕೈಗಳಸು ತಾನು
ಸುರಿವ್ರುದು ಕಪ್ಪಸು ಬಾಸು
ವಿಫಲತೆವಡೆಯಿತು ದೃಷ್ಟಿಯುಮಿಂದಿರದೆ
ಕುಜನರ ಸೇವೆಯು ತೆರದೆ.

೬೮

ಬೆಳ್ಳಕ್ಕಿಪಂತಿಯ ಮಾಲೆಯಿನೊಪ್ಪುವ
ಮಿಂಚಿನ ಕಾಂಚಿಯಿಂ ಮೆರೆವ
ಮೋಡದ ಗುಡಗಿನೊಂದಬ್ಬರದೀರವ
ಬೆದರಿಪ್ಪುದಿನಿಯಳ ಮನವ

೬೯

ಬುಧರ ವಿಚಾರಿತ ರಮಣೀಯ ಕಾರ್ಯವು
ಜಗದೊಳು ಶೋಭಿಸುವಂತೆ
ವರ್ಣನೆ ಸ್ಥಿತಿಗನುಗುಣವಿಹ ಕಾವ್ಯವು
ಜಗದೊಳು ಶೋಭಿಪ್ಪುದಲ್ತೆ.

೭೦

ಮಾವ ನಗೇಶನು ಮಗನು ವಿಘ್ನೇಶನು
ಸಖನು ವಿತ್ತೇಶನು ಕೇಳು
ತಾನೆ ಮಹೇಶನು ಆದರು ಗಿರಿಶನು
ಚರಿಸಿದನಲ್ತೆ ಭಿಕ್ಷೆಯೊಳು.

೭೧

ಬಣ್ಣದೊಳಿಬ್ಬರು ಸಮಸಮನಾದವೆ
ಎಂದು ಹಿಗ್ಗುವುದೇಕೆ ನೀನು
ಹಾಡಿದರಾಗ ಗೊತ್ತಾಗುವುದಿಲ್ಲವೆ
ನೀ ಕಾಗೆ ಕೋಗಿಲೆ ನಾನು.

೭೨

ಹೂವಿನ ಜತೆಯೊಳು ಕೀಟವು ಸಹ ಬಂದು
ಸಂತರ ಶಿರವನೇರುವುದು
ದೊಡ್ಡವರೈತಂದು ಪೂಜಿಸುತಿರುವಂದು
ಶಿಲೆಕೂಡ ದೇವರಾಗುವುದು.

೭೩

ವ್ಯಸನಾಭಿಭೂತರು ಉತ್ಸಾಹಹೀನರು
ದೀನರು ನಷ್ಟಚೇತನರು
ಏನೊಂದು ಪರಿಭವನೆಸೆಗುವುದಾಗದೆ
ತಳಮಳಗೊಳುವರು ಬರಿದೆ.

೭೪

ಕೃಷ್ಣನ ಸೋದರಮಾವನು ಜನಕನು
ವೀರ ಧನಂಜಯನವನು
ಆದರು ಅಭಿಮನ್ಯು ರಣದೊಳು ಮಡಿದನು
ಕಾಲನು ಆರನು ಬಿಡನು.

೭೫

ಮತಕಾಗಿ ಬರೆವರು ಮತಕಾಗಿ ಜರೆವರು
ಮತಕಾಗಿ ಯುದ್ಧ ಹೂಡುವರು
ಮತಕಾಗಿ ಮಡಿವರು ಮತಕಾಗಿ ಸಿಡಿವರು
ಮತಕಾಗಿ [illegible] ಜನರು.

೭೭

ಮನೆಗೆ ಬಂದಾತನು ಹಗೆಯು ತಾನಾದರು
ಸತ್ಕರಿಸುವುದಲ್ತೆ ಗುಣವು
ಸೌದೆಗೆ ತನ್ನನೆ ಕಡಿಯುತಲಿದ್ದರು
ನೆರಳೀವುದವನಿಗೆ ಮರವು.

೭೭

ದಾನಕೆ ಸಮನಾದ ನಿಧಿಯಿಲ್ಲ ಲೋಭಕೆ
ಸಮನಾದ ಶತ್ರು ಬೇರಿಲ್ಲ
ಶೀಲಕೆ ಸಮನಾದ ತೊಡವಿಲ್ಲ ತೋಷಕೆ
ಸಮನಾದ ಧನವು ಬೇರಿಲ್ಲ.

೭೮

ಒಬ್ಬನು ಮಾಡಿದನೆಂದು ಮತ್ತೊಬ್ಬನು
ಮಾಳ್ಪನು ನೀಚಕಾರ್ಯವನು
ಒಬ್ಬರಂತೊಬ್ಬರು ನಡೆವರು ನುಡಿವರು
ಸ್ವವಿಚಾರಶೂನ್ಯರು ಜನರು.

೭೯

ಕಷ್ಟದಿಂದಾರ್ಜಿಸಿಕೊಳಬೇಕು ಗುಣವನು
ಬರುವುದು ಹೋಹುದು ಹಣವು
ಹಣಹೋದ ಮಾತ್ರಕೆ ನರನು ಹಾಳಾಗನು
ಸತ್ತಂತೆ ಗುಣವಿಲ್ಲದನು.

೮೦

ದೊಡ್ಡವರಿಂದಾಗದಂತಹ ಕೆಲವನು
ಚಿಕ್ಕವರೆಸಗುವರನು
ಹಣತೆಯು ಕುಡಿ ಬೆಳಗುವುದಲ್ತೆ ಸೂರ್ಯನು
ಬೆಳಗದ ನೆಲಮಾಳಿಗೆಯನು.

೮೧

ಬುದ್ಧಿ ಪರಾಕ್ರಮವಿರಬೇಕು ಭೃತ್ಯಗೆ
ಭಕ್ತಿಯೊಂದಿರಬೇಕು ಜೊತೆಗೆ
ಸೇವೆಯ ಸಲಿಸುವರಂತಪ್ಪರೊಡೆಯಗೆ
ಹೆಂಡಿರು ಮಕ್ಕಳ ಹಾಗೆ.

೮೨

ಬಿರುಗಾಳಿ ಕೀಳದು ಕೀಳಾದ ಹುಲ್ಲನು
ಮುರಿವುದು ಪೆರ್ಮರಗಳನು
ಸೆಣಸರು ನೀಚರೊಳಧಿಕ ಸಮರ್ಥರು
ಸಮಸತ್ವರೊಳು ಸೆಣಸುವರು.

೮೩

ಸುಲಿವಂದು ಹಲ್ಲನು ಕೆರೆವಂದು ಕಿವಿಯನು
ಹುಲುಕಡ್ಡಿ ಕೆಲಸಕ್ಕೆ ಬರದೆ
ಬ್ರಹ್ಮನ ಸೃಷ್ಟಿಯೊಳಿರುವೊಂದು ತೃಣ ಕೂಡ
ಅಪ್ರಯೋಜಕವಲ್ಲ ನೋಡ.

೮೪

ಭರ್ತೃವಿನೊಂದಭಿಮಾನದೊಳಾವನು
ನಿಷ್ಠೆಯಿನೆಲ್ಲ ಕಾರ್ಯವನು
ದುಷ್ಕರವಾದರು ಮಾಡುವನಾತನು
ಭೃತ್ಯರೊಳುತ್ತಮನಹನು.

೮೫

ಕಟ್ಟಿಗೆಯೊಳಗಿಲ್ಲ ಕಲ್ಲಿನ ಒಳಗಿಲ್ಲ
ದೇವನು ಮಣ್ಣೊಳಗಿಲ್ಲ
ಭಾವನೆಯೊಳಗಿಹನಾತನು ಭಾವನೆ
ಕಾರಣವೆಲ್ಲಕೆ ಮಗನೆ !

೮೬

ಮೃಗರಾಜ ನೀನೆಂದು ಅಡವಿಯ ಸಿಂಹಕೆ
ಕಟ್ಟಿದರಾರು ಪಟ್ಟವನು
ಆದರು ಸತ್ವದೊಳಿರುವೊಂದು ನಂಬಿಕೆ
ಕೊಟ್ಟಿಹುದದಕೆ ಪಟ್ಟವನು.

೮೭

ನಮ್ಮೊಳು ಅತಿನೀಚರಾದವರೊಳು ಸಹ
ಕೆಲವೊಂದು ಸುಗುಣಗಳಿಹವು
ನಮ್ಮೊಳು ಉತ್ತಮರಾದವರೊಳು ಸಹ
ಇಹವು ದುರ್ಗುಣಗಳು ಕೆಲವು.

೮೮

ಸತ್ಯರ ವಚನವು ಸತ್ಯವೆಂದೆನಿಸದು
ಮಿಥ್ಯರ ನುಡಿ ಮಿಥ್ಯವಲ್ಲ
ಭೂತ ಹಿತಾರ್ಥವೆ ಸತ್ಯವೆಂದೆನಿಪ್ಪುದು
ಮಿಥ್ಯವು ಮತ್ತುಳಿದುದೆಲ್ಲ.

೮೯

ನಿನ್ನನು ನೋಡಿದ ಮಾತ್ರಕೆ ಒಡನೆಯೆ
ಜಗುಳ್ದುಪುವಿವುಮೂರು ದೊರೆಯ
ರಿಪುವಿನ ಶಸ್ತ್ರವು ಕವಿಯ ದಾರಿದ್ರ್ಯವು
ವನಿತೆಯ ನೀವಿಬಂಧನವು.

೯೦

ಆಹವದೊಳು ನೀನು ಕತ್ತಿಯನೆಳೆದೊಡ-
ನೋಡಿದರೆಲ್ಲರು ಅಂದು
ಗಾಳಿಗಳಿರದಾಗ ಧೂಳಿಯ ಕಣ ಕೂಡ
ನಲಿವುದು ಸುಸ್ಥಿರವೆಂದು.

೯೧

ಸೋಳ್ಕೊಡೆ ನರನಿಗಾಭರಣವು ರೂಪವು
ರೂಪಕೆ ಗುಣವೆ ಆಭರಣ
ಅಂಥ ಸದ್ಗುಣಕೆ ಸುಜ್ಞಾನವಾಭರಣವು
ಜ್ಞಾನಕೆ ಕ್ಷಮೆಯೆ ಆಭರಣ.

೯೨

ಸಹ್ಯವಲ್ಲದ ದುರದೃಷ್ಟವೆಂದೆನುವುದು
ಅದು ನಮಗೆಂದಿಗು ಬರದು
ಈಯೊಂದು ಭರವಸೆಯೊಳು ನಾವು ನಡೆದಂದು
ನಮಗಾವ ಭಂಗವು ಇರದು.

೯೩

ಅಂಗೈಯ ಅಗಲದ ಮುಗಿಲೊಂದು ಬಂದರೆ
ರವಿ ಮರೆಯಾಗುವನಲ್ಲ
ಅಂಗುಲ ಅಗಲದ ನೂಲೊಂದು ಕಡಿದರೆ
ಮುತ್ತುಗಳುದುರುವುವಲ್ಲ.

೯೪

ಪದವಿ ತಪ್ಪಿದ ಮೇಲೆ ನೆಂಟರಿಷ್ಟರೆ ನಮಗೆ
ಕಟ್ಟಿಟ್ಟ ಹಗೆ ಕಾಣ ಕೊನೆಗೆ
ದೃಷ್ಟಾಂತವನು ಕೇಳು ಕೆರೆ ಬತ್ತಿ ಬರಿದಾಗೆ
ಆಪ್ತನೆ ವೈರಿ ತಾವರೆಗೆ.

೯೫

ದುಡಿಮೆಯೊಳಾಗಾಗ ಬಿಡುವನು ಪಡೆದರೆ
ಲೇಸಪ್ಪುದೂಳಿಗ ಕೇಳು
ಬಿಡುವನು ಕೊಟ್ಟಂಥ ಹೊಲದೊಳು ಬೆಳೆದರೆ
ಹುಲುಸಾಗಿ ಬಲಿವುದು ಕಾಳು.

೯೬

ಗಾಂಪರಿಗುಪದೇಶಗೈಯುವುದೊಳಿತಲ್ಲ
ನಂಬರು ನಚ್ಚರು ಆವರು
ಕೊರಳನೆ ತರಿದು ಮುಂದಿಟ್ಟರು ಕೊರಳಲ್ಲ
ಸೋರೆಯ ಬುರುಡೆಯೆನ್ನುವರು.

೯೭

ಬಿಡು ನೀನು ಮುಂದೇನು ಎನುವ ಪಲ್ಲವಿಯನು
ನಿಲ್ಲಿಸೀ ಹಾಳು ಕರಕರೆಯ
ಕೊಕ್ಕರೆಯನು ಸೃಷ್ಟಿಮಾಡಿದ ಬ್ರಹ್ಮನು
ಮಾಡದೆ ಬಿಟ್ಟನೆ ಕೆರೆಯ.

೯೮

ಬೂದಿಯು ಚಂದನ ಮಜ್ಞ ಸೂತ್ರವೆ ಹಾರ
ಜಡೆಗಳೆ ಸೊಬಗಿನ ಹೆಳಲು
ರುದ್ರಾಕ್ಷಿ ಕೈಬಳೆ ವಲ್ಕ ಚಿತ್ರಾಂಬರ
ಸಂನ್ಯಾಸಿ ಕಾಮಿಗೆ ಮಿಗಿಲು.

೯೯

ಒಂದೆಡೆ ನಲ್ಲೆಯ ಅಳುವಿನ ಮೊರೆಗಳು
ಒಂದೆಡೆ ಸಮರ ತೂರ್ಯಗಳು
ಎರಡರ ನಡುವೊಳು ಡೋಲಾಯಮಾನವು
ಆದುದು ಸುಭಟನ ಮನವು.

೧೦೦

ಹೊತ್ತಿಗೆ ಬಹುಮುಂಚೆ ಹೋಗಿದ್ದು ದುಡಿವವು
ಸಂಜೆಗೆ ಹಣ್ಣಾಗಿ ಬಹೆವು
ಗೊತ್ತಿಹುದೆಲ್ಲರಿಗೆಮ್ಮ ಭವಿಷ್ಯವು
ನಾಳೆಗೆ ಮಣ್ಣಾಗಲಿಹೆವು.

ಎಂಟನೆಯ ನೂರು

೧

ಉಪಚಾರವೆಸಗುವ ನೆಪದೊಳು ದಿನದಿನ
ನಾಗೈಯುವಪಚಾರಗಳನು
ಕ್ಷಮಿಸೆಂದು ಬೇಡುವೆ ದೇವರೆ ದೀನನ
ಭಕ್ತನ ಮೊರೆ ಕೇಳೆಯೇನು.

೨

ಬುಧರ ವಿದ್ಯಾಬುದ್ಧಿ ಸೊಗಸೇರುವಂದದೆ
ವೇದ್ಯತತ್ತ್ವವಬೋಧದೊಳು
ಕಳೆಗೊಂಡು ಮೆರೆವುವು ಉಚಿತ ವಿಚಾರದೆ
ಕವಿಗಣ ರಚಿತ ಸೂಕ್ತಿಗಳು.

೩

ಕರೆಗೊರಲನು ಬಂದ ಭಸಿತಧರನು ಬಂದ
ರಕ್ತ ಜಟಾಜೂಟ ಬಂದ
ಬಂದ ಫಾಲಾಕ್ಷನು ಬಂದ ಫಣಿಭೂಷನು
ಶಿವಬಂದ ಶಶಿಧರ ಬಂದ.

೪

ಉರಗನು ಖಳನು ಎಂಬಿವರೊಳು ಶತಪಾಲು
ಉರಗನು ಖಳನಿಗೆ ಮೇಲು
ಉರಗನ ವಿಷಕಿದೆ ಔಷಧಿ ಮಣಿಮಂತ್ರ
ಖಳನ ವಿಷಕಿಲ್ಲವೊ ತಂತ್ರ.

೫

ಬೇಕೆನುವ ಧನಿಕನಪುತ್ರನು ಬೇಡೆನುವ
ಬಡವನು ಬಹುಪುತ್ರವಂತ.
ಬಡವ ಬಲ್ಲಿದರನು ವಿಧಿ ಕಟಕಿಯಾಡುವ-
ನವನ ವೈಚಿತ್ರ್ಯವನಂತ.

೬

ಬಿಳುಪ್ಪುಂಟು ಕಪ್ಪುಂಟು ಕೆಂಪುಂಟು ಕಣ್ಣೊಳು

ತೆರೆದು ಮುಚ್ಚುವ ರೆಪ್ಪೆಯಿಹುದು

ಬರಿಯ ಬಿಳಿ ಬಣ್ಣವು ಬಿಳಿಯ ತಾವರೆಯೊಳು

ನೈದಿಲೆ ಬರಿ ಕಪ್ಪಗಿಹುದು.

೭

ಹೊರವಾಗಿ ಬೆಳೆಯಿತು ಹಸುರಾಗಿ ಹರಡಿತು

ಶಾಖೋಪಶಾಖೆಗಳಾಗಿ

ಫಲವಿತ್ತು ನೆಳಲಿತ್ತು ಮರವೀಗ ಮುರಿಯಿತು

ಬಿರುಗಾಳಿ ಬೀಸಿರಲಾಗಿ.

೮

ಉದಕವು ಪೊರೆಯನು ಕಳಚುವುದಾದರೆ

ಉರಗವು ಪೊರೆ ಬಿಡುವ ಹಾಗೆ

ಬೆಳ್ಳುಡೆಯಾಗುತಲಿದ್ದವು ಸತಿಯರ

ನೀರಾಟವಾಡುವ ಮೈಗೆ.

೯

ಹೂವಿನ ಬಂಡುಂಡು ಮದವೇರಿದಳಿವಿಂಡು

ಮೊರೆಯುವ ನಾದವಿದಲ್ಲ

ಪೂವಿಲ್ಲನೇರಿಸಿ ಕಾವನು ಕಣೆಗೊಂಡು

ಟಂಕಾರ ಮಾಡಿದನಲ್ಲ.

೧೦

ಮಗಳನು ಒಳ್ಳೆಯ ಕುಲದೊಳು ಸೇರಿಸು

ಮಗನಿಗೆ ಸದ್ವಿದ್ಯೆ ಕಲಿಸು

ಅರಿಯನು ದುರ್ವ್ಯಸನದೊಳು ನಿಯೋಜಿಸು

ಧರ್ಮದೊಳಿಷ್ಟನನಿರಿಸು.

೧೧

ನಾಯಿಕೆ ಆಸಿಲತೆ ನಾಯಕ ಭೂಪತಿ
ಧುರವೆ ಅಂತಃಪುರ ಕೇಳು
ಸಮ್ಮುಖಿಯಾದರು ವೈರಿ ವಾಹಿನಿ ಪ್ರತಿ-
ನಾಯಿಕೆ ಮೊಗದಿರುಹಿದಳು.

೧೨

ಸಿದ್ಧರು ಸಾಧ್ಯರು ವರತಾಪಸೋತ್ತಮರು
ಹರಿಹರ ಬ್ರಹ್ಮಾದಿಸುರರು
ಹಣೆಯೊಳು ಬರೆದುದನಳಿಸಲಶಕ್ತರು
ಏಗೈವರಿನ್ನುಳಿದವರು.

೧೩

ಕ್ಷಮೆಯನು ಮರೆವವರಿಹದೊಳು ಪರದೊಳು
ಸುಖಿಸುವರೋರಂತೆ ಕೇಳು
ಸನ್ಮಾನವಿಹದೊಳು ಸದ್ಗತಿ ಪರದೊಳು
ಸಹನೆಯ ಮರೆದು ನೀ ಬಾಳು.

೧೪

ತುಂಬಿದ ಕೊಡ ನೋಡು ತುಳುಕದು ತುಳುಕುವು
ದರೆತುಂಬಿದಂತಹ ಕೊಡವು
ಬುಧನು ಕುಲೀನನು ಗರ್ವಾಂಧನಾಗನು
ನಿರ್ಗುಣಿ ಸಲೆ ಗಳವುವನು.

೧೫

ಅಕ್ಷರವನು ನೋಡಿ ಲೋಕ ಪರೀಕ್ಷಿಸ-
ಲಂಬರಾಡಂಬರವೇಕೆ
ಅಂಬರಹೀನ ತಾನಾದರು ಗಿರಿಶನು
ಸರ್ವಜ್ಞನಾಗಿಲ್ಲವೇನು.

೧೬

ವ್ಯಸನದೊಳೊದಗುವ ಧನ ಬುದ್ಧಿ ವಿದ್ಯೆ ವಿ-
ದೇಶದೊಳದಗುವ ಧನವು
ಪರದೊಳಗೊದಗುವ ಧನ ಧರ್ಮ, ಶೀಲ ವಿ-
ದೆಲ್ಲೆಡೆಗೊದಗುವ ಧನವು.

೧೭

ಪುರುಷಶಾರ್ದೂಲರಿಗುದ್ಯೋಗಶೀಲರಿ—
ಗೊಲಿವಳು ಲಕ್ಷ್ಮಿ ತಾನಾಗಿ
ಹೋಗಿ ಸಾಹಸ ತೋರಿ ಜಯವಧುವನು ವರಿ-
ಸೈತಾರ ಸಿಂಗಾರವಾಗಿ.

೧೮

ರವಿ ನಾಳೆ ಬರುವನು ತಾವರೆ ಬಿರಿವುದು
ಬಿಡುಗಡೆ ಪಡೆದಪೆನೆಂದು
ಸೆರೆಯಿದ್ದ ದುಂಬಿಯಿಂತೆಣಿಸುವಂದು ಕರಿಯೊಂದು
ಕಿತ್ತೆಸೆಯಿತಬ್ಜಿನಿಯನಂದು.

೧೯

ಒರೆದೊರೆದು ಕಾಯಿಸಿ ಕತ್ತರಿಸಿ ಬಡಿಬಡಿದು
ಚಿನ್ನವ ಪರಿಕಿಸುವಂತೆ
ಕುಲಶೀಲ ವಿದ್ಯೆ ಕರ್ಮಂಗಳ ಮಿಡಿಮಿಡಿದು
ಪುರುಷರ ಪರಿಕಿಪರಲ್ತೆ.

೨೦

ತನ್ನಭಿಮತವನು ಬದಲಿಸದಾತನು
ಹೊಂಡದ ನೀರಿನಂತಹನು
ಬಗೆ ಬಗೆ ವಿಷಜಂತು ಒಗೆದಪುದೋರಂತೆ
ಬಗೆಗೊಳಿಸದೊಳಗೆಣಿಸದಲ್ತೆ.

೩೧

ಇರುಳಿನ ಮುಂಬತ್ತಿ ಉರಿದು ತಾನಾರಿತು
ಕರಗಿದ ಮೇಣವು ಕೂಡಿ
ಘನಿಸಿದ ತೆರದೊಳು ಹಿಮ ದಟ್ಟವಾಯಿತು
ಬೆಟ್ಟವಾಯಿತು ಆಹ ನೋಡಿ.

೩೨

ನೋಳ್ಪುದೀಮರದೊಳದೆಷ್ಟೊಂದು ಫಲವಿದೆ
ಮಾಗಿ ಸಕಾಲಿಕವಾಗಿ
ನೆರಳಿದೆ ಹಣ್ಣಿದೆ ಸಾರ್ಥಕವಾಗಿದೆ
ಮರವಿದು ಉಪಕಾರಿಯಾಗಿ.

೩೩

ಬಿರುಗಾಳಿ ಬಂದಾಗ ತರಗೆಲೆಯಾದರು
ಹಾರುವುದಾಕಾಶದತ್ತ
ತೆರೆತೆರೆಯೆದ್ದಾಗ ನೊರೆಗುಳ್ಳೆಯಾದರು
ಬಿಬ್ಬನೆ ಬಿರಿವುದುನ್ಮತ್ತ.

೩೪

ನದಿಗಳು ನೀರನು ತಂದು ತುಂಬಿದರೇನು
ಬಡಬನು ಹೀರಿದರೇನು
ವಾಹಿನೀಶ್ವರನೀತನುಬ್ಬನು ಕುಗ್ಗನು
ಸುಖದುಃಖಗಳಲೊಂದೆ ತೆರನು.

೩೫

ನಮ್ಮನೇರಕೆ ನಾವು ಹಾಯಾಗಿ ಹೋಹೆವು
ಯುವಕರೆ ನಗಬೇಡಿ ನೀವು
ಬಹುಬೇಗ ಬಾಡುವುದಡಗುವುದಹ ಕಂಪು

ನಿಮ್ಮ ಗುಲಾಬಿಯಲಂಪು.

೨೬

ಬೆಚ್ಚನೆ ಬಿಸಿಲತ್ತ ಹಚ್ಚನೆ ಹಾಸತ್ತ
ಒಚ್ಚುತ ನೀನು ವಿರಮಿಸು
ಕಣ್ಣನು ಮುಚ್ಚುತ ಹುಲ್ಲನು ಕಚ್ಚುತ
ಹೊಚ್ಚನೆ ಸೊಗವನನುಭವಿಸು.

೨೭

ಉಸುರಿನ ಕಂಪನು ಸೂಸಿರೆ ನಗೆಹೂವು
ತುಟಿಯ ಕೆಂದಳಿರಿನ ಮೇಲೆ
ಒಲವಿನ್ನೈಸಿರಿಯನು ಮೆರೆದಿರೆ ನೋಟವು
ಹೇಳುವುದೇನಿದೆ ಬಾಲೆ.

೨೮

ಎಮ್ಮೆಯ ತರಲೆಂದು ಪೋರಿದನೋಲೆಯ
ಸೋರೆದಿಲ್ಲ ಕರೆದಿಲ್ಲ ಹಾಲು
ಕೂರಿಗೆ ತರಲೆಂದು ಮಾರಿದನೆಮ್ಮೆಯ
ಯಾರಿಹರಿವಗಿಂತ ಮೇಲು.

೨೯

ಗುರುವಿಗೆ ಕರುಬಿಲ್ಲ ತೀರ್ಥಕೆ ರುಚಿಯಿಲ್ಲ
ಮಾರಿಗೆ ಕಾರುಣ್ಯವಿಲ್ಲ
ಎಮ್ಮೆಗೆ ಚೆಲುವಿಲ್ಲ ಜೋಗಿಗೆ ನೆಲೆಯಿಲ್ಲ
ಜಾರಗೆ ನೀತಿಯೊಂದಿಲ್ಲ.

೩೦

ಕೃಷ್ಣನು ಹೇಳಿದ ಗೀತೆಯ ಪಾರ್ಥನು
ಕೇಳಿದನಾಕುಲನೀಗಿ
ಅಭಿಮನ್ಯು ಮಡಿದಾಗ ಮಾತ್ರ ಹುಚ್ಚೆದ್ದನು
ಲೋಪಶೋಕಾದ್ಭುತವಾಗಿ.

೩೧

ಗದ್ದೆಯ ಬಯಲಿಗೆ ಬಂದಿಳಿದೆಮ್ಮೆಯ
ನೋಡಿ ಪರಮಾನಂದ ಮೂಡಿ
ಕೊಕ್ಕರೆ ದಂಡೊಂದು ಗೌರವ ರಕ್ಷೆಯ
ಸಲಿಸುತಲಿಹುದೊಂದುಗೂಡಿ.

೩೨

ಬಂಗಾರದಂತಹ ನಾ ಕೊಟ್ಟ ದಿನವನು
ನೀ ಮಣ್ಣು ಮಾಡಿದೆಯೆಂದು
ಕೆಂಪನೆ ಮುಖಮಾಡಿ ನಿನ್ನನೆ ನೋಳ್ಪನು
ದಿನಪನು ತಾ ಪೋಗುವಂದು.

೩೩

ಎಷ್ಟೊಂದು ಸಾಧಿಸಿತಿಷ್ಟೊಂದು ಯತ್ನದೊ-
ಳಿನ್ನಷ್ಟು ಮಾಡುವೆನೆಂದು
ಯೋಚಿಸಿ ಮತ್ತೆ ನೀ ಯತ್ನಿಸು ಶೀಘ್ರದೊ-
ಳಿನ್ನಷ್ಟು ಫಲ ನಿನಗಹುದು.

೩೪

ವ್ಯವಹಾರದರಿವಿಗೆ ಮಿಗಿಲೆ ಸಂಶೋಧನೆ
ವ್ಯವಹಾರವಿದನಾಗು ನೀನು
ಸುಜ್ಞರು ಸೃಜಿಸಿದ ಸಿಂಹವೊಂದವರನೆ
ಕೊಂದುದೆಂದೋದಿಲ್ಲವೇನು.

೩೫

ತಾವರೆ ಹೂವಿನ ಸೊಬಗನು ಕಾಣದ
ಚಂದ್ರನ ಜನ್ಮವೆ ವ್ಯರ್ಥ
ಚಂದ್ರನ ಬೆಳುದಿಂಗಳಿನ ತಣ್ಪನರಿಯದ
ತಾವರೆ ಜನುಮವೆ ವ್ಯರ್ಥ.

೩೭

ಕೆಲಸಕೆ ಬಾರದ ಭಾರದ ತೋಕೆಯು–
ನಾವ ಪುರುಷಾರ್ಥಕೆ ಹೊತ್ತು
ನವಿಲಿಂತು ನೋವುದೊ ತಾನೆಂದು ಗುಬ್ಬಿಯು
ಪುರಿಯೊಂದು ಚಿಂತಿಸುತಿತ್ತು.

೩೮

ಜೆಂಕಿ ಉರಿದೇಳಲಿ ಬೆಳಗಲಿ ಪೆಜ್ಜೊಡರು
ತೊಳಗಲಿ ಚುಕ್ಕಿ ಚಂದ್ರಮರು
ರತ್ನ ಥಳಥಳಿಸಲಿ ಜಗವೆ ಕಗ್ಗತ್ತಲು
ನನಗವಳಿಂದಿಲ್ಲದಿರಲು.

೩೯

ಆಕೆಯ ಕಾಣದ ಕಂಡವರಿಬ್ಬರು
ಭಾವಿಸೆ ಸರಿಸಮವಿರಹರು
ಒಬ್ಬರು ವಿಫಲ ವಿಲೋಚನರಾದರು
ಒಬ್ಬರು ನಷ್ಟಚೇತನರು.

೪೦

ಬಹುಮಂದಿ ಸುಳಿವರು ಸುಗುಣಸಂಪನ್ನರು
ದಿನನಿತ್ಯ ನೂರಾರುಜನರು
ಲೋಕದೊಳವರನು ಗುರುತಿಸುವವರಾರು
ಅವರಂತೆ ನಡೆವವರಾರು.

೪೧

ನದಿಗೆದುರೀಸುತ ಹೋಗುವುದಾದರೆ
ಜೀವಂತ ಮತ್ಸ್ಯವೆ ಬೇಕು.
ಹೊನಲಿನ ದಿಕ್ಕಿಗೆ ಸಾಗುವುದಾದರೆ
ಕೊಳೆತೊಂದು ಕಸಕಡ್ಡಿ ಸಾಕು.

೪೧

ಆದುದು ಆಯಿತು ಚಿಂತಿಪುದಾಗದು
ಸರಿಯದಿರೆಲೆ ಕಂದ ಹಿಂದೆ
ಬಂಗಾರದಂತಹ ಅವಕಾಶವಿರುವುದು
ಮುಂದಕೆ ನಡೆಯಿಂದೆ ಮುಂದೆ.

೪೨

ನಾನಿಂದು ಧರ್ಮದೊಳಿದ್ದರೆ ಕರುಣಿಸು
ಅಲ್ಲಿಯು ನೆಲೆನಿಲ್ಲುವಂತೆ
ನಾನಿಂದಧರ್ಮದೊಳಿದ್ದರೆ ತೆಗೆಯಿಸು
ಅಲ್ಲಿಯು ನೆಲೆ ನಿಲ್ಲದಂತೆ.

೪೩

ಹೊಸದೊಂದು ಬಿಲ್ಲುಗಾರಿಕೆಯನು ತೋರಿದೆ
ಮುಗ್ಧೆಯು ಜಯಭೇರಿ ಹೊಡೆದೆ
ನನ್ನನು ಸಾಯಕಗಳನೆಸೆದಿರಿಯದೆ
ಗುಣವೃಂದದೊಳಿ ಸಾಯಬಡಿದೆ.

೪೪

ಹೊರಗಡೆಗೊಂಬ್ಬೊಡೆ ಮೃತಮೃತ್ತಿಕೆಯ ಗೋಡೆ
ಒಳಗುಸುರಿದ ಪಿಸು ನುಡಿಯ
ಇಲ್ಲಿ ನೀ ಪ್ರಾರ್ಥಿಸಿ ಮೆಲ್ಲನೆ ಬೇಳ್ಪೊಡೆ
ಕೇಳಿಸಿಕೊಳನೆ ಆ ಒಡೆಯ.

೪೫

ನೀನೆನ್ನನನುದಿನ ನೆನೆಯುತಲಿರು ನೀರೆ
ನಿನ್ನನು ನಾ ನೆನೆಯಲಾರೆ
ನೆನೆವುದು ಚಿತ್ತದ ಧರ್ಮವು ಚಿತ್ತವು

ನನ್ನಿಂದಲಿಂದಪಹೃತವು.

೪೬

ಕ್ಷಣವೊಂದು ಯುಗವಾಗಿ ತೋರಿದ್ದುದೆನಗಂದು
ನೀನೆನ್ನನಗಲಿದ್ದ ದಿನದೆ
ಯುಗವೊಂದು ಕ್ಷಣವಾಗಿ ತೋರುತಲಿಹುದಿಂದು
ನೀನೆನ್ನ ಬಳಿಬಂದ ದಿನದೆ.

೪೭

ಗೀತೆಯ ಸವಿಯೊಳು ಯುವತಿಯ ಲೀಲೆಯೊ-
ಳುತ್ತಮ ಕವಿಯ ಸೂಕ್ತಿಯೊಳು
ಮನವಾರುವೊಗದ ಮನುಜನು ಯೋಗಿಯೊ
ಪಶುವೊ ಆಗಿರ್ಪನು ಕೇಳು.

೪೮

ಸಂಸಾರವೆನ್ನುವ ವಿಷವೃಕ್ಷದೊಳು ನೋಡು
ಅಮೃತದ ಫಲವಿಹವೆರಡು
ಸರಸ ಸುಭಾಷಿತದಾಸ್ವಾದ ತಾನೊಂದು
ಸಜ್ಜನ ಸಲ್ಲಾಪವೊಂದು.

೪೯

ವೈಧವ್ಯಭಯದೊಳು ಶೂರನನುಳಿಯುವ
ಲಜ್ಜೆಯಿಂದುಳಿವ ದಾನಿಯನು
ಸವತಿಯ ಭಯದೊಳು ಕವಿಯ ಬಿಟ್ಟೋಡುವ
ಲಕ್ಷ್ಮಿಯ ಒಲಿವ ಲೋಭಿಯನು.

೫೦

ಧನವನು ಆರ್ಜಿಸು ನಿತ್ಯನಿರಂತರ
ಕೇಳು ಕಾಕುತ್ಸ್ಥನೆ ನೀನು
ಮೃತನ ನಿರ್ಧನಿಕನ ನಡುವಿರುವಂತರ-
ವಾವುದೂ ಕಾಣೆನು ನಾನು.

೫೧

ತಗ್ಗಿ ಪ್ರದೀಪವನು ಕೊಳಲಿನ ಸಣ್ಣನೆ
ಬಿರುಕೊಂದು ದಿನ ಕಳೆದಂತೆ
ಕೊನೆಗೆಷ್ಟು ನೋಣೆವುದು ಕೊಳಲಿನ ಸದ್ದನೆ
ಆ ಸೀಳು ನಸು ಹೆಚ್ಚಿದಂತೆ.

೫೨

ಕರಣಂಗಳನು ಆಳು ಕಾಮಂಗಳನು ಹೂಳು
ನಾಲಗೆಯನ್ನು ಹದಮಾಡು
ಜಡವನು ತೊರೆದೇಳು ಜಗ ನಿನಗಡಿಯಾಳು
ಬಾಳೊಂದು ವಿಜಯದ ಬೀಡು

೫೩

ಈ ಸುಟ್ಟಹೊಟ್ಟೆಯ ಸಲುವಾಗಿ ನಾಚದೆ
ಏನೇನನೆಸಗರು ಬುಧರು
ವಾಗ್ದೇವಿಯನು ತಂದು ವಾನರಿಯಂದದೆ
ಮನೆಮನೆಯೊಳು ಕುಣಿಸುವರು.

೫೪

ಹುಟ್ಟುವುದಿಲ್ಲವು ಹುಟ್ಟಿದರುಳಿಯದು
ಬಹುಕಾಲ, ಬಹುಕಾಲವಿರಲು
ಫಲವು ಸಂದೇಹವು ಸಜ್ಜನ ಕೋಪವು
ದುರ್ಜನ ಸಖ್ಯಕೆ ಸಮವು.

೫೫

ಯಾರಿದ್ದರೇನಂತೆ ಯಾರಿಲ್ಲದಿರಲೇನು
ಆಪ್ಪುದು ತಪ್ಪದು ತಾನು
ಬಾರೆಂದು ಬರೆದವ ಕರೆದಾಗ ಹೋಪರು
ಪಡೆದವರೇನು ಮಾಡುವರು.

೫೬

ಹಣವನು ತೆತ್ತು ನೀ ಹೊತ್ತನು ಕೊಳಲಾರೆ
ಹೊತ್ತಿಗೆ ಬೆಲೆ ಹೆಚ್ಚು ಗೊತ್ತೆ
ಹಣವನು ತರಿಸುವ ತೆರದೊಳು ತರಲಾರೆ
ಹೊತ್ತನು ಕಳೆದರೆ ಮತ್ತೆ.

೫೭

ಬಾ ಬೇಗ ತೋಟಕೆ ಚಲುವಿನ ಬೇಟಕೆ
ಬೇಗ ಗುಲಾಬಿಯ ಸೂಡು
ನಾಕವ ಧರೆಗಿಳಿದಂತಿದೆ ನೋಟಕೆ
ಬಾ ಬೇಗ ಬಾ ತ್ವರೆಮಾಡು.

೫೮

ಏಳಿಗೆ ಪಡವವನೇಳಲಿ ಐದಕೆ
ಪಡೆದವನೇಳಕ್ಕೈತರಲಿ
ಏಳಿಗೆ ಬೇಡದ ಸೋಪಾನಿಗೆಂಟಕೆ
ಏಳುವಾಲೋಚನೆ ಬರಲಿ.

೫೯

ವರುಷಗಳೇಳರೊಳಾಗದುದಾಗುವು-
ದಿನ್ನೇಳು ನಿಮಿಷದೊಳೆಂದು
ಮರಳಿ ನೀ ಯತ್ನಿಸು ಕಾರ್ಯವು ಫಲಿಸುವು-
ದತಿ ಸುಲಭದೆ ಜಯವಹುದು.

೬೦

ಸಾವಿನ ಬಾಯಿಗೆ ಹೋಹರು ಜೀವರು
ನಿಮಿಷಕೆ ಸಾವಿರದಂತೆ
ಚಿರಕಾರ ಮಿಕ್ಕವರುಳಿಯಲಾಸಿಸುವರು
ಜಗದೊಳಿದಾಶ್ಚರ್ಯವಲ್ತೆ.

೭೧

ಹಿಡಿಕೊಳು ಬಡವನಿಗೀಯುಪ್ಪೊಡದೆ ಸಾಕು
ಮತ್ತಿನ ತಪವೇಕೆ ಬೇಕು
ಮಿಡುಕುವ ಮನಕಿಂತ ನುಡಿಯುವ ತುಟಿಗಿಂತ
ನೀಡುವ ಕೈಮೇಲು ಸತತ.

೭೨

ಸವಿಯ ಹಿಮಾನಿಲ ಶಿಖಿಯಪ್ಪೊಲಾದನು
ಸುಖಿಯು ನಾನೀತೆರನಿರಲು
ಸೊಗದ ಸುಧಾಕರ ವಿಷದಪ್ಪೊಲಾದನು
ಅಸದಳವಸುವಿಡಿದಿರಲು.

೭೩

ಹಾರವ ತೆಗೆದೆಳೆದಪ್ಪಿದೆ ನಾನಂದು
ಎಡೆಯೊಳು ತಡೆಯುಪ್ಪುದೆಂದು
ಗಿರಿ ಝರಿ ಕಾಡುಗಳೆಡೆಯೊಳು ನಿಂದಿವೆ
ಇಂದು ನಮ್ಮಿಬ್ಬರ ನಡುವೆ.

೭೪

ಪರಮ ಪಾತಿವ್ರತ್ಯ ರೂಪವು ನಾರಿಗೆ
ಸ್ವರದಿಂಪು ರೂಪು ಕೋಗಿಲೆಗೆ
ವಿದ್ಯೆಯು ರೂಪ ಕುರೂಪಿ ಮಾನವರ್ಗೆ
ಕ್ಷಮೆಯು ಸುರೂಪವು ಮುನಿಗೆ.

೭೫

ಪೊತ್ತಾರೆ ಬಹುಮುಂಚೆ ಹೋಗಿದ್ದು ದುಡಿವವು
ಸಂಜೆಗೆ ಹಣ್ಣಾಗಿ ಬಹೆವು
ಗೊತ್ತಿಹುದೆಲ್ಲರಿಗೆಮ್ಮ ಭವಿಷ್ಯವು
ನಾಳೆಗೆ ಮಣ್ಣಾಗಲಿಹೆವು.

೬೬

ಕೆಲೆಯುತ ಕುಣಿಯುತ ಧನಿಕರ ಮಕ್ಕಳು
ಆಡುವ ವೇಳೆಗಳಲ್ಲಿ
ನರಳುತ ಮಡಿವರು ಬಡವರ ಮಕ್ಕಳು
ಸ್ವಾತಂತ್ರ್ಯದೀನಾಡಿನಲ್ಲಿ.

೬೭

ಪಂಡಿತರೆಲ್ಲರು ಒಂದೆಡೆ ಸೇರಲಿ
ಬೇರೊಂದು ನಿಲವಿಗೆ ಬರಲಿ
ನಾನಿಂತು ನಿರ್ಧಾರ ಮಾಡಿಹೆನೀದಿನ
ಹಣವಿಲ್ಲದವನೆಯೆ ದೀನ.

೬೮

ಮಡಿದವನನು ಕುರಿತೇನನು ನುಡಿವುದ-
ಕಿಲ್ಲದೆ ಹೋದಾಗ ನಾವು
ಸಂತಾಪ ಸಭೆಯೊಳು ಆತನು ಬಾಳಿದ
ವರುಷಗಳನೆ ಗಣಿಸುವೆವು.

೬೯

ಬಲಗಿಯ ಮರದಂತೆ ತಲೆಯೆತ್ತಿ ನೇರಾಗಿ
ನೋಡು ನೀಲಾಕಾಶದತ್ತ
ತುಂಗೆಯ ತೊರೆಯಂತೆ ಮಾನಕರಗಿ ನೀರಾಗಿ
ಊಡು ಬಡಜೀವರನಿತ್ತ.

೭೦

'ಈ ನೆಲವಲ್ಲವು ಕಾಗದವಾದರೆ
ಜಲವೆಲ್ಲವಾದರೆ ಶಾಯಿ
ಮರಗಿಡವಲ್ಲವು ಲೆಕ್ಕಣಿಯಾದರೆ...'
'ಬಡಪಾಯಿ ಸಾಕು ಬಡಾಯಿ.'

೭೧

ಶುಚಿಯೊಳು ರುಚಿಯೊಳು ಗುಣದೊಳು ಹಾಲಿಗೆ
ಸಮನಾದುದಿನ್ನಾವುದಿಹುದು
ಕಾಯಿಸಿ ಆರಿಸಿ ಸೇರಿಸಿ ಮೊಸರಿಗೆ
ಕಡೆದರು ಲೇಸನೆಣ್ಣುವುದು.

೭೨

ಕೊರಳಿಗೆ ಬಿಗಿವರು ಬಾವಿಗೆ ಬಿಡುವರು
ಆದರು ನೀ ಧನ್ಯ ಕೊಡವೆ.
ಆಳಕೆ ಮುಳುಗಿಸಿ ಮತ್ತೆ ಮೇಲೆಳೆವರು
ತಣ್ಣೀರನವರಿಗೆ ಕೊಡುವೆ.

೭೩

ಮೂರ್ಖರು ಕೆಲವರು ನಿನ್ನನು ಕೊಳೆಯೆಂದು
ತೊರೆದರೆ ನಿನಗೇಕೆ ಬನ್ನ
ಸಿರಿವಂತ ರಸಿಕರು ಊರೊಳಗಿರುವಂದು
ಕೊಂಬರು ಕಸ್ತೂರಿ ನಿನ್ನ.

೭೪

ಸಾವಿರ ಕರದೊಳು ತಾವರೆಮೊಗವನು
ರವಿಯೆತ್ತಿ ಮುದ್ದಿಸಿದಾಗ
ನೋಡಿದ ನೈದಿಲೆ ತಗ್ಗಿಸಿ ತಲೆಯನು
ಕದವಿಕ್ಕಿಕೊಂಡಿತು ಬೇಗ.

೭೫

ಹೂವಿನ ಹಣ್ಣಿನ ನೆರಳಿನ ಸಾವಿರ
ಮರಗಳು ಬೆಳೆದಿದ್ದರೇನು.
ಜನತೆಯ ಚಿತ್ತದೊಳೊಂದಾನಂದದಾಗರ

ಚಂಪನ ತರುವಲ್ಲವೇನು.

೭೬

ಹೂವಿಲ್ಲ ಹಣ್ಣಿಲ್ಲವೆಂದೇಕೆ ಕೊರಗುವೆ
ಮೈಯೆಲ್ಲ ಪರಿಮಳ ತರುವೆ
ಜನರ ಮೈಕೈಯನು ಘಮಘಮಗೊಳಿಸುವೆ
ಎದೆಯುರಿಯನು ನೀಗಲಿರುವೆ.

೭೭

ಹನ್ನೆರಡು ಹೆತ್ತರು ಒಲಿದಿಲ್ಲವಲ್ಲರಿ
ಪತಿರಾಯರೆನಲಂಬುಜಮ್ಮ
ವೈದ್ಯರು ನುಡಿದರು 'ಊಹಿಸಿಕೊಳ್ಳಿರಿ
ಒಲಿದಿದ್ದರೇಗತಿಯಿಮ್ಮ ?'.

೭೮

ಕೇಳುವ ರಸಿಕರು ದೊರೆಯದ ಊರೊಳು
ವಕ್ತಾರ ಮಾಡುವುದೇನು
ಬತ್ತಲೆ ತಿರುಗುವ ಜನರಿರುವೆಡೆಯೊಳು
ಅಗಸನು ಮಾಡುವುದೇನು.

೭೯

ಸಾವಿಲ್ಲ ಮುಪ್ಪಿಲ್ಲ ಸುಸ್ಥಿರನೆಂಬಂತೆ
ಕಲಿವುದು ಸದ್ವಿದ್ಯೆಗಳನು
ಮೃತ್ಯು ಮುಂಜುಟ್ಟನು ಹಿಡಿದಿಹುದೆಂಬಂತೆ
ಮಾಳ್ಪುದು ಸತ್‌ಕಾರ್ಯಗಳನು.

೮೦

ಬಿರುಗಾಳಿ ಬೆದರಿಕೆ ಭೂರುಹ ನಿಚಯಕೆ
ಮಂಜಿನ ಭಯವಬ್ಜವನಕೆ
ಸಿಡಿಲಿನ ಅಂಜಿಕೆ ಪರ್ವತ ಶಿಖರಕೆ
ಖಳಭೀತಿ ಸಾಧು ಸಜ್ಜನಕೆ.

೮೧

ಅಡವಿಯು ಗಿಡಗಂಟಿಗಳನೆಲ್ಲ ಸುಡುವನು
ಬೆಂಕಿ ಹೊತ್ತಿದ ಒಣಮರನು
ಕುಲದೆಲ್ಲ ಘನತೆ ಗೌರವಗಳ ಕೆಡಿಪನು
ಹುಟ್ಟಿ ಹೋರುವ ಕೆಟ್ಟ ಮಗನು.

೮೨

ಹೋರಾಡಲಾರದೆ ಆಗಸನ ಹತ್ತಿರ
ಹರಿ ಪಟ್ಟೆಯುಡೆಯುಟ್ಟು ಮೆರೆದ
ಗಜಚರ್ಮಧಾರಿ ತಾನಾದನು ಶಂಕರ
ಭೈರವ ಭೈರಾಸ ಹರಿದ.

೮೩

ಆತನ ಹಿತಕಾಗಿ ಧರ್ಮವನೊರೆದರು
ಇದಿರೊಳೆ ಹಳಿವನು ಖಳನು
ಕೊಂಬನಾಡಿಸುವುದು ಹುಲ್ಲನು ತಂದರು
ಹಾಯುವ ಆಕಳು ತಾನು.

೮೪

ಸದ್ವಂಶದೊಳು ಹುಟ್ಟಿ ಬಂದಷ್ಟರಿಂದಲೆ
ಸತ್ಪುತ್ರನಪ್ಪುದು ಭ್ರಾಂತಿ
ಬಾಯಿಂದ ಬಂದುದಿದೆಂಬಷ್ಟರಿಂದಲೆ
ಉತ್ತಮವೆನಿಪ್ಪುದೆ ವಾಂತಿ.

೮೫

ಚಿನ್ನದ ಜೊತೆಯೊಳು ತೂಗುವೊಂದಿನಿತಕೆ
ಗುಲಗಂಜಿ ಬಿಗುಮಾನವೇಕೆ
ಅದು ಸಲ್ಲುವುದು ಮುಂದೆ ರಾಜನ ಮುಕುಟಕೆ
ಸಲುವೆ ನೀ ಶಬರಿಯ ಗಳಕೆ.

೮೬

ಎಲ್ಲಿ ಚರಂಡಿಯು ಹೊಲಸಿಹುದೋಡುವು–
ದಲ್ಲಿಗೆ ನೋಡದೊ ಹಂದಿ
ಕುಂದನೊಂದನು ಮಾತ್ರ ಕಂಡುಬ್ಬಿಕುಣಿವುವು
ಹಂದಿಯ ಹೋಲುವ ಮಂದಿ.

೮೭

ಸುತ್ತಲು ಕವಿದರೆ ಮೋಡದ ಕತ್ತಲು
ಗರಿ ಬಿಚ್ಚಿ ಕುಣಿದಿದೆ ನವಿಲು
ಹೋಗುವ ಹಾದಿ ತಾ ಕಾಂಬುದೆ ಕಣ್ಣಿಗೆ
ಮಳೆಗಾಲದೊಳು ಪಥಿಕನಿಗೆ.

೮೮

ಬಾನೊಳು ಕವಿದಿದೆ ನವಮೇಘಮಾಲಿಕೆ
ದೂರದೊಳಿರುವಳು ಕಾಂತೆ
ನೆತ್ತಿಯೊಳಾಡುವ ಹಾವಿಗೆ ಮೂಲಿಕೆ
ಹಿಮಗಿರಿಯೊಳಗಿರುವಂತೆ.

೮೯

ಬೊಗಸೆಯೊಳುದವನು ಕುಡಿಯುವುದಾಗದು
ಕೈತಟ್ಟಿ ಕರೆವುದು ತಗದು
ಸುಮ್ಮನೆ ಕೀಟಲೆ ಮಾಡುವುದಾಗದು
ಆಗದು ಹೆರರ ನೋಯಿಪುದು.

೯೦

ಸಿಳ್ಳೆಯ ಹೊಡಿಬೇಡ ನೆಟಿಕೆಯ ಮುರಿಬೇಡ
ಹೆರರನು ಹೆದರಿಸಬೇಡ
ಸುಮ್ಮನೆ ನಗಬೇಡ ಕಲಹವ ಕೊಳಬೇಡ
ಹಿರಿಯರ ನಿಂದಿಸಬೇಡ.

೯೧

ಕೇಳು ಅಹಿಂಸೆಯೆ ಪರತಮ ಧರ್ಮವು
ಅದೆ ಮತ್ತೆ ಪರತಮ ದಮವು
ನೋಳ್ಪೊಡಹಿಂಸೆಯೆ ಪಾವನ ದಾನವು
ಅದೆ ಪರಮೋತ್ಕೃಷ್ಟ ತಪವು.

೯೨

ಕೇಡಿಗ ಕೋಡಗವಿದ್ದರೆ ವನ ಹಾಳು
ಏಡಿ ಇದ್ದರೆ ಕೆರೆ ಹಾಳು
ಪುಂಡರು ಪುೋಕರು ಸೇರಿರುವೆಡೆಯೊಳು
ಮನೆಮಠವೆಲ್ಲವು ಹಾಳು.

೯೩

ಅತ್ತಿಗೆ ತೌರಲ್ಲ ಪಿತ್ತಾಳೆ ನಗವಲ್ಲ
ಪತ್ತಿಯ ಗಿಡ ನೆರಳಲ್ಲ.
ಸತ್ತಿಗೆ ಚಿರವಲ್ಲ ಅತ್ತೆ ಕಟ್ಟಿಗೆಯಲ್ಲ
ತೊತ್ತಿನೊಳೇಕಾಂತ ಸಲ್ಲ.

೯೪

ಅತ್ತರು ತಿಳಿಯದು ಸಕ್ಕರು ತಿಳಿಯದು
ಹಲ್ಲುಬ್ಬಿ ಹೇಗಿದ್ದರೇನು
ಪದ್ಯವು ತಿಳಿಯದು ಗದ್ಯವು ತಿಳಿಯದು
ಅರಸಿಕಗೆಂತಿದ್ದರೇನು.

೯೫

ಕಂಬಳಿ ಕಳುವಾಯಿತಲ್ಲಿ ಕನ್ನಂಬಾಡಿ
ಕಟ್ಟೆಯ ನೋಡುವ ವೇಳೆ
ಸುಮ್ಮನೆ ಬಿಟ್ಟೆನೆ ಬಂದು ನಂಜನಗೂಡಿ–
ಗೌಡುಗಟ್ಟಿದೆ ನಾನು ಕೇಳೆ.

೯೬

ಮಾತೆಲ್ಲ ಬರಿಬೆಳ್ಳಿ ಮೌನ ಬಂಗಾರವು
ಎಂದೆಂಬರೆಲ್ಲರು ಬುಧರು
ಮೌನದಿಂದಿದ್ದರೆ ಮೂರ್ಖರಾದರು ತಾವು
ಮತಿವಂತನೆಂದೆಣಿಸುವರು.

೯೭

'ಏನು' ಒಬ್ಬನ ಹೆಸರು 'ಏಕೆ' ಒಬ್ಬನ ಹೆಸರು
'ಯಾವಾಗ' ಒಬ್ಬನ ಹೆಸರು
'ಹೇಗೆ' ಒಬ್ಬನ ಹೆಸರು 'ಎಲ್ಲಿ' ಒಬ್ಬನ ಹೆಸರು
ಆಳುಗಳೆನಗೈವರಿವರು.

೯೮

ಕಡಲನು ಕಡೆದಾಗ ದೊರಕಿತು ಸಿರಿ ಹರಿಗೆ
ದೊರಕಿತು ಗರಳವು ಹರಗೆ
ಎಂದಿಗೆ ಯಾವುದು ಯಾರಿಗೆ ದೊರಕುವು -
ದೆಂದು ಹೇಳುವುದಸದಳವು.

೯೯

ತೌರಿನ ಕಡೆಯುವರುಡಲೆಂದು ತೊಡಲೆಂದು
ಎಷ್ಟೊಂದು ಕೊಟ್ಟಿದ್ದರೇನು
ಗಂಡನ ಒಲವರವೊಂದಿಲ್ಲದಿರುವಂದು
ಉಟ್ಟು ತೊಟ್ಟರೆ ಫಲವೇನು.

೧೦೦

ವಿದ್ಯೆಯನವದ್ಯವು ವಿಭವವಪೂರ್ವವು
ವಿಶ್ವಮೋಹಕವು ವಿಭ್ರಮವು
ಆವುದೊ ಕಾರಣದಿಂದಿಳೆಗಿಳಿದಳು
ಅಪ್ಸರೆಯೆನ್ನುವೊಲಿಹಳು.

ಒಂಬತ್ತನೆಯ ನೂರು

೧

ಸಾಂಬ ಸದಾಶಿವ ಶಂಕರ ಗುರುದೇವ
ತಲ್ಲಣಿಸುತಲಿದೆ ಜೀವ
ನನ್ನಪರಾಧಗಳನು ನೀನು ಮನ್ನಿಸು
ಭವಬಂಧವನು ಪರಿಹರಿಸು.

೨

ನಲ್ಲೆಯ ಹೃದಯಮಂದಿರದೊಳು ನಲ್ಲನು
ಎನಿತೆನಿತೊಳಪೊಗುತಿಪನು
ಪೊರೆಪೊಣ್ಮೆ ತನೀಸಿತಾಕೆಯು ಕೊಡಮೊಲೆ
ಸಂಕೋಚದಿಂದೆಂಬವೋಲೆ.

೩

ಹಲವು ಸಜ್ಜನರನು ಒಬ್ಬ ಕೀಳನು ಬಂದು
ಕೆಡಿಸಿ ಪಾಳ್ಗೈವನು ಕೇಳು
ಹಂಡೆಹಾಲಿನೊಳೊಂದು ಬಿದ್ದ ತಕ್ರದ ಬಿಂದು
ಹಾಲನು ಹುಳಿಗೈವವೋಲು.

೪

ಕೇವಲ ನರರೊಳು ದೈವ ಬಲವತ್ತರ-
ವಾದುದೆಂದೆನಬೇಡ ನೀನು
ಮಿತ್ರನು ಧನಪತಿಯಾದರು ಶಂಕರ
ತೊವಲುಡೆಯಾಂತನು ತಾನು.

೫

ಪ್ರತಿಕೂಲದೈವರಿಗಾರು ಸಹಾಯರು
ತಂದೆಯು ತಾಯಿಯು ಮಗನೆ
ಪತ್ನಿಯು ಭ್ರಾತೃವೆ ಎಲ್ಲರು ಪೋಪರು
ಬಿಟ್ಟಿಲ್ಲಿ ನಿನ್ನನೊರ್ವನನೆ.

೬

ತನ್ನೊಂದು ಕೂಗಿನ ಸವಿಗಾಗಿ ಮನಸೋತು
ರವಿ ಮೂಡಿ ಬಂದಪನೆಂದು
ತಿಪ್ಪೆಯ ಕೆದಕುವ ಮರಿಗಳಿಗೆಂದಿತು
ಜಂಬದ ಕುಕ್ಕುಟವೊಂದು.

೭

ಐದು ತುಂಬುವವರೆಗೆಣುಗನ ಲಾಲಿಸು
ದಂಡಿಸು ಹತ್ತರವರೆಗೆ
ಹದಿನಾರು ತುಂಬಿರಲವನನು ಪಾಲಿಸು
ನಚ್ಚಿನ ಗೆಳೆಯನ ಹಾಗೆ.

೮

ಉದ್ಯಮಸಾಹಸ ಬುದ್ಧಿ ಪರಾಕ್ರಮ
ಧೈರ್ಯವು ಮತ್ತೆ ಮೈಬಲವು
ಈ ಆರು ಇರುವಲ್ಲಿ ದೈವವು ಸಹ ನಮ-
ಗೀವುದು ತನ್ನೊಂದು ನೆರವು.

೯

ಗುಣಗಳಿಗೆಲ್ಲಕೆ ಭೂಷಣ ರೂಪವು
ಶೀಲಕೆ ಭೂಷಣ ಕುಲವು
ಸಿದ್ಧಿಯೆ ಭೂಷಣವೆನಿಪುದು ವಿದ್ಯೆಗೆ
ಭೋಗವೆ ಭೂಷಣ ಸಿರಿಗೆ.

೧೦

ಶೀಲವು ಶೌರ್ಯವು ಅತುಳ ಉತ್ಸಾಹವು
ಜ್ಞಾನವು ಮಿತ್ರಸಂಗ್ರಹವು
ಕಳ್ಳರು ಕದಿಯದ ಅಕ್ಷಯ ನಿಧಿಗಳ
ಈ ಐದು ಗುಣಗಳು ಕೇಳು

೧೧

ಇಂದು ಮಾಡುವುದನು ನಾಳೆಗೆಂದಿಡಬೇಡ
ಇಂದೆಯೆ ನೀ ಮಾಡಿ ಮುಗಿಸು
ಬೆಲೆಯೊಳಮೂಲ್ಯವು ಇಂದೆನುವುದು ನೋಡ
ಕೆಲಸಕಿಂದೆಯೇ ಮಾಡು ಮನಸು.

೧೨

ಕವಿದ ಕತ್ತಲೆಯನು ಕಂಡು ಮನದೊಳು ಬೆಂದು
ಹಿಡಿಶಾಪ ಹಾಕುವ ಬದಲು
ಹಣತೆಯನೊಂದನು ಹೇಗಾದರೂ ತಂದು
ಹಚ್ಚಿಡುವುದು ಮೇಲು ಮೊದಲು.

೧೩

ಹೆಸರಿನೊಳೇನಿದೆ ಅಂದದ ಹೆಸರೆನೆ
ಅಷ್ಟಕೆ ಮಾರುಹೋಗುವುದೆ
ಮಲ್ಲಿಗೆಯ ಹೂವನು ಕಳ್ಳಿಯ ಹೂವೆನೆ
ಕಂಪೇನು ಕಡಿಮೆಯಾಗುವುದೆ.

೧೪

ನಾಳೆಗೆ ತರುವೆನು ನವಿಲಿನ ತೋಕೆಯ-
ನೆಂದು ನೀ ತೊಟ್ಟರು ಛಲವ
ಬಿಡದಿರು ನೀನಿಂದು ಹಿಡಿದೊಂದು ಬೇಟೆಯ
ಕೈಯೊಳಗಿರುವೊಂದು ಮೊಲವ.

೧೫

ಗಂಡಿಗೆ ಸೊಗವಾವುದಿನ್ನಿದೆ ಹೆಣ್ಣಿಗೆ
ಮಿಗಿಲಾದುದೀ ಜಗದೊಳಗೆ,
ಒಮ್ಮೆಗೆ ಬೀಳುವುದಾದರೆ ತೋಳಿಗೆ
ಸಿಲುಕದೆ ಆಕೆಯ ಕೈಗೆ.

೧೬

ಜಗವೆಲ್ಲ ಧರ್ಮದೊಳಿದ್ದುದೆ ಆದರೆ
ಕತ್ತಿ ಗುರಾಣಗಳೇಕೆ
ಜನರೆಲ್ಲ ಸೌಹಾರ್ದದಿಂದಿದ್ದುದಾದರೆ
ಕಾವ್ಯಪುರಾಣಗಳೇಕೆ.

೧೭

ಜಗವೆಲ್ಲ ತಣ್ಣಗೆ ಸಾಲದು ಕಾವೆಂದು
ಸುಮ್ಮನೆ ಎಂದರೆ ಬಂತೆ
ಎದೆ ತಿದಿಯನು ಒತ್ತು ಬಿಸಿಯುಸಿರನು ಊದು
ಹೊತ್ತಿಸು ಕಿಡಿಯಾರದಂತೆ.

೧೮

ಮುಗಿವುವು ಮರಣದೊಳೆಲ್ಲ ವಿಷಾದಾಂತ
ನಾಟಕ ಕೃತಿಗಳು ಕಡೆಗೆ
ಮುಗಿವುವು ಮದುವೆಯೊಳೆಲ್ಲ ವಿನೋದಾಂತ
ನಾಟಕ ಕೃತಿಗಳು ಕಡೆಗೆ.

೧೯

ಬಿಡುವಿಲ್ಲದಿರುವಾಗ ನಗುತ ನಾ ದುಡಿವೆನು
ಬಿಡುವನು ಕೊಡು ಮಲಗುವೆನು
ಬಿಡುವಿಲ್ಲದಿರುವಾಗ ಹಾಡುತ ದುಡಿವೆನು
ಬಿಡುವನು ಕೊಡು ಮಲಗುವೆನು.

೨೦

ಸರ್ವನಾಮವ ತಿಳಿದಾವನು ಬಳಸುವ-
ನಾತನು ಜಗವನೆ ಗೆಲುವ
ನಾನು ಎಂಬೆಡೆಯೊಳು ನೀನು ಎಂಬುದನಿಟ್ಟು
ನುಡಿವುದೆ ಗೆಲುವಿನ ಗುಟ್ಟು.

೨೧

ಆವನೊ ಬರುವವನದಾವುದೊ ಕೃತಿಯನು
ವಾಣಿಯ ಕೃಪೆಯೊಳು ತಾನು
ಆವುದೊ ಕಾಲದೊಳೊರೆವನು ಲೋಗರು
ಅದನೋದಿ ಪಂಡಿತರಹರು.

೨೨

ಯಾಮವು ಕಳೆದರು ಬರಲಿಲ್ಲವಾತನು
ದೂತಿಯೆ ಪೋಗೋಣ ಏಳು
ಆವನಿಲ್ಲದಿದ್ದರು ಬದುಕುವಳಾವಳು
ಅವನವಳೊಡೆಯನಾಗುವನು.

೨೩

ನಾನಲ್ಪಳೆನ್ನುವ ಭಾವನೆ ಬರದಂತೆ
ನನ್ನಲ್ಲಿ ದಯಮಾಡುವಂತೆ
ಜಾಣ್ಮೆಯಿಂದಾತನ ಬಳಿಪೋಗಿ ಮಾತಾಡು
ತಡಮಾಡಬೇಡ ನೀನೋಡು.

೨೪

ಏನನೊ ಕೇಳುತಲಿರುವಳದೇನೆಂದು
ಬೆಸಗೊಳು ತಿಳಿದರೆ ಹೇಳು.
ಏನನೊ ನುಡಿಯುತಲಿರುವಳದೇನೆಂದು
ಬಳಿಸಾರಿ ಮೆಲ್ಲನೆ ಕೇಳು,

೨೫

ಎಂದಿಲ್ಲದಾವುದೊ ಮಾಂದ್ಯವು ಬಂದಿದೆ.
ಕಣ್ಣಿನ ನೋಟದೊಳಿಂದು
ಹಿಂದಿಲ್ಲದಾವುದೊ ನಾಚಿಕೆ ತುಂಬಿದೆ

ಈಕೆಯ ಮಾತಿನೊಳಿಂದು.

೨೬

ತಡಮಾಡಿ ಬಂದನೆಂದತ್ತಳು ಬೈದಳು
ಸುಯ್ದಳು ಸಿಟ್ಟು ಮಾಡಿದಳು
ದಿಮ್ಮನೆ ಕುಳಿತಳು ಹುಬ್ಬನು ಮುರಿದಳು
ಮತ್ತೆದ್ದು ಅಬ್ಬರಿಸಿದಳು.

೨೭

ಹುಬ್ಬನು ಕುಣಿಸುತ ಕೈಯನು ಮಣಿಸುತ
ಬಿಸಜಾಕ್ಷಿ ಮಾತನಾಡುವಳು
ಕಡೆನೋಟ ಬೀರುತ ಮೊಳೆನಗೆ ತೋರುತ
ಬಳಿನಿಂದು ಮನಸೆಳೆದಪಳು.

೨೮

ನುಡಿವಳು ಯತ್ನದೆ ನಡೆವಳು ಯತ್ನದೆ
ಗರ್ಭಭರಾಲಸೆ ಸುತನು
ನಿತ್ಯವು ಬಯಸುವಳೊಂದೆಡೆ ಮೌನದೆ
ಸುಮ್ಮನೆ ಕುಳಿತಿರುವುದನು.

೨೯

ದುಂಬಿಯೆ ಏಕೆ ನಿರರ್ಥಕಗೊಳಿಸುವೆ
ಈ ಹೊಸ ಎಳಮಲ್ಲಿಗೆಯನು
ನಿನ್ನ ತಾಡನಗಳನಾಸುವ ಹೂವಿವೆ
ಬೇರಡೆ ಸಾರವುಗಳನು.

೩೦

ಚೆಲುವೆಯ ಮೊಗದೊಳು ಮಿದುನಗೆ ಮೊಳೆದಂದು
ದೆಸೆದೆಸೆ ಬೆಳಗಿತೋರಂತೆ
ಆದರು ಕಡಲುಬ್ಬದೆನೆ ಬೆರಗಗಾದು
ಜಲರಾಶಿ ಜಡರಾಶಿಯಲ್ತೆ.

೩೧

ಲವಲಿಯ ತನಿವಣ್ಣ ಗಣೆಯೆನೆ ತೋರ್ಪುದು
ತಾನಿಂದು ತಿಂಗಳಾಭರಣ
ವನದ ಚಕೋರದ ಸವಿದುತ್ತಿಧಾವುದು
ಪರಿಣವಿಲ್ಲದ ಶೀತಕಿರಣ.

೩೨

ಪ್ಯೈಯ ಸಂಜಿಗೆಯೊಳು ಪೊಗವ ತಾವರೆಯೊಳು
ಕಣ್ಣನು ಕನ್ನೈದಿಲೆಯೊಳು
ಮಾಡಿದ ಬ್ರಹ್ಮನು ನಿನ್ನ ಈ ಮನವನು
ಕಲ್ಲೊಳು ಮಾಡಿದನೇನು.

೩೩

ಅಳಿರವದಿಂದಿಂತು ನಗುವಂತೆ ತೋರುವ
ಕಲಿಕೆಯನೆನಗೇಕೆ ಕೊಡುವೆ
ರಾತ್ರಿ ನೀನಾಕೆಯ ಮನೆಗೆಂದು ತೆರಳುವ
ವೇಳೆಯ ಕಲಿಯಕೊಟ್ಟಿರುವೆ.

೩೪

'ಮಗನಿಂದ ಕಾಗದ ಬಂದರೆ ಒಡನೆನ
ಗರ್ಥಕೆ ಬೇಕು ನಿಘಂಟು'
'ಮಗನೆನಗೋಲೆಯ ಬರೆದರೆ ಬೇಕೆನ-
ಗರ್ಥಕೆ ಬ್ಯಾಂಕಿನ ನಂಟು.'

೩೫

'ನನ್ನಾಕೆ ತಮ್ಮನು ಕೇಳಿ ಸಂಬಳವನು
ಹೆಚ್ಚಿಸಿ ಕೊಳಿರೆಂದಳೊಡೆಯ'
'ನನ್ನಾಕೆಯನು ಕೇಳಿ ಹೇಳುವೆನದಕೇನು'
ಎಂದನು ಆತನ ಒಡೆಯ.

೩೬

ಐದುಮಕ್ಕಳ ತಂದೆ ಬೆಸಗೊಂಡನ್ಯೆತಂದು
ಮಕ್ಕಳಿಗರ್ಥವ ಎಂದು
ಹತ್ತರ ಒಳಗಿದ್ದರೆಂದ ಕಂಡಕ್ಟರು
ಐವರೆ ಇಹರೆಂದರವರು.

೩೭

'ಇದೊ ನೋಡು ಚಿತ್ರ ವಿನಾಯಕನಂತೆಯೆ
ಇಲ್ಲವೆ' ಎಂದನು ಕಿಟ್ಟು
'ಹೇಗೆ ನಾ ಹೇಳಲಿ ಅವನನು ನೋಡಿಯೆ
ಇಲ್ಲವೊ' ಎಂದನು ಪುಟ್ಟು.

೩೮

ಕೈಯೊಳು ಹಣವಿಲ್ಲ ಮೈಯೊಳು ನೆಣವಿಲ್ಲ
ರೋಗವು ಗುಣವಾಗಲಿಲ್ಲ
ಹೋಗುವ ಸೂಳೆಯ ಕಂಡು ಹಮ್ಮೈಸಿದ–
ನಾದರು ನಮ್ಮೂರ ಮಾದ.

೩೯

ವಸ್ತುಗಳೆಲ್ಲವನಣಿಮಾಡಿಕೊಳ್ಳದೆ
ಕೆಲಸಕೆ ಮುಂದಾಗಬಹುದೆ
ಕೊಂತದ ಬಾಯಿಗೆ ಹಿಟ್ಟನು ಹಾಕಿದೆ
ಸಂತೆಗೆ ಎಣ್ಣೆಗೆ ಹೋದೆ.

೪೦

ಲಿಖಿತ ಲಲಾಟದೊಳಿರದಿರಲೇಗೈವೆ
ಎಷ್ಟು ಲಗಾಟವ ಹೊಡೆವೆ
ದುಡಿದುದನಲ್ಲವೊ ಪಡೆದುದನುಣ್ಣುವೆ
ವಿಧಿಯನು ಮೀರುವುದಳವೆ.

೪೧

ಹೆಣ್ಣಿಗೆ ಆದನು ಗಂಡನು ಗಂಡನು
ಗಂಡಿಗೆ ಸಾಲವೆ ಗಂಡ
ಕೋರ್ಟಿನ ತೀರ್ಮಾನವೆ ಸಾಲದ ಗಂಡನು
ಕೋರ್ಟಿಗೆ ಛಂಡನೆ ಗಂಡ.

೪೨

ದತ್ತನು ಮಗನಲ್ಲ ಧಾವಳಿ ಮಡಿಯಲ್ಲ
ಭಟ್ಟನು ಭಟನು ತಾನಲ್ಲ
ಜಾವಡಿ ನೆಲೆಯಲ್ಲ ನಸರಿಯು ಜೇನಲ್ಲ
ಬಾಣಂತಿ ಚೆಲುವೆಯೇನಲ್ಲ.

೪೩

ಉದ್ದು ಮದ್ದಿಗೆ ಸಲ್ಲ ನಿದ್ದೆ ಪಾಠಕೆ ಸಲ್ಲ
ಮುದ್ದು ವಿದ್ಯಾರ್ಥಿಗೆ ಸಲ್ಲ
ಮೊದ್ದು ಸಂಗಕೆ ಸಲ್ಲ ಸದ್ದು ಧಾನ್ಯಕೆ ಸಲ್ಲ
ಜಿದ್ದು ಬೋಧಕನಿಗೆ ಸಲ್ಲ.

೪೪

ಸೀರು ಸಿರವನು ತಿಂತು ನತ್ತು ನರವನು ತಿಂತು
ಚಿಂತೆಯು ಜನುಮವ ತಿಂತು
ಸಾಲ ಮೂಲವ ತಿಂತು ಸುಂಕ ಸಾರಿಗೆ ತಿಂತು
ಬರ ಬಂದು ದೇಶವ ತಿಂತು.

೪೫

ತಂಟೆ ನಂಟನು ಸಲ್ಲ ಒಂಟಿ ಪಯಣವು ಸಲ್ಲ
ಜಂಟಿಯು ಸಾಲವೆ ಸಲ್ಲ
ಕುಂಠನ ನೆರೆ ಸಲ್ಲ ಕುಂಟನ ಕೆಳೆ ಸಲ್ಲ
ತುಂಟನೊಳೇಕಾಂತ ಸಲ್ಲ.

೪೬

ಬೆಟ್ಟದಷ್ಟಿದ್ದರು ಹೊರುವಷ್ಟು ಕೊಳ್ಳುವೆ
ಖಂಡುಗ ಹಿಡಿಯದು ಕಯ್ಯಿ
ಮೊರ ಮೊರ ಸುರಿದರು ಹಸಿದಷ್ಟು ಉಣ್ಣುವೆ
ಬಳ್ಳವ ಹಿಡಿಸದು ಬಾಯಿ.

೪೭

ಬರುವಾಗ ದುರದೃಷ್ಟ ಬೇಗನೆ ಬರುವುದು
ಧಾವಿಸಿ ಕುದುರೆಯನೇರಿ
ಬೀಳ್ಕೊಂಡು ಹೋಹಾಗ ಮೆಲ್ಲನೆ ಹೋಹುದು
ಹೋಹಂದು ಅದು ಪಾದಚಾರಿ.

೪೮

ಕಲ್ಪನೆಯೊಳು ನಿನಗೇತರ ಬಡತನ
ಸಂಕಲ್ಪ ಭವ್ಯವಾಗಿರಲಿ
ಶಿಲ್ಪದ ಚಿತ್ರದ ಕಾವ್ಯದ ಸಿರಿತನ
ಕಲ್ಪಾಂತ ದಿವ್ಯವಾಗಿರಲಿ.

೪೯

ಒಲವು ಮಿಗಿಲಾದುದು ಗೆಲವು ಮಿಗಿಲಾದುದು
ಘನತೆ ಗಾಂಭೀರ್ಯವೆ ಮಿಗಿಲು
ನೋಳ್ಪಡೆ ಮತ್ತಿನದೆಲ್ಲಕೆ ಜಗದೊಳು
ನ್ಯಾಯ ನಿಷ್ಠುರತೆಯೆ ಮಿಗಿಲು.

೫೦

ಸುರಿವೆ ಕಣ್ಣೀರನು ಬಿಡುವೆ ನಿಟ್ಟುಸಿರನು
ಮತ್ತಿದೊ ಗದ್ಗದಗೈವೆ
ಕೋಪವಿದೇತಕೆ ತಾಪವಿದೇತಕೆ
[illegible] ಮಾನಸದೊಳಿಹುದೇಕೆ.

೫೧

ಪ್ರಾಜ್ಞನಾಗಿರ್ಪವನಧಿಕಾರಿಯಾದಂದು
ಮೂದೆರನಾದೊಳ್ಳಿತಹುದು
ಯಶವಹುದಮಿತಧನಾಗಮವಪ್ಪುದು
ನಾಕಲೋಕದ ಸುಖವಹುದು.

೫೨

ಅಜ್ಞನಾಗಿರ್ಪವಸಧಿಕಾರಿಯಾದಂದು
ಮೂತೆರನಾದ ಕೇಡಹುದು
ಅರ್ಥನಾಶನವಹುದಪಕೀರ್ತಿಯಪ್ಪುದು
ನರಕಲೋಕದ ದುಃಖವಹುದು.

೫೩

ಹೆಡ್ಡನೆ ಅಧ್ಯಕ್ಷನೆಂದಾಯ್ಕೆಗೊಳುವನು
ದೊಡ್ಡವರಿಲ್ಲದ ಸಭೆಗೆ
ಹುಂಜನೆ ವರಪಕ್ಷಿಯೆಂದಾಯ್ಕೆಗೊಳುವನು
ಪಕ್ಕಿಯೆ ಇಲ್ಲದ ಕಡೆಗೆ.

೫೪

ಮುಂಗುರುಳಳಿಯಾಗೆ ಪೊಕ್ಕಳು ಸುಳಿಯಾಗೆ
ನಯನ ಸರೋರುಹವಾಗೆ
ತೋರುವೆ ನೀನೆ ಲಾವಣ್ಯಾಂಬುವಾಪಿಕೆ
ನೀಗಿಸು ನನ್ನ ನೀರಡಿಕೆ.

೫೫

ಚರಣವಿನ್ಯಾಸದೊಳಪ್ರಗಲ್ಭನು ತಾನು
ಜನನೀರಾಗ ಕಾರಣನು
ಆಲಾಪ ಬಾಹುಳ್ಯದಿಂದೊಪ್ಪುವಾತನು
ಕುಕವಿಯು ಬಾಲಕನಿವನು.

೫೬

ಕ್ಷಾಮವು ಮಧ್ಯವು ಅಕೃಶವು ಜಘನವು
ತುಂಗವು ವರಪಯೋಧರವು
ನೀಳವು ನಯನವು ವೃತ್ತವು ವದನವು
ಸುಂದರವೀಕೆಯ ತನುವು.

೫೭

ಕುವಲಯ ಮಾಲೆಯ ಪೋಲ್ವುದು ನಯನವು
ಪೋಲ್ವುದು ಶಶಿಯನು ಮುಖವು
ಕಿಸಲಯ ಲೀಲೆಯ ಪೋಲ್ವುದು ಅಧರವು
ಬಹುಸುಖ ನಿನ್ನ ಸಮ್ಮುಖವು.

೫೮

ಗಿಣಿಯ ಕೊಕ್ಕನು ನೋಡಿ ಮುತ್ತುಗದರಳೆಂದು
ಬಂದೆರಗುತಲಿದೆ ದುಂಬಿ
ಕೊಕ್ಕನು ತೆರೆವುದು ಗಿಣಿಯದನುಣಲೆಂದು
ಜಂಬು ನೇರಿಲೆಯೆಂದು ನಂಬಿ.

೫೯

ಬಿಸತಂತುವನು ತಿಂದೆ ಸಿಹಿ ನೀರನೀಂಟಿದೆ
ಬಿಸಜದೊಳಾಸರೆ ಪಡೆದೆ
ಪ್ರತ್ಯುಪಕಾರವನೇನನು ನಿನ್ನಿಂದೆ
ಪಡೆಯಿತು ಕೊಳವೆಲೆ ಹಂಸೆ.

೬೦

ಬಾನಿನ ಬಾವಿಯ ಬಿಳಿಯ ತಾವರೆಯಂತೆ
ಜೇನಿನ ಹೊಂಗೊಡದಂತೆ
ಸಂಧ್ಯಾಂಗನೆಯ ಕೈಯ ಕಂದುಕವೆಂಬಂತೆ
ಚಂದ್ರನೈತಂದನು ಕಾಂತೆ.

೬೧

ನಿಸ್ಸಾರವಾದ ಸಂಸಾರದೊಳಂಗನೆ—
ಯೊರ್ವಳೆ ಸಾರವೆಂದರಿತು
ತನ್ನರ್ಧಪ್ಪೆಯೊಳು ತಾನಾಗಿ ಗಿರಿಶನೆ
ಗಿರಿಜೆಯನಾಂತಿಹನೋತು.

೬೨

ಪ್ರಾಸಾದವೆನಿಪ್ಪುದು ಗೃಹಿಣಿ ಕುಳ್ಳಿರ್ದೆಡೆಯು
ಮರದ ಬುಡವಾದರೂ ಸರಿಯು
ಅಡವಿಯಾಗಿರ್ಪುದು ಅವಳಿಲ್ಲದಿರುವೆಡೆಯು
ಸೌಧಾಗ್ರವಾದರು ಸರಿಯು.

೬೩

ಅವಳು ರೂಪವಿಹೀನಳದಾವಳು
ಕುಟಿಲಳು ಕಲಹ ಕಾತರಳು
ಅವಳು ಪತಿ ಹಿತವನು ಕಡೆಗಣಿಪಳು
ನಾರಿಯಲ್ಲವೊ ಮಾರಿಯವಳು.

೬೪

ಅನೃತವು ಲೋಭವು ಮಾಯೆಯಶೌಚವು
ಮೌಢ್ಯವು ವ್ಯರ್ಥಸಾಹಸವು
ಮದವು ಮಾತ್ಸರ್ಯವು ನಾರಿಯರೊಳಗಿವು
ನೋಳ್ಪೊಡೆ ಸಹಜವಾಗಿಹವು.

೬೫

ಬೀಸಣಿಗೆಯ ಹಾಗೆ ಸೆರಗನು ಬೀಸುವೆ
ನೀರೆ ಒಯ್ಯಾರದೆ ನಿಲುವೆ
ಮತ್ತೆ ಕರವಸ್ತ್ರದಂತದನೆಯು ಮಡಿಸುವೆ
ಬೇರೆ ಬಿನ್ನಾಣದೆ ಕೊಲುವೆ.

೬೬

ಗಾಬರಿಗೊಳಬೇಡ ನಾಚಿಕೆಯನು ಬಿಡು
ಪ್ರತಿವಾದಿಯನು ಕಡೆಗಣಿಸು
ಸ್ತುತಿಯಿಸು ದೊರೆಯನು ಹಾಸ್ಯದ ನುಡಿಯಾಡು
ಸಾಕಿಷ್ಟು, ಗೆದ್ದೆಯೆಂದೆಣಿಸು.

೬೭

ಓದಿ ಮುಂದಕೆ ಓದಿ ಮೀರಿತೂ ಕಾಲವು
ಸ್ಪಷ್ಟವಾಗುವುದೆಲ್ಲ ಮುಂದೆ
ಹೀಗೆ ಓದಿಸಿದರೆ ಯಾವುದೆ ಗ್ರಂಥವು
ಗುರುವಿಗೆ ಕಷ್ಟವಾಗುವುದೆ.

೬೮

ಮೇಲೆತ್ತಿ ನಿಲಿಸಿದ ಹುಬ್ಬನು ಮೆಲ್ಲನೆ
ಓಪಳು ಕೆಳಗಿಳಿಸಿದಳು
ನಾಕದ ಸೊಗವನೆ ತಂದಿಳಿಸಿದಳೆನೆ
ನೋಟದೆ ಮುದವುಣಿಸಿದಳು.

೬೯

ದುಷ್ಟರ ದೌಷ್ಟ್ಯವು ಲೋಕವಿಖ್ಯಾತವು
ತಿಳಿವುದು ಸುಲಭ ದುಷ್ಟರನು
ಶಿಷ್ಟರು ಮರೆಯೊಳಗೆಸಗುವ ದೌಷ್ಟ್ಯವು
ಜನಕೆ ಗೋಚರಿಸುವುದೇನು !

೭೦

ಅಬ್ಜಭಾಂಡದ ಮಧುವೀಂಟಿದ ಸೂರ್ಯನು
ಅಂಬರವನು ಬಿಟ್ಟು ಅರರೆ
ತಬ್ಬಿಕೊಂಡನು ಹೋಗಿ ಪಶ್ಚಿಮಾಂಗನೆಯನು
ಅದನು ಕೆಡಿಸದು ಮದಿರೆ.

೭೧

ಕಾಶಿಗೆ ಹೋದರೆ ಗಂಗೆಯು ಮಿಂದರೆ
ಹಸ್ತಿಯಾಗುವುದಿಲ್ಲ ಹಂದಿ
ಮನಶುದ್ಧಿಯಾಗದೆ ಮೈ ಶುದ್ಧವಾದರೆ
ಪೂತರಾಗುವುದಿಲ್ಲ ಮಂದಿ.

೭೧

ಹೂವಿಲ್ಲ ಗಂಧಕೆ ಹಣ್ಣಿಲ್ಲ ಕಬ್ಬಿಗೆ
ವಸ್ತುವಾಹನವಿಲ್ಲ ಕವಿಗೆ
ಕಂಪಿಲ್ಲ ಚಿನ್ನಕೆ ದಯವಿಲ್ಲ ಲೋಭಿಗೆ
ಬುದ್ಧಿಯೊಂದಿನಿತಿಲ್ಲ ವಿಧಿಗೆ.

೭೩

ಗೋಣಗುವುದೇತಕೆ ಸ್ವಾತಂತ್ರ್ಯವಿಲ್ಲೆಂದು
ಸ್ವಾತಂತ್ರ್ಯವೆಲ್ಲರಿಗಿಹುದು
ರಾಮಚಂದ್ರನಿಗಿತ್ತು ರಾವಣಾಸುರಗಿತ್ತು
ಜಗಕಾವುದೊಳಿತೆಂದು ಗೊತ್ತು.

೭೪

ತೊಲಬಾರ ಚಿನ್ನದ ತೂಕವು ಹೆಚ್ಚದು
ಚಿನ್ನಕೆ ದರವೇರಿದಾಗ
ಅದರ ತೂಕದೊಳೊಂದು ಗುಲಗಂಜಿಕುಂದದು
ಚಿನ್ನಕೆ ದರವಿಳಿದಾಗ.

೭೫

ಗಣಿಹೊಡೆದಿಳೆಯೊಳಗಿಳಿದು ಪಾತಾಳಕೆ
ಚಿನ್ನದ ಅದುರಸು ತೆಗೆದು
ಜಗಕೆ ಸಂಪತ್ತನು ತೋರ್ಪ ಸಾಮರ್ಥ್ಯಕೆ
ಮಣಿವೆನು ಶರಣು ಶರಣೆಂದು.

೭೬

ಅರೆಯೊಳು ಬೈತೊಂದು ಚಾರುವಿಗ್ರಹವನು
ವರಶಿಲ್ಪಿ ಪರಿಭಾವಿಸುತ್ತೆ
ಕಡಿದೊಟ್ಟಿ ಸುತ್ತಣ ಹೆಚ್ಚಿನ ಶಿಲೆಯನು
ಬಿಡಿಸಿ ಹೊರತೆಗೆವನು ಮತ್ತೆ.

೭೭

ಪ್ರತಿಭೆ ಅಭ್ಯಾಸಗಳೆರಡನು ಕೂಡಿಸಿ-
ಕೊಂಡರೆ ಕವಿಕರ್ಮ ಸೊಗಸು
ಹರಿಯುವ ಹೊಳೆಗೊಂದು ಕಟ್ಟೆಯ ವಿರಚಿಸಿ-
ಕೊಂಡರೆ ಕೃಷಿಕರ್ಮ ಹುಲಸು.

೭೮

ಪ್ರತಿಭೆಯೊಂದಿರಬೇಕು ವ್ಯುತ್ಪನ್ನಮತಿಬೇಕು
ಅಭ್ಯಾಸ ಗುರುಸೇವೆ ಬೇಕು
ಈ ಹಳೆಯ ಪಟ್ಟಿಗಿನ್ನೊಂದು ಸೇರಿಸಬೇಕು
ಕವಿಗೆ ಜಾಹಿರಾತು ಬೇಕು.

೭೯

ಚಾರಿತ್ರ್ಯವಿಲ್ಲದ ಚಾತುರ್ಯವೇತಕೆ
ಬರಿಯ ಚತುರತ್ವವೆ ಸಾಕೆ
ಸಾಂಗತ್ಯವಿಲ್ಲದ ಸಂಸಾರವೇತಕೆ
ಬರಿಯ ಸಾಹಿತ್ಯವೆ ಸಾಕೆ.

೮೦

ಸುಗ್ರಾಸವೊಬ್ಬರಿಗುಪವಾಸವೊಬ್ಬರಿ-
ಗೆನ್ನುವ ತತ್ವವು ಸಾಕು
ತನ್ನಿಂದುಪಯೋಗವಾಗಲಿ ನಾಲ್ವರಿ-
ಗೆನ್ನುವ ಬುದ್ಧಿಯು ಬೇಕು.

೮೧

ನಾಯಿಗೆ ಕೇಸರವನು ಕಟ್ಟಿ ನೀ ಸಿಂಹ-
ವೆಂದರೆ ಅದು ಸಿಂಹವಹುದೆ
ಆನೆಯ ನೆತ್ತಿಯ ಭೇದಿಸುವಂತಹ
ಗರ್ಜನೆಯನು ಮಾಡಲಹುದೆ.

೮೨

ಜೇನುಗೂಡನು ಮಾತ್ರ ಮೂಢನು ಕಾಂಬನು
ಕಮರಿಯ ಕಾಣುವುದಿಲ್ಲ
ಹಿಂದುಮುಂದರಿಯದೆ ಪೊಲ್ಲದುಗೈವನು
ನರಕದ ಭಯವಿನಿತಿಲ್ಲ.

೮೩

ಸಿಹಿಯ ಮಾಮರದೊಳು ಹಣ್ಣು ಬಂದಿರುವಾಗ
ಕಂಪುಂಟು ತಂಪುಂಟು ಜೊತೆಗೆ
ಧರ್ಮದ ಪಥದೊಳು ನೀನಡಿಯಿಟ್ಟಾಗ
ಅರ್ಥಕಾಮಗಳುಂಟು ನಿನಗೆ.

೮೪

ಮಾಗಿ ಸರಿದೋಡಲಿ ಮಲ್ಲಿಗೆಯರಳಲಿ
ಚೈತ್ರ ನೃಪಾಲನೈತರಲಿ
ಒಂದರಮೇಲೊಂದು ಮೋದಲಆಮೋದಗ-
ಳೈತರಲೆಮಗಿಂದು ಬೇಗ.

೮೫

ಚೆಂದುಟಿ ಹವಳವು ಸುಲಿಪಲ್ಲು ಧವಳವು
ನೀಲವು ಕುಟಿಲ ಕುಂತಲವು
ಕಂಗಳು ಕಾಳವು ಕದಪು ಸುಪೀತವು
ಅದ್ಭುತ ವರ್ಣ ಸಂಗಮವು.

೮೬

ನೀಸು ಚಂದ್ರೋಪಲದೊಳು ಕಳಿತಳುವಂದು
ನಿನ್ನ ಕಂಬನಿಯೊಳು ನಾಂದು
ಮುಖ ಚಂದ್ರಕಾಂತಿಗೆ ಕರಗಿದುದೆನುವಂತೆ
ತೋರ್ಪುದು ಶಿಲೆಯಿದು ಕಾಂತೆ.

೮೭

ಓದುವುದೇತಕೆ ಬರೆಯುವುದೇತಕೆ
ಓದಿ ಹಾಳಾಗುವುದೇಕೆ
ಓದಿ ವಿದ್ಯಾವಂತರಾದವರೆಲ್ಲರು
ಕೂಚುಭಟ್ಟರ ಗೋತ್ರದವರು.

೮೮

ಗ್ರಂಥಕೋಟಿಗಳಲಿ ಪೇಳ್ದುದನೊರೆವೆನು
ಸಾಂಗತ್ಯದರ್ಥದೊಳಾನು
ಪರರಿಗೆ ಉಪಕಾರಗೈವುದೆ ಪುಣ್ಯವು
ಪರಪೀಡನೆಯು ಪಾಪಕರವು.

೮೯

ಶಿವೆ ತಾಯಿ ಶಿವ ತಂದೆ ಗಣಪ ಸಹೋದರ
ತಂದೆಯ ಗೆಳೆಯ ಕುಬೇರ
ಸುರರ ಸೇನಾಧಿಪ ತಾನಾದರೂ ಗುಹ-
ನಿಗೆ ಲಗ್ನವಾಗಿಲ್ಲವಾಹ !

೯೦

ಮರುಭೂಮಿಯೊಳು ಬಿದ್ದ ಬೆಂಕಿ ತಾನಾಗಿಯೆ
ನಂದಿ ಹೋಹುದು ಜಗವರಿಯೆ
ಕ್ಷಮೆಯೆಂಬ ಧನುವನು ಕರದೊಳಾಂತವನನು
ಜಗದೊಳೇಗೈವನು ಖಳನು.

೯೧

ಸುಖದುಃಖಗಳ ನೀವ ದಾತನಾವನುಮಿಲ್ಲ
ಪರರೀವರೆನುವುದು ಸಲ್ಲ
ವ್ಯರ್ಥವಾದಭಿಮಾನ ನಾಮಾಳ್ವೆನೆನುವುದು
ಕರ್ಮಬಂಧಿತರೆಲ್ಲರೀದು.

೯೨

ತಾಯಿತಂದೆಯು ನೀನೆ ಬಂಧುಬಳಗವು ನೀನೆ
ಗುರು ನೀನೆ ವಿದ್ಯೆಯು ನೀನೆ
ಧನಕನಕವು ನೀನೆ ವಸ್ತುವಾಹನ ನೀನೆ
ಇಂದು ನನಗೆಲ್ಲವು ನೀನೆ.

೯೩

ಪತಿ ರೂಪಹೀನನು ಸತಿ ರೂಪಸಂಪನ್ನೆ
ಪತಿ ಚೆನ್ನ ಸತಿರೂಪ ಹೀನೆ
ಸತಿಪತಿಯರು ರೂಪಸಂಪನ್ನರಾದರೆ
ದಟ್ಟದರಿದ್ರರು ಆರರೆ !

೯೪

ಗ್ರಹಣವು ಬಿಟ್ಟಿತೆ ಆಗ್ರಹವಾರಿತೆ
ಶಾಂತವಾಯಿತೆ ಮನ ಕಾಂತೆ
ತಾನೆ ಕಳ್ಳನು ಪರರನು ನಂಬನೆಂಬಂತೆ
ವ್ಯಾಕುಲಗೊಳುವರೇನುಂತೆ.

೯೫

ನೀನೇಕೆ ನಿಲಿಸಿದೆ ವೇಣುವಾದನವನು
ನನ್ನನೆಚ್ಚರಿಸಿದೆಯೇಕೆ
ಗಾನಸುಧಾರಸಸುಖದೊಳಗಿರ್ದೆನು
ಏಕೆ ನೂಕಿದೆ ಮತ್ತೆ ಭವಕೆ.

೯೬

ನಿತ್ಯವು ಬರುತಿಹ ತನ್ನ ಶೌರವರಿಗೆ
ಮೇಲಿಂದ ಮೇಲುಪಚಾರ
ನಾಲ್ಕಾರು ವರುಷಕೆ ಬರುವ ನನ್ನವರಿಗೆ
ಮರೆಯದಂತಹ ಅಪಚಾರ.

೯೭

ಯತ್ನಪೂರ್ವಕವಾಗಿ ಕೃಶಗೈದು ತನುವನು
ನೇಮದೊಳಿರ್ದನುದಿನವು
ಧರ್ಮವನಾರ್ಜಿಸಿಕೊಳುವನು ನಿಪುಣನು
ಲಭಿಸದು ಸುಖದಿಂದೆ ಸುಖವು,

೯೮

ತೃಷ್ಣೆಯೆ ದೇವಿಯೆ ನಿನಗಿದೊ ನಮನವು
ಧೈರ್ಯವಿಪ್ಲವಕಾರಿಯೆಂದೆ
ಮೂರುಲೋಕದ ನಾಥನಾದರು ವಿಷ್ಣುವು
ವಾಮನನಾದ ನಿನ್ನಿಂದೆ.

೯೯

ಹಿಂದಾಗಲಿಲ್ಲವು ಮುಂದಾಗಲಾರನು
ಕೃಪಣನಂತಹ ದಾನಿ ತಾನು
ಕೈಮುಟ್ಟ ಅಪವಿತ್ರವಾಗದೊಲೀವನು
ವಿತ್ತವನನ್ಯರಿಗವನು.

೧೦೦

ಗೆಳೆಯರು ಕೆಲವರು ಗೋಮುಖವ್ಯಾಘ್ರರು
ಒಳಗೊಂದು ಹೊರಗೆ ಮತ್ತೊಂದು
ಖಳರು ನಮ್ಮಿದಿರೊಳು ಪೊಗಳುವರಿನಿದಾಗಿ
ಇಳಿಕೆಗೆಯ್ವರು ಹಿಂದೆ ಹೋಗಿ.

ಹತ್ತನೆಯ ನೂರು

೧

ಶ್ರೀ ರಾಘವೇಂದ್ರವೆ ಗುರುಸಾರ್ವಭೌಮನೆ
ಪರಮನೆ ಭಕ್ತವತ್ಸಲನೆ
ರಕ್ಷಿಸು ನನ್ನನು ನಿನ್ನಡಿಗೆರಗುವೆ
ಕಡೆಗಣಿಸುವುದೇನು ತರವೆ.

೨

ದ್ವಿಜನಿಗಸಂತುಷ್ಟಿಯಿಂದೆ ವಿನಾಶವು
ನೃಪನಿಗೆ ತುಷ್ಟಿಯೆ ಮುಳಿವು
ಲಜ್ಜೆಯೆ ಗಣಿಕೆಗೆ ನಾಶನಿಮಿತ್ತವು
ನಿರ್ಲಜ್ಜೆ ಸತಿಯರಿಗಳಿವು.

೩

ನೀ ಬಳಿಯಿದ್ದರೆ ನಿನ್ನೆದೆಯೊಲವಿನ
ಮಂಗಳದೀಧಿತಿ ಬೆಳಗೆ
ಜೇನಿನ ಹಾಲಿನ ಹೂವಿನ ಹಣ್ಣಿನ
ತನಿತವರೀ ತಿರೆಯೆನಗೆ.

೪

ಕಸಕಡ್ಡಿ ಅಡ್ಡಿಬಂದೊಳಚರಂಡಿಯು ನೀರು
ಮೇಲಕೆ ಉಕ್ಕುವವೋಲೆ
ಹಳೆಯ ದುರ್ಭಾವಗಳೊತ್ತಡದೊಳು ನೂರು
ಕೊಳೆ ಕಾಂತೆ ಬಂದಿವೆ ಮೇಲೆ.

೫

ಪಾರಿಜಾತವು ತಾನು ತನ್ನ ನರುಗಂಪನು
ಸುತ್ತೆಲ್ಲ ಹರಹಿದರೇನು
ಪಿಕ ವಧುವಿನ ಹೃದಯವನಪಹರಿಸುವು-
ದಿವ್ಯಾಮ್ರವೀಯೊಂದೆ ತರುವು

೭

ಹುಬ್ಬಿನ ಬಿಲ್ಲನು ಹೆದೆಯೆಳೆದಣಿಮಾಡಿ
ಕುಡಿನೋಟದಂಬನು ಹೂಡಿ
ಇಂತೆಸೆಯುವರೇನೆ ನನ್ನೆದೆಯನೆ ನೋಡಿ
ಒಬ್ಬನೆ ಇರುವಾಗ ಖೋಡಿ.

೭

ನವಿಲಿನ ಗರಿಯು ಬೀಸಣಿಗೆಯು ಗಾಳಿಯು
ಬೀಸದಿರೀಪರಿ ಸಖಿಯೆ
ಬೀಸಿ ನನ್ನೆದೆಯು ಈ ವಿರಹದ ಬೆಂಕಿಯು-
ನುಜ್ವಲಗೊಳಿಪುದು ಸರಿಯೆ.

೮

ಕತ್ತಲಕಣಿವೆಯಿನೆಂತೊ ಮೇಲೈತಂದೆ
ಮತ್ತೊಮ್ಮೆ ತಲೆಯೆತ್ತಿ ನಿಂದೆ
ಹೊಸ ದಿನವ್ರುದಿಸಿತು ಹೊಸಬೆಳಕನು ಕಂಡೆ
ದೇವಲೋಕದ ಸುಖವುಂಡೆ.

೯

ಸಿಡಿದು ಹಾರುವುದೆಂದು ಓಡಿಬಂದಳು ಬೆಚ್ಚಿ
ಆನೆಪಟಾಕಿಯು ಹಚ್ಚಿ
ಪುಸ್ಸೆಂದು ಅದು ಆರಿತೆಲ್ಲರು ನಕ್ಕರು
ನಾಚಿ ಮನೆಹೊಕ್ಕಳು ಭೀರು.

೧೦

ಎಲ್ಲರಿಗಿರುವುದು ಎಚ್ಚರವಿರುವಂದು
ಕಣ್ಣೆದುರಿನ ಒಂದೆ ನರಕ
ಎಲ್ಲರಿಗಿರುವುದು ನಿದ್ದೆಯೊಳಿರುವಂದು
ಅವರವರದೆ ಬೇರೆ ನಾಕ.

೧೧

ಮಣ್ಣನು ನೆನೆಯಿಸಿದಷ್ಟಕೆ ಕುಂಬಾರ-
ನಾರೊಬ್ಬನೂ ಆಗಲಾರ
ಕುಡಿಕೆಗೆ ಬೇಕಪ್ಪೆ ಕೋಲು ಕೈಚಳಕವು
ಚಕ್ರವು ಬೆಂಕಿಯು ಕಾವು.

೧೨

ನುಡಿಯೊಳು ಒಲವನು ತೋರುವಳೋರಂತೆ
ಜೇನನೆ ಮಳೆಗರೆವಂತೆ
ಮಾಯಾವಿ ಮರೆಮೋಸಗಳ ತನ್ನ ಮನದೊಳು
ಹುದುಗಿಸಿಕೊಂಡಿಹಳಿವಳು.

೧೩

ಬಾಯೊಳು ಸವಿಮಾತು ತಣ್ಣಗೆ ನುಣ್ಣಗೆ
ಬೆಣ್ಣೆಯು ಮುದ್ದೆಯ ಹಾಗೆ
ಗೃಹಕಲಹದ ಬೆಂಕಿ ಹೊಗೆಯಾಡತೊಡಗಿದೆ
ಮನದೊಳು ಮನೆಯೊಳು ಭರದೆ.

೧೪

ಹುಲ್ಲಿನ ಗೊಣಬೆಯಂತಿಹುದು ಈ ಲೋಕವು
ಅದರಾಚೆಗೀಚೆಗೆ ಕೆಲಕೆ
ಕತ್ತೆಗಳಂದದೆ ಕಚ್ಚಾಡುತಿರುವುವು
ದೇಶದೇಶಗಳೊಡೆತನಕೆ.

೧೫

ಪೊಸಮಳೆಗರೆದೆಮಗೀ ಮೇಘರಾಜನು
ಹೊಸಹೊಸತನು ಮೊಳೆಯಿಪನು
ಹೊಸತು ಹಳತಾದಂತೆ ತಿರೆ ತಾಯಿ ಮಡಿಲೊಳು
ಅಪ್ಪುಗಳನು [illegible]

೧೬

ಹೋಹಾಗ ಬರುವಂತೆ ಬರುವಾಗ ಹೋಹಂತೆ
ತೋರ್ಪವರೀ ಮೂರು ನೋಡಿ
ಒಬ್ಬ ಪುಡಾರಿ ಮತ್ತೊಬ್ಬಳು ವಯ್ಯಾರಿ
ಮತ್ತಿನದಿನ್ನೊಂದು ಏಡಿ.

೧೭

ಕೊಂಕಂನೋಟದೊಳೆನ್ನನೇತಕೆ ಕೊಲ್ಲುವೆ
ಬಿನ್ನಾಣಿ ಕೊರಳ ಕಟ್ಟಾಣಿ
ಕಿಂಕರನಂದದೊಳೇನೆಲ್ಲವೆಸಗುವೆ-
ನಾದರು ನಿನಗಿಲ್ಲ ಕರುಣೆ.

೧೮

ಹಗಲಿಗೆ ಕಣ್ಣುಂಟು ಇರುಳಿಗೆ ಕಿವಿಯುಂಟು
ಬೈಗಿಗೆ ನಾಸಿಕವುಂಟು.
ಸುದ್ದಿಗೆ ಕಾಲುಂಟು ಮುದ್ದಿಗೆ ಕೈಯುಂಟು
ಚಾಡಿಗೆ ನಾಲಗೆಯುಂಟು.

೧೯

ಬಾ ನೋಡು ಮೂಡಿಹುದುಂದಯದಿನ್ನೊಂದು
ಕೈನೀಡಿ ಒಳಗೊಯ್ದು ನಮಿಸು
ಸ್ವರ್ಗದಿಂದ್ಯೈತಂದ ಹರಿಕಾರನಿವನೆಂದು
ನೀನುದಯುಂವನನಂಭವಿಸು.

೨೦

ಬದುಕಿನ ಉದ್ದಕೆ ಹೆಂಡತಿಯುನು ನೀನು
ಬೆನ್ನೊಳು ಹೊತ್ತಿದ್ದರೇನು
ನೊಂದು ನೀನೆಂದಾದರಿಳಿಯೆಂದರಷ್ಟಕೆ
ಬಳಲಿದೆನೆನ್ನುವಳಾಕೆ.

೨೧

ಸೇರಿದರೆಂದರೆ ಮುದುಕಿಯರಿಬ್ಬರು
ಬೆಳೆವುದು ಮಾತಿಗೆ ಮಾತು
ಸಂತೆಯ ಮಾಳದ ಗದ್ದಲಗೈವರು
ಬಳಿಯೊಳಗಿದ್ದರೆ ಬಾತು,

೨೨

ನಮ್ಮವರಿವರೆಂದು ಗುಟ್ಟಿನ ಮಾತನು
ಮೂವರಿಗೊರೆದರೆ ಸಾಕು
ಗುಟ್ಟು ಗಾವುದದಾಚೆ ಹತ್ತಾರು ಜನರನು
ಮುಟ್ಟಲು ಹೊತ್ತೆಷ್ಟುಬೇಕು.

೨೩

ತುರಿಕೆಯಾದವನೆಯೆ ತುರಿಸಿಕೊಳ್ಳುವನಲ್ತೆ
ತುರಿಯಿಲ್ಲದವಗೇಕೆ ಚಿಂತೆ
ಅವರಿವರೆಲ್ಲರುವೊಬ್ಬನ ಹರಿಬಕೆ
ಕೆಮ್ಮನೆ ಶಿರವೊಡ್ಡಲೇಕೆ,

೨೪

ಮೊಗವೆಂತು ಬೆಳ್ಳಗೆ ಬೆಳಗುವ ಚಂದ್ರನು
ಹಾಸವು ಚಂದ್ರಿಕೆಯಂತು
ಚಂದ್ರನೆ ಸರಿದೊರೆ ಚಂದ್ರನಿಗೆಂತಂತು
ದೊರೆ ನೀನೆ ನಿನಗೆ ಸಮಂತು.

೨೫

ಮುಖವು ಕಮಲದಂತೆ ಅಲಕವು ಮಲದಂತೆ
ತೋಳು ತಾವರೆನಾಳದಂತೆ
ನವಿರು ಶೈವಲದಂತೆ ನಯನವು ಮೀನಂತೆ
ಕಾಂತೆ ಸರೋವರದಂತೆ.

೨೬

ಒಳಗೆಲ್ಲ ಕ್ರೌರ್ಯವು ಹೊರಗೆ ಸುರೂಪವು
ಹಲವರಿಂತಪ್ಪರು ಕಾಂತೆ
ಒಳಗೆ ಕಾಠಿಣ್ಯವು ಹೊರಗೆ ಸುಪಕ್ವವು
ಹಾವುಮಕ್ಕಿಯ ಗಿಡದಂತೆ.

೨೭

ನುಣ್ಣನೆ ಹಣೆಯೊಳು ಹೊಳೆಯುವ ಕಪ್ಪನೆ
ತಿಲಕವು ದುಂಡಾಗಿ ತೋರೆ
ಮೊಗವೆ ತಾವರೆಯೆನೆ ತಿಲಕವೆ ಅಳಿಯನೆ
ಕಣ್ಣಿಗೆ ಚೆಲುವಾದ ನೀರೆ.

೨೮

ಶ್ಯಾಮ ಸುಂದರನಾದ ರಾಮಚಂದ್ರನ ನೋಡಿ
ಮನದೊಳಗಾನಂದ ಮೂಡಿ
ಬನದೊಳು ಬರ್ಹಿಗಳಾಡುತಲಿಹವಿಂದು
ಮೇಘವೆ ಇರಬಹುದೆಂದು.

೨೯

ಸರಳತೆ ಸಾಲದು ಕಾರ್ಯದ ಸಿದ್ಧಿಗೆ
ವಕ್ರತೆ ಸಹ ಬೇಕು ನಮಗೆ
ಮಡಿದೆವಾದರೆ ಬೆರಳನು ನೆಟ್ಟಗೆ
ಹಿಡಿಯುವುದೇನನು ಹೇಗೆ.

೩೦

ನಾನದ್ವಿತೀಯನು ಕಾಂತಿಯೊಳೆಂದೇಕೆ
ಕೆಮ್ಮನೆ ಮೆರೆವೆ ಚಂದ್ರಮನೆ
ದಿಟವ ನೋಡುವೆನೆಂದು ಲೋಕ ಸಂಚಾರಕೆ
ತೊಡಗಿರುವವನೊಬ್ಬನಿಹನೆ.

೩೧

ಮಿತ್ರನ ಮೈತ್ರಿಯನರಿವೊಡೆ ಗುಟ್ಟೊಂದು
ಮೊದಲೊಂದು ಸಟೆಯನೆ ಹೇಳು
ತನ್ನೊಳೆ ತಾನದನವನಿಟ್ಟುಕೊಂಡಂದು
ಬಳಿಕ ನೀ ದಿಟವನು ಹೇಳು.

೩೨

ಲೋಕದೊಳೆಂದಿಗು ಸಟೆಯನು ಆಡನು
ವಾಗ್ದಾನವನು ಮಾಡದವನು
ಹೊಲ್ಲದನೆಂದಿಗುಮೆಸಗನು ಕಣ್ಣನು
ತೆರೆದಿಳೆಯನು ನೋಡದವನು.

೩೩

ಸೊಂಟಕೆ ಸೆಕ್ಕಿಸಿ ಬೀಗದ ಕೈಯನು
ಓಡಾಡುತಿದ್ದರೆ ನೀನು
ನೀನೊವೆ ಸಭ್ಯನು ನೆರೆಮನೆಯಾತನು
ತಾನೊವೆ ಸಭ್ಯನಾಗುವನು.

೩

ದೈವವು ಒಲಿದಿರಲಾವುದಸಾಧ್ಯವು
ನೆಲನಹುದಬ್ಧಿಯ ಜಲವು
ದೈವವು ಮುನಿದಿರಲಾವುದುಪಾಯವು
ಜಲವಾಗುವುದು ನಿಂತ ನೆಲವು.

೩೫

ನವಿಲಿಗೆ ನೋಡಣ್ಣ ಬಾಲಕೆ ಒಹುತೋಕೆ
ತಲೆ ಸಣ್ಣ ನಸು ತಿಳಿವಳಿಕೆ
ಮಾತಿನ ಸುಬ್ಬಣ್ಣರಿರುವರು ಜಗದೊಳು
ಬಹುಮಂದಿ ನವಿಲಿನಂತೆ.

೩೬

ಹೆಣ್ಣಿಗೆ ನಾಯಿಗೆ ಹೋಲಿಪೆಯಾದರೆ
ನಾಯಿಯೆ ಹೆಣ್ಣಿಗೆ ಮಿಗಿಲು
ಬೊಗಳದು ತನ್ನೊಡೆಯನು ಬಂದನೆಂದರೆ
ಶ್ವಾನವು ಹೆಣ್ಣನವೋಲು.

೩೭

ಕುಡಿದರೆ ಮಡಿಯುವೆ ಕುಡಿಯದಿದ್ದರೆ ಮಡಿವೆ-
ನೆಂದಾಗೆ ಕುಡಿವುದೆ ಲೇಸು
ಕುಡಿಯದೆ ಹೋದರು ಕುಡುಕ ನೀನೆಂದರೆ
ಕುಡುಕನಾಗುವುದೊಳ್ಳಿತ್ತೈಸೆ.

೩೮

ಬಾಳೆಯ ಹಣ್ಣನು ತಿಂದವರೆಸೆವರು
ಸಿಪ್ಪೆಯ ಬೀದಿಯ ಕೊನೆಗೆ
ಕಾಣದೆ ಕಾಲಿಟ್ಟು ಜಾರುವರನ್ಯರು
ಕಷ್ಟವು ಬರುವುದೆ ಹೀಗೆ.

೩೯

ತಾನೇಕಕಾಲದೊಳಾವಳು ಮೆರೆವಳು
ಆಳಾಗಿ ಅರಸಿತಿಯಾಗಿ
ಅವಳೆಯೆ ನಿಜವಾದ ಗೃಹಿಣಿಯೆಂದೆನಿಪಳು
ಪತಿಗೆ ತಾನನುಕೂಲೆಯಾಗಿ.

೪೦

ದಿನಕೊಂದು ಹೊಸಹೊಸ ಸುಳ್ಳನು ಹೇಳುತ
ಹೆಣ್ಣನು ಸಂತೋಷಗೊಳಿಸು
ದಿನಕೊಂದು ಹೊಸಹೊಸ ಮೂಳೆಯನೆಸೆಯುತ
ನಾಯಿಯನಾನಂದಗೊಳಿಸು.

೪೧

ಜನರಾರನಾದರು ಹೊಗಳಿದರೆಂದರೆ
ಕೆಲವರೆ ನಂಬುವರದನು
ಜನರಾರನಾದರು ತೆಗಳಿದರೆಂದರೆ
ಎಲ್ಲರು ನಂಬುವರದನು.

೪೨

ಹತ್ತರ ಬಾಲೆಯರಮರಿಯರೆನುವರು
ಗರತಿಯರಿಪ್ಪತ್ತರವರು
ನಲವತ್ತರವರನು ದೆವ್ವಗಳೆನುವರು
ಮಾರಿಯರಾವಮುಂದಣವರು.

೪೩

ಗದ್ಯವು ಒರೆವುದು ಸವಿಯನು ಚಿತ್ತಕೆ
ಸ್ನೇಹಿತರೊರೆದಪರದೆಗೆ
ಪದ್ಯವು ಸವಿಯನು ಪೇಳುವುದಾತ್ಮಕೆ
ಮಿಕ್ಕವು ನುಡಿವುವು ಕಿವಿಗೆ.

೪೪

ಬಿಲ್ಲನು ಕೊಟ್ಟರೆ ಶರವನು ಕೊಟ್ಟಂತೆ
ಏತಕೆ ಮತ್ತೆ ಬತ್ತಳಿಕೆ
ಮನವನು ಕೊಟ್ಟರೆ ತನುವನು ಕೊಟ್ಟಂತೆ
ಉಳಿಹುದೇನು ಚೇತನಕೆ.

೪೫

ಬನದೊಳಗರಲೆಂತು ಬಾನೊಳಗರಿಲೆಂತು
ಉಂಗರದೊಳು ಹರಳೆಂತು
ಗುಂಡಿಯೊಳು ಸೊಡರೆಂತು ಉಡಿಯೊಳು ಹಣವೆಂತು
ನುಡಿಯೊಳು ಗಾದೆಗಳೆಂತು.

೪೬

ಧನಿಕನ ರೋಗವು ನೂರಾರು ಬಗೆಯುವು
ಹಸಿವೆಯು ಬಡವನಾಮಯವು
ಧನಿಕನೌಷಧಗಳು ನೂರಾರು ತೆರನವು
ದುಡಿಮೆಯೆ ಬಡವನೌಷಧವು.

೪೭

ತಿಳಿವನು ಕೊಡಲಾರದಾತನು ಜಗದೊಳು
ಕೇಡಿಗನಾದಾನು ಜೋಕೆ
ಕರೆದರೆ ಹಾಲನು ಕೊಡದಿರುವಾಕಳು
ಒದೆವುದೆ ದೃಷ್ಟಾಂತವಿದಕೆ.

೪೮

ಆವುದನಾದರು ಸಾರುವುದಿದ್ದರೆ
ಹೆಣ್ಣೊಬ್ಬಳಿಗೆ ಹೇಳು ಸಾಕು
ಸಂತೆಯು ಜನರೆಲ್ಲರರಿದಪರದನರೆ-
ಚಣದೊಳು ಮತ್ತೇನು ಬೇಕು.

೪೯

ದೇವರು ಕೊಟ್ಟುದನೊಲಿದನುಭವಿಸದೆ
ಅಷ್ಟಕೆ ಸಂತೋಷಪಡದೆ
ಎಟಕದ ವಸ್ತುವನಾಶಿಸಿ ನೋವುದೆ
ಅದಕಾಗಿ ಅಳುವುದೆ ಮೂಗುದೆ.

೫೦

ಗಡಿದುರ್ಗದೊಳೆ ಮೆಟ್ಟಿಮುರಿದಟ್ಟಿ ಬಿಡಿ ನೀವು
ಕೆಟ್ಟ ಆಲೋಚನೆಗಳನು
ಬಿಟ್ಟಿರಾದರೆ ನಿಮ್ಮ ನೊಟ್ಟೈಸಿ ಮುರಿವುವು
ಕೊಳುವುವು ರಾಜಧಾನಿಯನು.

೫೧

ಕಣ್ಣರಳಿಸಿ ನೀನು ಆಕೆಯ ರೂಪಕೆ
ಹಿಗ್ಗಿ ಬೆರಗಾಗುವ ಬದಲು
ನೆರೆಹೊರೆಯವರೆನುವಾಕೆಯ ವಿಷಯಕೆ
ಕಿವಿದೆರೆದಾಲಿಸು ಮೊದಲು.

೫೨

ತಲೆಮೇಲೆ ಹಾರುವ ಹಕ್ಕಿಯ ಗತಿಯನು
ತಪ್ಪಿಸಲಾರೆವು ನಾವು
ಬಂದದು ತಲೆಯೊಳು ಗೂಡುಕಟ್ಟುವುದನು
ತಪ್ಪಿಸಿಕೊಳಬಹುದಾವು.

೫೩

ಹತ್ತಿರವಿದ್ದವರನು ಮಾತ್ರ ಸುಟ್ಟಾನು
ಸುಟ್ಟರು ತಾನು ಕೃಶಾನು
ದೂರವಿದ್ದವರನು ಸಹ ನೋಡು ಮಾರನು
ನಿರ್ದಯನೆನೆ ದಹಿಸುವನು.

೫೪

ನಾನೊಬ್ಬ ನಿದ್ರೆಯ ಮಾಡಿದೆನಾದರೆ
ಅದು ನನ್ನ ಒಬ್ಬನ ಸುಖಕೆ
ನಾನೊಬ್ಬನೆಚ್ಚತ್ತು ದುಡಿಯುವುದಾದರೆ
ಅದು ಊರಿನೆಲ್ಲರ ಹಿತಕೆ.

೫೫

ಹೆಜ್ಜೆಯ ಗುರುತನು ಹುಡುಕುವಾಯಸವೇಕೆ
ಹುಲಿಯೆ ಕಣ್ಣೆದುರಿರುವಂದು
ಅವರಿವರನು ಬೆಸಗೊಂಬುದಿದೇತಕೆ
ಕಣ್ಣೆದುರೊಳೆ ನಡೆದುದಕೆ.

೫೬

ಬೆಲ್ಲವು ಇಮ್ಮಡಿ ಸವಿಯಪ್ಪುದಾರಿಗೆ
ಬೇವನುಂಡವರಿಗೆ ತಾನೆ
ಮೊದಲೊಳು ಸಂಕಷ್ಟಗಳನು ಕಂಡವರಿಗೆ
ಸುಖಬರಲದರತಿಶಯ ತಾನೆ.

೫೭

ಎಲ್ಲೆಡೆಯೊಳುಂ ತುಂಬಿ ಭೋರ್ಗರೆವಬ್ಧಿಯ
ಕಂಡೊಡನಾ ಆಂಜನೇಯಂ
ಸ್ಮರಿಯಿಸಿಕೊಂಡನು ಮಂಗಳ ಮೂರ್ತಿಯ
ಶ್ರೀರಾಮಚಂದ್ರನ ಪರಿಯ.

೫೮

ಮೂಡಿತು ಮನದೊಳು ಕೆಟ್ಟ ಆಲೋಚನೆ
ಸಾವಿರದೊಂದನೆ ಸಲಕೆ
ಸಂಸಾರದೊಳು ಬೆಂದ ನನ್ನಸುವನು ನಾನೆ
ಬೇಗನೆ ಕಳೆದುಕೊಂಬುದಕೆ.

೫೯

ಬಿರುಗಾಳಿ ಬಂದರೆ ಹಕ್ಕಿಯ ತೆರದೊಳು
ತರಗೆಲೆ ಸಹ ಹಾರಲಿಹುದು
ದೈವ ಕಣ್ದೆರೆದರೆ ಹಿಡಿದ ಊಳಿಗದೊಳಂ
ನನಗಾವುದೂಣೆಯವಿಂದು.

೬೦

ಸುಕುಮಾರತರದವಯವಗಳಿಂದಪಹರಿ-
ಸಿಹಳೀಕೆ ಕುಸುಮ ಕಾಂತಿಯನು
ಸುಮಶರನಾದರೊ ಯುವಜನರನು ಪರಿ-
ಪರಿಯೊಳುಂ ಪೀಡಿಸುತಿಹನು.

೬೧

ನಡೆವಾಗ ಕೋಮಲ ಚರಣೆ ನೊಂದಿರುವಳು
ಗುರುಜಘನದ ಭಾರದಿಂದೆ
ಜನರು ನೊಂದಿರೀವರು ನೋಡುವ ಭರದೊಳು
ಮನದ ಆ ತನನನದಿಂದೆ.

೬೨

ಕ್ಷೀಣಿಸಿದರು ಮತ್ತೆ ವರ್ಧಿಪ ಚಂದ್ರನೆ
ಸರ್ವೋಚ್ಚವೆನಿಪಲಂಕಾರ
ಕ್ಷಯಿಸಿ ಹೋದರೆ ಮತ್ತೆ ವೃದ್ಧಿಯ ಪಡೆಯದ
ಯೌವನಕಿರಲಿ ಧಿಕ್ಕಾರ.

೬೩

ನೂರಾರು ತಪ್ಪುಗಳನೆ ನಾವು ಸರಿಯೆಂದು
ಹರೆಯದೊಳೊಪ್ಪಿಕೊಳ್ಳುವೆವು
ಸರಿಯಾದುದನೆ ನಾವು ತಪ್ಪಿ ಹೋಗಿಹುದೆಂದು
ಮುಪ್ಪೊಳು ಶಂಕಿಸುತಿಹೆವು.

೬೪

ಹೇರನು ತಾವೆಯೆ ಪೊತ್ತಿಹರಾದರು
ಹೇಸದೆ ಲೋಗರು ಹಲರು
ನೆರೆಹೊರೆಯವರನು ಕತ್ತೆಗಳೆನುವರು
ಬಿಸವಂದವಿಂತಹ ಚದುರು.

೬೫

ಕುಡುಗೋಲು ಹುಲ್ಲನು ತನಗೆದುರಾಗಿಯೆ
ಕತ್ತರಿಸುವುದಲ್ತೆ ತಾನು
ತನ್ನಡೆಗೆಯೆ ಕಂಬಳಿಯನು ಒಬ್ಬೊಬ್ಬನು
ಹೊದೆಯಲೆಂದೆಳೆದುಕೊಳ್ಳುವನು.

೬೭

ಹಣವನು ಕೊಂಡರು ಉಳುಹುವನಸುವನು
ಕಳ್ಳನು ಕರುಣೆಯಾಗರವು
ಹಣವನು ಹರಣವನೆರಡನು ಕೊಳುವಳು
ಹೆಂಗಸು ವಿಷದ ನಾಗರವು.

೬೭

ಮುತ್ತಮ್ಮಗೀಗೀಗ ಮುದಿಕಳೆ ಬಂದರು
ಹೋಗಿಲ್ಲ ಹಿಂದಿನ ಚದುರು
ನಗೆಯೊಳು ತುಂಟುಂಟು ಕಣ್ಣೊಳು ಕೊಂಕುಂಟ
ನುಡಿಯೊಳು ರಸ ಬಹಳುಂಟು.

೬೮

ಊರೆಲ್ಲ ನಂಟರು ಹಣವ ಗಂಟಿದ್ದರೆ
ಕುಣಿದು ಕುಂಬಿಡುವುದು ಜಗವು
ರೊಟ್ಟಿಯ ತುಣುಕೊಂದು ಕೈಯೊಳಗಿದ್ದರೆ
ನಾಯಿಗಳಾರೇಳು ಬಹವು.

೬೯

ಮಕ್ಕಳು ಕೆಟ್ಟವರಾದರೆ ಕೂಡಿಡ-
ಬಾರದು ಹಣವನು ತಂದೆ
ಅವರು ಸುಸಂಸ್ಕೃತರಾದರೆ ಕೂಡಿಡ-
ಲೇತಕೆ ಹಣವನು ತಂದೆ.

೭೦

ಆಕೆಯ ವನಿತೆಯೆಂದೆಲ್ಲರು ಕರೆವರು
ಹಾಗೆಯೆ ಕರೆಯಲಿ ಅವರು
ತರುಣರ ಪರಿಣತ ತಪವೆಂದು ಅವಳನು
ನಾನೇನೊ ಪರಿಗಣಿಸುವೆನು.

೭೧

ಹಗಲೆಲ್ಲ ಬಲುನಿದ್ದೆ ಇರುಳೆಲ್ಲ ಜಾಗರ
ಹೆಣ್ಣಿಲ್ಲ ಹೆಬ್ಬುಲಿಯೀಕೆ
ಈ ಹೆಣ್ಣಿನೊಡನಾಟ ನನಗೆ ಭಯಂಕರ
ನಾನು ಸರ್ಕಸ್ಸಿನ ಮೇಕೆ.

೭೨

ವೈಭವಗಳ ಸೂರನೀವನು ದೇವನು
ಮುರಿಯುವೊಡಧಮಜೀವವನು
ಇರುವೆಗೆ ರೆಕ್ಕೆಗಳೆರಡನು ಕೊಡುವನು
ಕೊನೆಗೆ ಉಳಿಸುವೊಡದನವನು.

೭೩

ಎರಡು ಕಲ್ಲಂಗಡಿ ಹಣ್ಣನು ಹಿಡಿದೆತ್ತಿ
ಕಯ್ಯೊಂದರೊಳೆ ತರಬಹುದೆ
ಅದನಿದನೆಲ್ಲವನೊಟ್ಟಿಗೆ ನೀನೆತ್ತಿ-
ಕೊಂಡರೆ ಕೆಲಸ ಸಾಗುವುದೆ.

೭೪

ಮೊದಲು ನೆಲವನು ಉತ್ತು ಆಯ್ದು ಬೀಜವ ಬಿತ್ತ
ಬಿಡು ನೀರು ಗೊಬ್ಬರ ಹಾಕು
ಕಸಕಳೆಗಳ ಕಿತ್ತು ಪಯಿರನು ಮೇಲೆತ್ತು
ಬರುವ ಭಾಗ್ಯದ ಲೆಕ್ಕ ಹಾಕು.

೭೫

ಬಡವನ ದೌರ್ಭಾಗ್ಯವಾತನ ತುಳಿವುದು
ಪಾತಾಳದಿಂದತ್ತ ತಳಕೆ
ಅದುವೆ ದೊಡ್ಡವನನು ಮೇಲೆತ್ತಿ ಹಿಡಿವುದು
ನೆಲದಿಂದ ಬಾನಿನಂಗಳಕೆ.

೭೬

ಬೇಗನೆ ಮಾಡುವ ಕಾರ್ಯಗಳೆಲ್ಲವು
ದೆವ್ವದ ಬಲದೊಳಾದಪವು
ಬಹು ಸಾವಕಾಶವು ದೈವಸಹಾಯಂವು
ಪರಿಕಿಪುದದು ಸಲಸಲವು.

೭೭

ಅತ್ತಿತ್ತ ಸುಮ್ಮನೆ ತಿರುಗುವ ನಾಯಿಗೆ
ಸಿಕ್ಕೀತಂ ಮಾಂಸದ ತುಂಡಂ
ಸುತ್ತೇಳು ಬೀದಿಯು ಸುತ್ತುವ ಹೆಣ್ಣಿಗೆ
ದಕ್ಕೀತು ಪೋಕಿಯು ಗಂಡು.

೭೮

ಇರುವ ಐಶ್ವರ್ಯವನನುಭವಿಸುವರಾರು
ಶ್ರೀಮಂತರಿಳೆಯೊಳಗವರು
ಐಶ್ವರ್ಯವಿದ್ದರು ಬಳಸದ ಜಿಪುಣರು
ಪಟ್ಟದರಿದ್ರರು ಅವರು.

೭೯

ಅಲ್ಪರದೆಷ್ಟೆಷ್ಟು ಕೊಟ್ಟರು ತೀರೀತೆ
ದೊಡ್ಡವರೆನ್ನುವರರಕೆ
ಎಕರೆಯು ಗದ್ದೆಗೆ ಗೊಬ್ಬರವಾದೀತೆ
ಗುಬ್ಬಿಯು ಸಾವಿರ ಹಿಚಿಕೆ.

೮೦

ದಾರಿಯೊಳೆತ್ತಿನ ಗಾಡಿಯು ಕಂಡರೆ
ಗದರಿಸುವನು ಟಾಂಗದವನು
ಆ ಟಾಂಗದವನನು ತನಗೆದುರಾದರೆ
ಬೆದರಿಸುವನು ಬಸ್ಸಿನವನು.

೮೧

ಹರಿಯುವ ನದಿಯನು ಕಟ್ಟಿ ಅಣೆಕಟ್ಟನು
ಸಲೆ ಹಿಡಿದಿಡುವನು ನರನು
ಉರುಳುವ ದಿನಗಳನಾವನು ಧೀರನು
ನಿಲ್ಲಿಸಬಲ್ಲವನಿಹನು.

೮೨

ಮುಳ್ಳಾದರುಳಿವುವು ಮತ್ತಷ್ಟು ಬಲಿವುವು
ಹೂವುಗಳುದುರಿ ಬಾಡುವುವು
ಕೇಡಿಗರೈಶ್ವರ್ಯದಿಂದುಬ್ಬಿ ಮೆರೆವರು
ನಮೆವರಸಭ್ಯರಾದವರು.

೮೩

ಕುಳಿತುಕೊಳ್ಳುವುದಕೆ ಅವಕಾಶವಿರುವಾಗ
ಸುಮ್ಮನೆ ನಿಂತಿರಬೇಡ
ಮಲಗಿಕೊಳ್ಳುವುದಕೆ ಅವಕಾಶವಿರುವಾಗ
ಸುಮ್ಮನೆ ಕುಳಿತಿರಬೇಡ.

೮೪

ಸ್ಪಂಜಿನ ತೆರದೊಳು ದೊಡ್ಡವರಿರುವರು
ಹೀರುವರೆಲ್ಲರ ಬೆರತು
ತಾವಾಗಿ ತವೆ ಹ್ಮಳಗಿರುವುದನೀಯರು
ಹಿಡಿದೊತ್ತಿ ಹಿಂಡಿದ ಹೊರತು.

೮೫

ಪ್ರಾಣವನಪಹರಿಸುವೆಯಹಾಗಿ ಚಂದ್ರನೆ
ನೀನು ಹಾಲಾಹಲ ನಿಭನು
ಮುಗ್ಧನದಾವನು ನಿನ್ನನು ಸುಮ್ಮನೆ
ಅಮೃತಾಂಶುವೆಂದನು ತಾನು.

೮೬

ನೀ ಕೋಪಗೊಂಡರು ತಾವರೆ ಹೂವಂತೆ
ಕೆಂಪೆಗೆ ಹೊಳೆವುದು ಮೊಗವು
ಉತ್ತಮರಾದವರೇನಾದರೇನಂತೆ
ಕುಂದದು ಅವರೊಳು ಚೆಲುವು.

೮೭

ಮಲಯದ ಅನಿಲನು ತಾನತುಹನನಲನು
ಮಣಿಭವನವು ತಮನಿಭವು
ಕನ್ನಡಿಸುವ ನವಕವಿಯುವನಾವನು
ವಿರಹಿಣಿಯರ ಬವಣೆಯನು.

೮೮

ಕೆಡುಗಾಲ ಬಂದಾಗ ಅಳುವುದಿದೇತಕೆ
ಇಹುದು ಒಳ್ಳೆಯಕಾಲ ಮುಂದೆ
ಮಳೆಗಾಲದೊಳು ನೀರು ಕದಡಿತೆಂದಳಲೇಕೆ
ತಿಳಿಗೊಳುವುದು ನೀರು ಮುಂದೆ.

೮೯

ಮೂರ್ಖನ ಜತೆಯೊಳು ಹೋಗುವುದಾದರೆ
ಮೂರ್ಖನೆ ಆಗುವೆ ಕೊನೆಗೆ
ಕಾಕರಾಜನೆ ಮಾರ್ಗದರ್ಶಕನಾದರೆ
ಹೋಗುವೆ ಮಸಣದ ಮನೆಗೆ.

೯೦

ಕುದುರೆಯು ಜೂಜಿಗೆ ಗೂಳಿಯು ತರಲೇಕೆ
ಕಪಿಯೇಕೆ ಟಗರ ಕಾಳಗಕೆ
ನಾಯಿಯು ತರಲೇಕೆ ಕೋಳಿಯು ಅಂಕಕೆ
ಮೇಕೆ ತಾನೇಕೆ ಕಂಬಳಕೆ.

೯೧

ಹಲವು ಬಳೆಗಳ ಕೈಯೆ ಘಲಘಲಿರೆನುವುದು
ಒಂಟಿಬಳೆದೊಟ್ಟ ಕೈ ಮೌನಿ
ಹಲವು ಗೆಳೆಯರ ಜೊತೆಯೆ ಸೊಗವೆಮಗ ಎಪ್ಪುದ
ಒಂಟಿಗನಾದರೆ ಹಾನಿ.

೯೨

ತನ್ನ ಕಾಲಳತೆಗೆ ಮೀರಿದೆಕ್ಕಡವನು
ಬಯಸುವುದು ಚಿತವೆ ತನಗೆ
ಬಯಸುವುದಾಗದು ಧನಿಕರ ಹೆಣ್ಣನು
ಬಡತನವಡರಿದಾತನಿಗೆ.

೯೩

ನೊಣವನೆ ಬೇಯಿಸಿ ಬಡಿಸುವುದಾದರು
ಯಜಮಾನರರಿಯುದ ಹಾಗೆ
ರೆಕ್ಕೆಯನೊಂದನು ಅಡುಗೆಯ ಭಟ್ಟರು
ತಮಗಾಗಿ ತೆಗೆದಿರಿಸುವರು.

೯೪

ಒಬ್ಬರ ಕೊರತೆಯನೊಬ್ಬರು ತುಂಬಿದ
ರಿಬ್ಬರಿಗೂ ಸುಖವುಂಟು
ಕುರುಡನ ಹೆಗಲನು ಕುಂಟನು ಹತ್ತಿದ-
ರಿಬ್ಬರಿಗೂ ಜಯ ಗಂಟು.

೯೫

ಗಂಡಸು ಕೆಟ್ಟರೆ ದೆವ್ವದಂತಾದಾನು
ಆವೇಶವಿಳಿಯುವ ತನಕ
ಹೆಂಗಸು ಕೆಟ್ಟರೆ ಹೇಳುವುದೇನನು
ಮನೆಗೆ ಮಂದಿಗೆ ನಿತ್ಯ ನರಕ.

೯೬

ಮೌನದಾಭರಣವು ಜಗದೊಳಮೂಲ್ಯವು
ಪೆಣ್ಗಳಿಗಿದು ಕಡು ಚೆಲುವು
ಆದರೂ ಅವರಿದನಿಡುವುದಪೂರ್ವವು
ಚೋದ್ಯವು ಸತಿಯರ ನಿಲವು.

೯೭

ಗಟ್ಟಿಯಾಗಳುವಳು ಗುಟ್ಟಾಗಿ ನಗುವಳು
ಸಿಟ್ಟಾಗಿ ಬೈಯುವಳೀಕೆ
ಹುಚ್ಚಲ್ಲ ಬೆಪ್ಪಲ್ಲ ಶಿವಲೀಲೆಯೆನುವೊಲು
ತೋರುವಳೆಚ್ಚರೆಚ್ಚರಿಕೆ.

೯೮

ಯಾವ ನೋವಾದರು ಬಂದರೆ ಸಹಿಸುವೆ-
ನೆದೆನೋವು ಬರುವುದು ಬೇಡ
ಯಾರೊಡನಾದರು ಬಾಳುವೆ ಮಾಡುವೆ-
ನಳಿವೆಣ್ಣಿನೊಡನಾಟ ಬೇಡ.

೯೯

ಕಲ್ಲನು ಹೊಡೆದರೂ ಬಡಿಗೆಯನೆಸೆದರೂ
ಮರನು ಹಣ್ಣನು ಕೊಡುವಂತೆ
ತನುಮನಗಳನು ಹಿಂಸಿಸಿದರು ಸಭ್ಯರು
ಲೇಸನೆ ಬಯಸುವರಲ್ತೆ.

೧೦೦

ಚೈತ್ರನು ಮೊಲ್ಲೆಯ ತರುವನಾದರೂ ತಾನು
ನನೆಯನೆ ಮೊದಲು ತೋರುವನು
ಸಿದ್ಧಿ ನಾಳೆಯ ಮಾತು ಎಂದು ಸಾಧನೆಯನು
ತೋರ್ಪನು ಇಂದೇ ಸಾಧಕನು.

ಹನ್ನೊಂದನೆಯ ನೂರು

೧

ನೂರಾರು ಮಹನೀಯರೊರೆದರು ನೀತಿಯ
ಸರಸ ಸುಭಾಷಿತಗಳನು
ಆ ತತ್ತ್ವವೇತ್ತರ ಕಾವ್ಯವಿಭೂತಿಯ
ನೆನೆದು ವಂದಿಸುವೆನು ನಾನು.

೨

ಗುಣ ಮಾತನಾಡಿತು ಹಣ ಬಾಯಿಬಡಿಯಿತು
ಸೋತು ಹಿಮ್ಮೆಟ್ಟಿತು ಗುಣವು
ನೀತಿ ಮುಂದಾಯಿತು ಜಾತಿ ಬೆನ್ನಿರಿಯಿತು
ನೀತಿಗೆ ಬಂದಿತು ಸಾವು.

೩

ಬಯಸುವುದಾದರೆ ಸುಖನಿದ್ರೆಯನು ನೀನು
ನನ್ನ ಮಾತನು ಕೇಳಿಹೋಗು
ಮನದೆಲ್ಲ ಮುಜಗರಗಳ ದೊಡ್ಡ ಗಂಟನು
ಹೊಸಿಲಾಚೆಗೆತ್ತಿಟ್ಟು ಮಲಗು.

೪

ಆರಿಸಬೇಡವೊ ನಾನು ಹೊತ್ತಿಸಿತಂದ
ಹಣತೆಯ ಕುಡಿಯನು ನೀನು
ನನ್ನಂತೆ ನೀನೂವೆ ಕತ್ತಲೊಳಿರುವಂದ-
ವಾದೀತು ನಂದಿಸಲಿದನು.

೫

ಮದುವೆಯ ಮನೆಗೆ ದಯಮಾಡಿಸಬೇಕೆಂದು
ಕತ್ತೆಗೆ ಕೊಟ್ಟರಕ್ಷತೆಯ
ನೀರನು ಹೊರುವವರಿಲ್ಲವೆಂದೆನುವುದು
ವಿಚಿತ್ರವು ತಿಳಿಯಯ್ಯ ಗೆಳೆಯ.

೬

ಮಹಡಿಯ ಮೆಟ್ಟಲುಗಳನು ಶುಚಿಗೈವಂದು
ಮೇಲಿನಿಂದುಡುಗುವರತ್ತೆ
ಮೊದಲು ಮೇಲಧಿಕಾರಿ ಸಲೆ ತಿದ್ದಿಕೊಳುವುದು
ತನ್ನ ಚಾರಿತ್ರವನಂತೆ.

೭

ಮದುವೆಯ ಯೋಚನೆ ಮನದೊಳು ಬಂದಾಗ
ಪುರುಷರು ಚೈತ್ರರಾಗುವರು
ಮದುವೆಯೆ ಆದಾಗ ಅವರೆಯೆ ಬಹುಬೇಗ
ಮುದಿಯಾಗಿ ಹೇಮಂತರಹರು.

೮

ಎಂದಾದರೂ ಮಾಡು ಪುತ್ರನ ಮದುವೆಯ
ಅದಕಾಗಿ ಚಿಂತಿಸಬೇಡ
ಬೇಗನೆ ಮಾಳ್ಪುದ ಪುತ್ರಿಯ ಮದುವೆಯ
ಮುಂದೊಡಲಾಗದು ನೋಡ.

೯

ಮದುವೆಯೆ ಆಗದಿರಾಗುವುದಾದರೆ
ನೀನೆಯೆ ಯಜಮಾನನಾಗು
ಬೇಗನೆ ಮದುವೆಯಾಗಿಲ್ಲದೆ ಹೋದರೆ
ಬೇಗನೆ ಸಂನ್ಯಾಸಿಯಾಗು.

೧೦

ಸತ್ತವನನು ಹೊತ್ತು ಸಾಗಿಪುದಾದರೆ
ಹೆಚ್ಚೇಕೆ ನಾಲ್ವರು ಸಾಕು
ಬದುಕಿರುವವನನು ಕಳುಹುವುದಾದರೆ
ಊರಿನ ಬಹುಮಂದಿ ಬೇಕು.

೧೧

ದುಷ್ಟರ ಜತೆಯೊಳು ಬೆರೆಯುವುದಾದರೆ
ಶಿಷ್ಟರು ಸಹ ನೋವುದುಂಟು
ಒಣಗಿದ ಸೌದೆಯು ಜೊತೆಯೊಳಗಿದ್ದರೆ
ಹಸಿ ಸೌದೆ ಸಹ ಸುಡಲುಂಟು.

೧೨

ಹಿಂದಿನ ಕಾಲದೊಳಡವಿಯೊಳವಿತಿರು-
ತಿದ್ದರು ಕಳ್ಳರು ಖಳರು
ಇಂದು ಕಛೇರಿಯೊಳೆದುರಿರುವರು
ಅಂತಹ ನೂರಾರು ಜನರು.

೧೩

ನಗುವ ಮದುವಣಗಿತ್ತಿ ಅಳುವ ಹೆಂಡತಿಯಾಗಿ
ಸಂಸಾರವನು ಶೋಷಿಸುವಳು
ಅಳುವ ಮದುವಣಗಿತ್ತಿ ನಗುವ ಹೆಂಡತಿಯಾಗಿ
ಸಂಸಾರವನು ಪೋಷಿಸುವಳು.

೧೪

ಎತ್ತೊಂದು ಲಾಳವ ಕಟ್ಟಿಸಿಕೊಳುವಾಗ
ಕಪ್ಪೆ ಕಾಲೆತ್ತಿದ ಹಾಗೆ
ಘನತರ ಕಾರ್ಯಕೆ ಘನರಣಿಗೊಳುವಾಗ
ಅಲ್ಪರು ಬಂದರೆ ಹೇಗೆ.

೧೫

ಮಿತ್ರರ ಸ್ನೇಹವು ಬಾಂಧವ್ಯವಾದರೆ
ಮತ್ತಷ್ಟು ಹಿತವನು ತರದೆ
ಮಡಿಸಿ ಕಂಬಳಿಯನು ಹೊದಿಯುವುದಾದರೆ
ಮತ್ತಷ್ಟು ಬೆಚ್ಚಗೆನ್ನಿಸದೆ.

೧೬

ದೇವರು ಕರುಣಿಸಿ ಮಳೆಯನು ಕರೆದರೆ
ಧನಿಕನ ಸಂಪಿಗೆ ಗಿಡಕೆ
ಹೇಗೆ ನೀರಿಳಿವುದು ಹಾಗೆ ನೀರಿಳಿಯಂದೆ
ಬಡವನ ನುಗ್ಗೆಯ ಬುಡಕೆ.

೧೭

ಗುಟ್ಟಿನ ಸಂಗತಿಗೆದೆಯ ಕರಂಡಿಕೆ
ಮುಚ್ಚಿದ ತುಟಿ ಬೀಗವದಕೆ
ಬೈತಿಟ್ಟ ಗುಟ್ಟನು ದೂರದಗೆವಡೆಯೊಳು
ನಾಲಗೆ ಬೀಗದ ಎಸೆಳು

೧೮

ಬಹುಬೇಗ ನಡೆವಳು ಬಹುದೂರ ಹೋಹಳು
ನಿನ್ನಪಕೀರ್ತಿಯ ಹೆಣ್ಣು
ಬಹು ಮಂದಗಾಮಿನಿ ಬಹುದೂರ ಸಾಗಳು
ನಿನ್ನ ಸತ್ಕೀರ್ತಿಯ ಹೆಣ್ಣು.

೧೯

ಚರಿತೆಯೊಳಜ್ಞರು ಓದುವರರಿವರು
ಹಿಂದಿನ ಸಂತಿಗಳನು
ಪ್ರಾಜ್ಞರಾದವರಿತಿಹಾಸದೊಳರಿವರು
ಮುಂದಿನ ಸಂಗತಿಗಳನು.

೨೦

ಕೋಳಿಯ ಕಣ್ಣಿಗೆ ಅಪರಾಧಿಯಾಗಿಯೆ
ತೋರುವುದೇಗಳು ಹುಳವು.
ವೈರಿಯಾದವನಿಗೆ ಸಾಧುವು ಹಾಗೆಯೆ
ತೋರುವನೆನುವುದು ದಿಟವು.

೨೧

ಹತ್ತಾರುಸಲ ನೀನು ಬಟ್ಟೆಯನಳೆದರು
ಕತ್ತರಿಸುವುದೊಂದೆ ಸಲವೆ
ಕತ್ತರಿಸುವ ಮುನ್ನ ಮತ್ತೊಮ್ಮೆ ಅಳೆದರು
ತಪ್ಪೆನಿಸದು ನೋಡು ಮಗುವೆ.

೨೨

ಸಿರಿಬಂದ ಕಾಲದೊಳಾಗದು ಉಬ್ಬುವು-
ದೈತಂದುದಳಿವುದು ಕೊನೆಗೆ
ಭರಬಂದ ಕಾಲಕೆ ಬಂದಿಹುದೆಲ್ಲವು
ಹೋಗುವುದಿಳಿತದ ಜೊತೆಗೆ.

೨೩

ಕಷ್ಟಗಳಿಲ್ಲದ ಸುಖವೆಂಬುದೊಂದುಂಟೆ
ನಷ್ಟವಿಲ್ಲದ ಲಾಭವುಂಟೆ
ಇಳುಕಲು ಇಲ್ಲದ ಗುಡ್ಡವೆನ್ನುವುದುಂಟೆ
ಮಳೆಯಿಲ್ಲದಿರೆ ಕೊಚ್ಚೆಯುಂಟೆ.

೨೪

ಸೀಲು ಮಾಡಿದ ಹಾಗೆ ಕಣ್ಣು ಮುಚ್ಚಿರುವಳು
ತುಟಿಗಳು ಹೊಲಿದವೊಲಿಹವು
ನಿದ್ರಿಸುವಾಗಲು ಮೆರೆವುದು ಮೊಗದೊಳು
ಮೊದಲರಳಿದ ನಗೆಹೂವು.

೨೫

ಹುಬ್ಬನು ಹುರಿಮಾಡಿ ಹೊಸೆದ ನೋಟದ ಹಗ್ಗ
ಬಿಗಿದೆಳೆದಿಹುದಡಿಗಡಿಗೆ
ಅನುನಯದುರುಮಂತ್ರವನು ಜಪಿಸೆಲೆ ಎಗ್ಗ
ವರವಡೆದಪೆ ಬಿಡುಗಡೆಗೆ.

೨೬

ಅನುವಾದವೆಂದರೆ ಮೌಲ್ಯವು ಕಡಿಮೆಯೆ
ಓದಿದರಾಗದೆ ಅರಿವು
ಕಡತಂದ ಕೊಡಲಿಯು ಹರಿತವು ಕಡಿಮೆಯೆ
ಕಡಿದರೆ ಬೀಳದೆ ಮರವು.

೨೭

ಹಿಟ್ಟಿನ ಹಾದಿಯು ಹುಡುಕಿದ ಮೇಲೆಯೆ
ಹೆಣ್ಣಿನ ಬರವನು ನೋಡು
ಜುಟ್ಟನು ಬಾಚಿ ಗಂಟಿಕ್ಕಿದ ಮೇಲೆಯೆ
ಹೂವಿನ ಕುಚ್ಚನು ಬೇಡು.

೨೮

ತಿಳಿವಿನ ಬೀಗದ ಎಸಳು ಸಂದೇಹವು
ಸಂದೇಹಪಡದಿರಬೇಡ
ಸಂದೇಹವೆಂದಾಗ ಗೀತೋಪದೇಶವು
ಪಾರ್ಥನಿಗಾದುದು ನೋಡ.

೨೯

ಸೀರೆಯ ಬೆಲೆಯನು ಜನರು ನಿರ್ಣಯಿಪರು
ಸೆರಗಿನ ಝರಿಯನು ನೋಡಿ
ಹುಡುಗಿಯ ಗುಣವನು ಜನರು ನಿರ್ಣಯಿಪರು
ತಾಯಿಯ ನಡೆಯನು ನೋಡಿ.

೩೦

ಬೀದಿಯ ಕಸವನು ತುಂಬಿದ ತೊಟ್ಟಿಯು
ಕೆದಕುವ ಇಲಿಯಾಗಬೇಡ
ಹೆರರುಂಡು ಹೊರಗೆಸೆದೆಂಜಲು ಹಾಳೆಯು
ನೆಕ್ಕುವ ಶುನಿಯಾಗಬೇಡ.

೩೧

ಸಂಸಾರದೊಳು ನೋಡು ಸಾಂಗತ್ಯವಿರಬೇಕು
ಹಾಲು ನೀರಿಗೆ ಬೆರೆತಂತೆ
ಮನಮನ ಕೂಡದ ಜೋಡಿಗೇನೆನಬೇಕು
ಎಳ್ಳು ಅಕ್ಕಿಗೆ ಬೆರೆತಂತೆ.

೩೨

ದುರ್ಜನ ಸಂಗದಿಂದಡಿಗಡಿಗಪಮಾನ-
ವಪ್ಪುದು ತಪ್ಪದು ತಾನು
ಲೋಹ ಸಂಸರ್ಗದೊಳಗ್ನಿ ದೇವನು ಘನ
ಮುದ್ಗರಹತಿವಡೆದಪನು.

೩೩

ಮನದೊಳಕೋಣೆಯು ಕಟ್ಟಿದಿಲ್ಲಣಗಳ
ತೊಡೆದು ಹಾಕುವುದಾಗಲಿಲ್ಲ
ಬಗೆಯೊಳಹೊಲದೊಳು ಹುಟ್ಟಿದ ಕಳೆಗಳ
ಕಿತ್ತು ಕಳೆಯುವುದಾಗಲಿಲ್ಲ.

೩೪

ಸಹ್ಯನಗೇಂದ್ರನು ಮಳೆನೀರು ಮಿಂದನು
ತಳೆದನು ಸುರಚಾಪಹಾರ
ಹಚ್ಚನೆ ಪಸುರೆಲೆಯುಂಗಿಯ ತೊಟ್ಟನು
ನೆಟ್ಟನೆ ನಿಂತನು ಧೀರ.

೩೫

ಒಂದ್ರೊಂದು ಕನಸಿನ ಹಿಂದೆ ಮತ್ತಿನ್ನೊಂದು
ಕನಸನುಸರಿಸುತ ಬಂದು
ನಂದಿದಾಸೆಯು ದೀಪ ಹೊತ್ತಿಸಿ ಹೋಹುದು
ಸಹನೆಯು ತೈಲವನೆರೆದು.

೩೬

ಕೊಳುಗುಳದೊಳು ಶರ ಮಿಂಚು ಅಂಬರದೊಳು
ಮೂಡಿ ಮರೆಯಾಗುವ ತೆರದೆ
ಬಂದು ಈ ಚಣದೊಳು ಸಂದು ಮರುಚಣದೊಳು
ಪ್ರತಿಭೆಯೆ ನೀ ಕಾಡಬಹುದೆ.

೩೭

ಬಾಡಿದ ಮೊಗದೊಳು ಬೇಡದ ನಗೆಯನು
ಮೂಡಿಸಲೊಪ್ಪದು ನೋಡ
ನೋಡಿದ ಜನರೆಷ್ಟು ಆಡಿಕೊಳ್ಳುವರೆನು—
ತವರ ಮೆಚ್ಚಿಪ ಯತ್ನ ಬೇಡ.

೩೮

ಚತುರ ವೈದ್ಯನು ಬಂದು ನಿನ್ನ ಕಾಹಿಲೆಯನು
ಗುಣಪಡಿಸದೆ ಹೋದ ವೇಳೆ
ಕರೆಯಿಸು ಚಾತುರ್ಯ ಕಡಿಮೆಯಾದವನನು
ಗುಣಪಡಿಸುವನಾತ ನಾಳೆ.

೩೯

ನಾವಿಕನಿಗೆ ದೇವರೀವನು ನೆರವನು –
ಆದರೆ ನಿಯಮವೊಂದಿಹುದು
ನಿತ್ಯವು ತೆಗೆಯುತಲಿರಬೇಕು ಹುಟ್ಟನು
ತಾನೆಯೆ ತೊರೆಯೊಳಂಬಿಗನು.

೪೦

ದೇವರು ಒಲಿದರೆ ಜೇಡನ ಬಲೆ ಸಹ
ಪೊರೆವುದು ಕೋಟೆಯ ಹಾಗೆ
ಮುನಿದರೆ ಹರಿವುದು ಕೋಟೆ ಕೊತ್ತಳ ಸಹ
ಜೇಡರ ನೂಲಿನ ಹಾಗೆ.

೪೧

ಎಳೆವುದು ಶಿವನಿಚ್ಛೆಯಾದರೆ ಎಳೆಯೆಂದು
ಕೊಡುವನು ಹಗ್ಗವ ಕೈಗೆ
ಏರುವುದವನಿಚ್ಛೆಯಾದರೆ ಏರೆಂದು
ಕುದುರೆಯನೀವನು ನಿನಗೆ.

೪೨

ಬಂದುಹೋಗುವುದಕೆ ಒಂದೆಬಾಗಿಲು ನೋಡು
ಜಗವೊಂದು ಜೇನಿನ ಗೂಡು
ಸಾವಿರ ಕೋಣೆಗಳಿಲ್ಲಿಹವಾದರೆ
ನಾವಿದರೊಳು ಬೇರೆ ಬೇರೆ.

೪೩

ಸುಖಶಾಂತಿಸಂತೋಷಗಳಿಗಾಗಿ ಬಿಯಮಾಡು
ನಾಲ್ಕರೊಳೊಂದು ಭಾಗವನು
ವ್ಯವಹಾರದೊಳು ಯೋಜಿಸೆರಡನು ಕೂಡಿಡು
ಕುರ್ತಿಗೆ ನಾಲ್ಕನೆಯದನು.

೪೪

ಸೂರ್ಯನ ನೇರಕೆ ಹೋಗುವಿಯಾದರೆ
ತಪ್ಪೀತು ಒಳಹಾದಿ ನಿನಗೆ
ಅಪರಿವರನು ಕೇಳಿ ಹೋಗುವಿಯಾದರೆ
ಸೇರೀಯೆ ಹಳ್ಳಿಯ ಕೊನೆಗೆ.

೪೫

ತೊಟ್ಟಿಲ್ಲನೆಲ್ಲಿ ಕಟ್ಟಿದ್ದರೆನ್ನುವುದನು
ಬಲ್ಲವರಿಹರು ಹೇಳುವರು
ಚಟ್ಟವನೆಲ್ಲಣೆಗೈವರೆನ್ನುವುದನು
ಹೇಳುವ ಕೋವಿದರಾರು.

೪೭

ಅಷ್ಟು ಬೇಕಿಷ್ಟು ಬೇಕೆಂದು ನಾ ಕೇಳೆನು
ಕೊಟ್ಟಷ್ಟರೊಳು ತೃಪ್ತ ನಾನು
ಸುಖಿಸುವೆನದನೂಡು ನೀ ಕೊಟ್ಟುದನು ಕೊಂಡು
ಸಾಕೊಂದು ರೊಟ್ಟಿಯ ತುಂಡು.

೪೭

ಅವರಿವರೂರೆಯ ಬಲದೊಳು ನಿಲಬೇಡ
ನೀನೆಯೆ ನೆಟ್ಟನೆ ನಿಲ್ಲು
ನೀನೆಯೆ ಕುದುರೆಯನಣಿಮಾಡು ತಡಬೇಡ
ನಡೆ ಹತ್ತು ಜಗವನೆ ಗೆಲ್ಲು.

೪೮

ಬಿಟ್ಟುಬಾ ಗೂಡನು ನೋಡು ಬಾಂದಳವನು
ಹಾರಾಡು ಮರದಿಂದ ಮರಕೆ
ಬೇರೊಂದು ಹಕ್ಕಿಯ ಜತೆಗೂಡಿ ಹಾಡನು
ಹಾಡುತ ಮುದವೂಡು ಮನಕೆ.

೪೯

ಉತ್ತಮವಾದವು ಹರೆಯದ ದಿನಗಳು
ಹೊಸ ರಕ್ತ ಹೊಸ ಅನುರಕ್ತಿ
ಮುಂದಿನ ದಿನಗಳು ಮಧ್ಯಮಾಧಮಗಳು
ಉಸಿರಾಡಲೆಮಗಿಲ್ಲ ಶಕ್ತಿ.

೫೦

ಇನಿದಾದ ಮಾವಿನ ಹೊಸರಸವುಂಡರು
ಕೋಗಿಲೆಗಿಲ್ಲ ಬಡಿವಾರ
ಹೊಂಡದ ಕೊಳಚೆಯ ನೀರನು ಕುಡಿದರು
ಕಪ್ಪೆಗದೆಷ್ಟು ಠೇಂಕಾರ.

೫೧

ಹೆರರನು ಚುಚ್ಚುವುದಲ್ಲದೆ ಮುಳ್ಳೊಂದು
ತನ್ನನೆ ತಾ ಚುಚ್ಚಿಕೊಳದು
ಹೆರರನು ನೋಯಿಪ್ಪುದ್ಯೋಗದೊಳಿರುವರು
ಮುಳ್ಳಿನಂತಹ ಕೆಲಜನರು.

೫೨

ಆತುರಾತುರದೊಳು ಮದುವೆನಿಂದೆನು ಅಂದು
ಭ್ರಾಮಕ ಸುಖದೊಳು ಸಂದು
ತಪಿಸುತಲಿರುವೆನು ಸಾವಧಾನದೊಳಿಂದು
ಆಗಬಾರದುದಾಯಿತೆಂದು.

೫೩

ಎಷ್ಟು ನೆಮ್ಮದಿಯಿಂದ ಮಲಗಿದೆ ಹೆಣರಾಯ
ಮುಖದೊಳಗೇನಂಥ ಕಾಂತಿ
ಭವದ ಸಂಕಟದಿಂದ ನಿನ್ನನು ಯಮರಾಯ
ಬಿಡಿಸಿ ನಿನಗಿತ್ತನು ಶಾಂತಿ.

೫೪

ನೆಟ್ಟನೆ ದಾರಿಯೊಳೊಬ್ಬನೆ ನಡೆದರೆ
ಸೇರುವೆ ಶಾಂತಿಯ ಮನೆಯ
ಅಡ್ಡ ಹಾದಿಯ ಹಿಡಿದೆಲ್ಲರ ಬೆರೆದರೆ
ಪಡೆಯುವೆ ಬರಿಯ ಗಲಿಬಿಲಿಯ.

೫೫

ತಗ್ಗಿಪ ಸಲುವಾಗಿ ನೀರಿನ ಕುದಿಯನು
ತಣ್ಣೀರು ಸುರಿಯುವ ಬದಲು
ಒಲೆಯೊಳಗುರಿಯುವ ಸೌದೆಯೊಳೆರಡನು
ಬೇಗನೆ ಹಿರಿವುದೆ ಮೇಲು.

೫೬

ಬಿಲ್ಲನು ತೋರಿಸು ಹೆದೆಯನು ಏರಿಸು
ಹೆದರಿಸು ಬೆದರಿಸಾರ್ಭಟಿಸು
ಕಣೆಯನು ತೊಡಬೇಡ ತೊಡುವಂತೆ ನಟಿಯಿಸು
ಹಗೆಯನು ಹಾಗೆಯೆ ಕಳಿಸು.

೫೭

ಹೇಡಿಯ ಮನೆಯೊಳು ರೋದನದುದ್ಗಾರ-
ವೆಂದಾರೆ ಕೇಳೀತೆ ನಿಮಗೆ
ಗಾಯಗಳಿಲ್ಲದೆ ಮರಳುವನಾ ಧೀರ
ಹಾಯಾಗಿ ಬೇಗನೆ ಮನೆಗೆ.

೫೮

ದಂತವು ಭಾರವೆಂದಾದೀತೆ ಸಲಗಕೆ
ಭಾರವೆ ನವಿಲಿಗೆ ತೋಕೆ
ಗಾತ್ರಕೆ ತಕ್ಕಂತೆ ಜೀವಿಗಳೆಲ್ಲಕೆ
ಕೈಕಾಲು ಗರಿ ಕೊಂಬೆರಂಕೆ.

೫೯

ಬೆಳ್ಳನೆ ರೇಸಿಮೆಯುಡೆ ಬೆಳುದಿಂಗಳು
ಉಡುಗಳು ಹೊಳೆವ ಮುತ್ತುಗಳು
ದುಂಡನೆ ಚಂದ್ರನ ಬಿಂಬವೆ ವದನವು
ಸುಂದರಿ ಪೂರ್ಣಮಾನಭವು.

೬೦

ರೂಪವೆ ಸಲಿಲವು ನಾಭಿಯಾವರ್ತವು
ಮೀನು ನಯನವು ಜಡೆ ಹಾವು
ಈ ತರುಣೀತರಂಗಿಣಿಯೊಳು ಮೀಹವು
ನಮಗತಿ ವಿಹ್ವಲಾವಹವು.

೬೧

ಕೇಡಿಗನೊಬ್ಬನು ಲೇಸನೆಗೈದರು
ಮೆಚ್ಚಿ ಅಭಿವಂದಿಸಬೇಡ
ನಿನ್ನನು ಕಚ್ಚದೆ ಸುಮ್ಮನೆ ಹೋದರು
ಚೇಳಿನ ತಲೆ ತಟ್ಟಬೇಡ.

೬೨

ಬಿಂದುವಪಾತ್ರದ ನೀರು ಮುತ್ತಾಗಿ ಹೊಳೆಯದೆ
ಮರವಾಗಿ ಬೆಳೆಯದ ಬೀಜ
ಸಾಧನೆಗೈದರೆ ಸಹನೆಯು ನೀಗದೆ
ಬೆಳಗದೆ ನಿನ್ನಾತ್ಮತೇಜ.

೬೩

ಸಭೆಯೊಳು ಮೇಲೆದ್ದು ಕುಣಿವನು ಬಹುಭಾಷಿ
ಹಿಂದುಳಿವನು ಮಿತಭಾಷಿ
ನೊರೆಗುಳ್ಳೆಗಳು ಬಹವಬ್ಧಿಯ ತೆರೆಯೊಳು
ಇರುವುವು ಮುತ್ತು ಆಳದೊಳು.

೬೪

ಕೆನ್ನೆ ಕೆಂಪೇರಿತು ಕಣ್ಣು ಕೊಂಕಾಯಿತು
ನಗೆ ಕುಳಿತಿತು ತುಟಿ ಮೇಲೆ
ಹಾವ ಭಾವದ ಹೊಸಬೆಡಗು ಪಲ್ಲವಿಸಿತು
ನವಲೀಲೆ ಮೆರೆದಳು ಬಾಲೆ.

೬೫

ಒಮ್ಮೆ ಹೊಗೆಗಟ್ಟುವುದೊಮ್ಮೆ ಭುಗ್ಗೆನುವುದು
ಬರ್ನರು ಕೆಟ್ಟ ಲಾಟೀನು
ಒಮ್ಮೆ ಮಂಕಾದಪೆನೊಮ್ಮೆ ಥಳಥಳಿಪೆನು
ಆ ದೀಪದಂತೆವೊಲಾನು.

೬೬

ವಿಧಿಯೆದ್ದು ಒದೆವಾಗ ನಿನಗಿದೊ ಧಿಕ್ಕಾರ-
ವೆನ್ನುವೊಡೆಮಗೆದೆಯೆಂಟೆ
ಕಮ್ಮಾರನ ಮೇಲೆ ಕೈ ಮಾಡವಧಿಕಾರ
ಕಾಸಿದ ಕಬ್ಬಿಣಕುಂಟೆ.

೬೭

ಶ್ರೀಮಂತನಾತನು ಸಂನ್ಯಾಸಿಯೀತನಃ
ಎಂದೆಲ್ಲರುಗ್ಗಡಿಸಿರಲು
ಒಕ್ಕಾಲು ಮಾತ್ರವೆ ದಿಟವೆಂದು ತಿಳಿ ನೀನು
ಸುಳ್ಳಿನ ಕಂತೆ ಮುಕ್ಕಾಲು.

೬೮

ಕವಿಯೊಳಮರ್ಮವನರಿಯುವುದಾದರೆ
ಯತ್ನದಿನರ್ಥೈಸಬೇಕು
ತಿರುಳನು ತಿಂಬಾಸೆ ನಿನಗಿಹುದಾದರೆ
ಚಿಪ್ಪನು ಒಡೆಯಲೆಬೇಕು.

೬೯

ಯಾರೊ ಹಣ್ಣನು ತಿಂದು ಸಿಪ್ಪೆಯನೆಸೆವರು
ಮತ್ತಾರೊ ಜಾರಿ ಬೀಳುವರು
ಯಾರೊ ಸೌದೆಯ ತಂದು ಉರಿಹಾಕಿಕೊಡುವರು
ಮತ್ತಾರೊ ಕಾಸಿಕೊಳ್ಳುವರು.

೭೦

ಚಾರುಸುಭಾಷಿತ ಧನದ ಸಂಗ್ರಹವನು
ಶ್ರದ್ಧೆಯಿಂದೆಸಗದಿರ್ಪವನು
ವಾಙ್ಮಯ ಯಜ್ಞದೊಳಾವ ದಕ್ಷಿಣೆಯನು
ಕೊಟ್ಟು ತಣಿಪನು ಅರ್ಥಿಗಳನು

೭೧

ವಿಶಿಖದ ವ್ಯಾಲದ ಕಡೆಯೆರಡನು
ಕೂಡಿ ಖಲನಾದನು ಜಗಕೆ
ಪರರಸುದೆಗೆವುದೆ ಕುಲಧರ್ಮವಾಗಿರ-
ಲವನಿಗಿನ್ನುಪದೇಶವೇಕೆ.

೭೨

ಕೃಪಣನು ದಾತನು ತನ್ನೆಲ್ಲವನು ಬಿಟ್ಟು
ಸಾಯುವನಾತನು ಕೊನೆಗೆ
ದಾತನೆ ಕೃಪಣನು ತನ್ನೆಲ್ಲವನು ಕೊಟ್ಟು
ಸುಕೃತವನೊಯ್ವನು ಜೊತೆಗೆ.

೭೩

ಸ್ನೇಹವನೆರೆದರು ತಲೆಮೇಲೆ ಹೊತ್ತರು
ತಿದ್ದು ತಲಿದ್ದರು ತಾನು
ಮತ್ತೆ ಆ ಹಿಂದಿನ ಕೊಂಕನು ಬಿಡದಿರು-
ವಲಕದುತಿರ್ಪನು ಖಳನು.

೭೪

ಸದ್ವಂಶದೊಳು ಬಂದ ಬಿಲ್ಲಿಗೆ ಹೇಗಿದೆ
ಪರರೆದೆ ಸೀಳುವ ಗುಣವು
ಸದ್ವಂಶದೊಳು ಬಂದ ಖಳನಿಗೆ ಹಾಗಿದೆ
ಪರರೆದೆ ಸೀಳುವ ಗುಣವು.

೭೫

ಸಕ್ಕರೆ ಬೀಳುವ ನಿನ್ನ ಕೆನ್ನೆಯ ಗುಳಿ-
ಯೊಳು ಮುಳುಗಿಹುದೆನ್ನ ಕಸುವು
ಸಿಕ್ಕರೆ ಮತ್ತೊಮ್ಮೆ ನಿನ್ನ ನೋಡುವ ಆಳಿ-
ಯಾಸೆಯೊಳುಳಿದಿಹುದಸುವು.

೭೬

ಸುಜನರ ಚಿತ್ತವು ಸುಖದೊಳು ಮೃದುಲವು
ಕಷ್ಟದೊಳತುಳ ಕರ್ಕಶವು
ಮಾವಿನ ಪತ್ರವು ಮಧುವೊಳು ಮೃದುಲವು
ಗ್ರೀಷ್ಮದ್ಯೊಳತುಳ ಕರ್ಕಶವು.

೭೭

ಶ್ಲೋಕವನೊರೆದರೆ ಸಜ್ಜನರೆದುರೊಳು
ಶ್ಲೋಕತ್ವವೆಮಗೊದಗುವುದು
ಶ್ಲೋಕದ ಲತ್ವಕೆ ದುರ್ಜನರೆದುರೊಳು
ಲೋಪವೆ ಸಂಭವಿಸುವುದು.

೭೮

ಮಟಮಟ ಮಧ್ಯಾಹ್ನದೊಳು ರಾಜನೈತಂದು
ಇದು ಅರ್ಧರಾತ್ರಿಯೆಂದೆನಲು
ಅಹುದಹುದೆಷ್ಟೊಂದು ತಾರೆಗಳಿಹವೆಂದು
ತಲೆದೂಗಿ ನುಡಿವುದೆ ಮೇಲು.

೭೯

ಎಷ್ಟೊಂದು ಆಳದೊಳೆಲ್ಲಡಗಿದ್ದರು
ನ್ಯಾಯವು ಬರುವುದು ಮೇಲೆ
ತೈಲದಬಾವಿಯ ತಳದಿಂದಲಾದರು
ಮೇಲುಕ್ಕುವೆಣ್ಣೆಯವೋಲೆ.

೮೦

ಗೌರಿಶಂಕರವನೆ ಏರುವೆನೆಂದರೆ
ದಾರಿಯೊಂದಿಲ್ಲವೆ ನಿನಗೆ
ಏರಿಳಿದಿಳಿದೇರಿ ಅಭ್ಯಾಸವಾದರೆ
ಶಿಖರವೆ ಸಿಕ್ಕದೆ ಕೊನೆಗೆ.

೮೧

ಕುಂದಿಗಾಲೊಳೆಲ್ಲರು ನಿಂತಿರುವೆವು ನಾವು
ಅಲ್ಲಿಗೆ ಹೋಗುವೆವೆಂದು
ಕಿವಿಗಳ ನಿಮಿರಿಸಿಕೊಂಡೆ ನಾವಿರುವೆವು
ಕರೆಯೊಂದು ಬರುವುದೊ ಎಂದು.

೮೨

ಮುಳ್ಳಿಸ ಮರವಾದರೇನಂತೆ ಹತ್ತನೆ
ಸಲಗವ ಬೆನ್ನಟ್ಟಿಬರಲು
ಹುಲುಕಡ್ಡಿಯನೆ ಕಂಡು ಕೈಯನು ಚಾಚನೆ
ನೀರೊಳು ಮುಳುಗುತಲಿರಲು.

೮೩

ತಾವಾಗಿ ಮೆರೆವುವು ಸುಜನರ ಗುಣಗಳು
ಅದಕೆ ಜಾಹೀರಾತು ಬೇಕೆ
ಕಸ್ತೂರಿ ಕಮ್ಮಿತ್ತೆಂದಿಳೆಯೊಳು ಜನಗಳು
ಕೈಯೆತ್ತಿ ಹೊಗಳುವುದೇಕೆ.

೮೪

ಕೊಳದೊಳು ಹಾವುಗಳಾಳದೊಳಿದ್ದರು
ಹೇಗೆ ನಂಜಾಗದು ನೀರು
ಸುಜನರ ಬಳಿಯೊಳು ಖಳರೇನನೊರೆದರು
ಹಾಗೆ ಹಾಳಾಗರು ಅವರು.

೮೫

ಮೊಟ್ಟೆಯ ಕದ್ದವನೊಟ್ಟೆಯ ಕದಿವನು
ಬೆಳೆದಮೇಲನುಮಾನವೇಕೆ
ತಿದ್ದುವುದೆಲ್ಲರುಮೆಳವೆಯೊಳವನನು
ಬಿಟ್ಟರೆ ಕೆಡುವನು ಜೋಕೆ.

೮೬

ಭೂಮಂಡಲವೇ ಬಹು ಸಣ್ಣದೆಂದೆನಿಪುದು
ಬಾಳುವೊಡೆಗಳಿಬ್ಬರಿಗೆ
ಒಂದಂಕಣದ ಮನೆ ದೊಡ್ಡದೆಂದೆನಿಪುದು
ಬಾಳುವ ಮಿತ್ರರಿಬ್ಬಗೆ.

೮೭

ತಲೆಯವೊಲಿದ್ದರೆ ಗಂಡಸು ಮನೆಯೊಳು .
ಸತಿಯು ಕಿರೀಟದವೋಲು
ಮಕ್ಕಳು ಮರಿಗಳು ಮಕುಟದ ಮಣಿಗಳು
ಕಾವಲು ಆಳು ಕಾಳುಗಳು.

೮೮

ಸೀಟನೆ ಪಡೆಯದ ವಿದ್ಯಾರ್ಥಿಗೇತಕೆ
ಕಟ್ಟುವ ಶುಲ್ಕದ ಚಿಂತೆ
ಚೀಲವೆ ಬಳಿಯಿರದಾತನಿಗೇತಕೆ
ಹೊಲಿಯುವ ದಾರದ ಕಂತೆ.

೮೯

ಕಾಲರಾಯನ ಬೆರಳುಂಗುರದೊಳು ಗಾದೆ
ಮಿರುಗುವ ಹೊಸ ಹೊಚ್ಚ ಹರಳು
ಇಂತಹ ಗಾದೆಯ ಮುಕ್ತಕಗಳನೋದ
ಜನವೇಕೆ ಜಾತ್ರೆಯ ಮರುಳು.

೯೦

ಏನೊಂದು ಸಡಗರದಿಂದಲೈತರುವಳು
ಹೊಸ ಸುಗ್ಗಿ ವಧುವಿನ ಹಾಗೆ
ಎಷ್ಟೊಂದು ವಿಧದಿಂದಲವಳ ಭಂಗಿಸುವಳು
ಮಳೆಗಾಲ ಅತ್ತೆಯ ಹಾಗೆ.

೯೧

ಖಾಲಿಯ ಹೊಟ್ಟೆಯೊಳುರಿಯೆದ್ದ ವೇಳೆಗೆ
ಹೊಗೆ ಮುತ್ತಿಕೊಳುವುದು ತಲೆಗೆ
ಬಾಯಿ ಬಿಟ್ಟರೆ ಆಗ ಕಾಸಿನೊಂದಾಸೆಗೆ
ಕೊಳೆ ಮುತ್ತಿಕೊಳುವುದು ಕಲೆಗೆ.

೯೨

ಸಾರಥಿ ಹೆಳವನು ಒಂದೆಯೆ ಚಕ್ರವು
ಹಯವೇಳು ಕಡಿವಾಣ ಹಾವು
ಪರ್ಥ್ಯವು ಸತ್ವದ ಮುಂದುಪಕರಣವು
ಎಂದೋಡುತಿದೆ ರವಿ ರಥವು.

೯೩

ನೆಲಕೆತ್ತಿ ಹೊಡೆದರು ಮೇಲಕೆ ಪುಟನೆಗೆ
ದೇಳುವ ಕಂದುಕದಂತೆ
ಕಷ್ಟಗಳೆಷ್ಟಿದ್ದರೇನು ಸಭ್ಯರು ಬಗೆ-
ಗೆಡದೇಳ್ಗೆವಡೆದಪರಲ್ತೆ.

೯೪

ಎಷ್ಟೆಷ್ಟು ಸಜ್ಜನರೊಡನಾಡಬಿಟ್ಟರು
ಖಳನಿಗೆ ಸದ್ಬುದ್ಧಿ ಬರದು
ಕಸ್ತೂರಿಯೊಡನಿಟ್ಟು ಕಟ್ಟಿ ತೆಗೆದಿಟ್ಟರು
ಲಶುನಕೆ ಸೌರಭ ಬರದು.

೯೫

ನಾನೆ ದಾರುಣನೆಂದಿದೇತಕೆ ಬೀಗುವೆ
ಸುಮ್ಮನೆ ಓ ಹಾಲಾಹಲವೆ
ಜಗದೊಳು ದುರ್ಜನ ವಚನಗಳಿಲ್ಲವೆ
ಅವಕಿಂತ ನೀನೆ ದಾರುಣವೆ.

೯೬

ದುಷ್ಟರಾದವರನ್ನು-ಎಷ್ಟು ಬೋಧಿಸಿದುರು
ತಿದ್ದುವುದಾಗದು ಕೇಳಿ
ನಾಯಿಯ ಬಾಲವು-ನಳಿಗೆಯೊಳಿಟ್ಟರು
ನೆಟ್ಟನಾಗುವುದುಂಟೆ ಹೇಳಿ.

೯೭

ತಿಳಿಯದೆ ಹೋದರು ತಿಳಿದವನಂತಿರು-
ವಾತನೆ ಮೂರ್ಖನು ಕೇಳು
ತಿಳಿದುಕೊಂಡಿದ್ದರು ತಿಳಿವಿಲ್ಲದಂತಿರು-
ವಾತನೆ ಜಾಣನು ಕೇಳು.

೯೮

ರುಚಿಯೊಳು ಮಧುರವು ಮಧುವಹುದದಕಿಂತ
ಮಧುರವು ತಾನಹುದಮೃತ
ಮಧುಸುಧೆಗಳಿಗಿಂತ ಕವಿಯ ಸುಭಾಷಿತ
ಮಧುರವೆನ್ನುವ ಮಾತು ನಿರುತ.

೯೯

ಅಪಕಾರಿಗುಪಕಾರವೆಸಗುವುದಾದರೆ
ಅದರೊಳು ಹಿರಿತನವುಂಟು
ಉಪಕಾರಿಗುಪಕಾರವೆಸಗುವುದಾದರೆ
ಅದರೊಳು ಹಿರಿಮೆಯೇನುಂಟು.

೧೦೦

ಹಳಸದು ಕೊಳೆಯದು ಹುಳಿಗಟ್ಟಿಕೊಳ್ಳದು
ಕಿಲಬುಂಗಟ್ಟದು ರುಚಿಗೆಡದು
ಯಾರೆಷ್ಟು ಕುಡಿದರು ಮತ್ತಷ್ಟು ಪೆರ್ಚುವು-
ದಮಳ ಸುಭಾಷಿತ ರಸವು.

ಹನ್ನೆರಡನೆಯ ನೂರು

೧

ತಾಯೆ ತುಂಗೆಯೆ ನಿನ್ನ ತೆರೆಗೈಯ ಹರಕೆಯ
ಕೊಡೆಯೊಳು ನಾ ತಣ್ಣಗಿಹೆನು
ಸಹ್ಯಶೈಲೇಶ್ವರ ನಿನ್ನ ಈ ಪಚ್ಚೆಯ
ತೊಡೆಯೊಳು ನಾ ಶಾಂತನಹೆನು.

೨

ಮಾನ್ಯರೆ ಮಾನ್ಯರ ಹಿರಿಮೆಯನರಿವರು
ಅರಿಯರು ನೀಚರಾದವರು
ಶಶಿಯನು ಶಂಭುವು ಶಿರದೊಳು ಮುಡಿವನು
ರಾಹುವು ನುಂಗಲಾಶಿಪನು.

೩

ನೀಡುವುದೇನನು ಕೊಳ್ಳುವುದೇನನು
ಕಪಿಮುಷ್ಟಿಯಾದರೆ ನೀನು
ಸರಳ ಸೌಜನ್ಯದೊಳೊಡವೆರೆದಿರೆ ಬಗೆ
ಕೊಳುಕೊಡೆ ಸುಗಮವು ನಿನಗೆ.

೪

ನೋಡಿದೆವೇನೆಂದು ಕೇಳಿದೆವೇನೆಂದು
ಚಿಂತಿಪರುತ್ತಮೋತ್ತಮರು
ತಿನ್ನುವೆವೇನೆಂದು ಕುಡಿದಪೆವೇನೆಂದು
ಚಿಂತಿಪರಧಮರಾದವರು.

೫

ಸಿರಿಬಂದಕಾಲಕೆ ಬಹುಮಂದಿ ಗೆಳೆಯರು
ಬಹುಮಂದಿ ನಂಟರು ಬಹರು
ಸಿರಿಹೋದಕಾಲಕೆ ಒಬ್ಬಿಬ್ಬರಾದರು
ಬಂದರೆ ನೀವೆ ಸುಕೃತರು

೬

ಮಕ್ಕಳು ಮರಿಗಳು ಚಿಕ್ಕವರಿರುವಂದು
ಸೊಂಟಕೆ ಭಾರವಾಗುವರು
ಮುಂದವರೋರಂತೆ ದೊಡ್ಡವರಾದಂದು
ಹೃದಯಕೆ ಭಾರವಾಗುವರು.

೭

ಎಲೆಯುಂಟು ಹೂವುಂಟು ಹಣ್ಣುಂಟು ನಾರುಂಟು
ನೆಳಲುಂಟು ಪರಿಮಳವುಂಟು
ಬಳಿಗೆ ಬಂದವರಿಗೆ ಹಲವು ಮೋದಗಳುಂಟು
ಮರದವೊಲಿಳೆಯೊಳಾರುಂಟು.

೮

ಧನಿಕನು ಕುರಿತು ಯೋಚಿಸುವನು ಮುಂದಿನ
ವರ್ಷದ ಮಳೆಬೆಳೆಗಳನು
ಬಡವನು ಕುರಿತು ಯೋಚಿಸುವನು ಇಂದಿನ
ಈ ಘಳಿಗೆಯ ಚಿತ್ರಗಳನು

೯

ಕಾರ್ಯ ವರೂಥಕೆ ಕೆಚ್ಚು ನೆಚ್ಚುಗಳೆನು-
ವೆರಡಶ್ವಗಳನಾಯ್ದು ಹೂಡಿ
ಚೋದಿಸಲ್ಪಡುವೆ ಗೆಲ್ಗಂಬದೆಡೆಯನು
ಸ್ಯಂದನಶತವನು ದೂಡಿ.

೧೦

ಕಳೆಹದೆ ಹೋದರೆ ನೀ ನಿನ್ನ ಮನವನು
ನನ್ನದನಾದರೂ ಕಳುಹು
ಕಂಡಮಾತ್ರಕೆ ಹೀಗೆ ಕದಿವರೆ ಮನವನು
ನನ್ನ ಜೀವಿತವನು ಉಳುಹು

೧೧

ಮಾಗಿಯ ಕಾಲವು ಹೇಳುವುದಿಲ್ಲವು
ಕಂಬಳಿ ಹರಿದಿಹುದೆಂದು
ಕ್ಷಾಮದ ಕಾಲವು ಹೇಳುವುದಿಲ್ಲವು
ಅನ್ನವು ಹಳಸಿಹುದೆಂದು.

೧೨

ಪ್ರೀತಿಯಿಂದೂಟೋಪಚಾರಗಳನು ಮಾಡು
ನಿನ್ನಣ್ಣ ತಮ್ಮದಿರೊಡನೆ
ವ್ಯವಹಾರವನು ಮಾತ್ರ ಬೇರೊಬ್ಬರೊಳು ಮಾಡು
ಬೇಡವೊ ಬಂಧುಗಳೊಡನೆ.

೧೩

ಏನಾದರೇನಂತೆ ನಿನ್ನದು ಹಿತ ನಿನ-
ಗನ್ಯರದಹಿತವು ಕೇಳು
ಹೇಗಿದ್ದರೇನಂತೆ ನಿನ್ನ ಹಾಸಿಗೆ ನಿನ-
ಗತಿಹಿತವಲ್ಲವೆ ಹೇಳು.

೧೪

ನ್ಯಾಯವನೆಲ್ಲರು ಮೆಚ್ಚುವರಾದರು
ಅದು ತಮ್ಮ ಬಳಿಗೆ ಬಂದಾಗ
ಭಯದೊಳು ಬೆವರುವರುಮ್ಮಳಗೊಳುವರು
ಕದ ಮುಚ್ಚಿಕೊಳುವರು ಬೇಗ.

೧೫

ನಿಯಮವನೊಪ್ಪುವುದಾನಂದವಾದರು
ಅದು ನಮಗತುಳ ಶೀತಳವು
ಅಪವಾದವೆನಿಪುದು ಕಡುತಾಪವಾದರು
ಅದು ನಮಗತಿಯುಷ್ಣವು.

೧೬

ದೇವರು ಕೊಡುವಾಗ ಸುಮ್ಮನೆ ಕೊಡುವನು
ಜಾತಿಯ ಕೇಳುವುದಿಲ್ಲ
ಕೊಡದಿದ್ದರೂ ನಮ್ಮ ಕುಲಗೋತ್ರಗಳ ನೀನು
ಸುಮ್ಮನೆ ಕೇಳುವಿಯಲ್ಲ.

೧೭

ದೊಡ್ಡತುತ್ತನು ಮಾಡಿ ಬಾಯೊಳಗಿಟ್ಟರೆ
ಕಟ್ಟೀತು ಗಂಟಲು ಜೋಕೆ
ಹೇರಾಸೆಗಳನಟ್ಟಿ ಮಿತಿಯೊಳಗಿದ್ದರೆ
ನೆಮ್ಮದಿಯಿರುವುದು ಮನಕೆ.

೧೮

ಒಮ್ಮೆ ತಾನೆನ್ನನು ವಂಚಿಸಿ ಹೋದರೆ
ನಾಚಿಕೆಗೆಟ್ಟವನವನೆ
ಅವನೆ ಬಂದೆನ್ನನು ಮತ್ತೆ ವಂಚಿಸಿದರೆ
ನಾಚಿಕೊಂಡಿರಬೇಕು ನಾನೆ.

೧೯

ಆವನಲಕ್ತಕ ರಸವನು ಬಳಿವನು
ತ್ವತ್ಪಾದನಖರತ್ನಗಳಿಗೆ
ಬೆಳ್ಳಗೆ ಮಾಡುವೆನೆಂದು ಚಂದನವನು
ಬಳಿಯುವನಾತನು ಶಶಿಗೆ.

೨೦

ಕಠಚರಣಂಗಳು ಫುಲ್ಲ ಪುಷ್ಪಂಗಳು
ಕಣ್ಗಳು ಚಲಿಪ ಮತ್ಸ್ಯಗಳು
ಕೇಶಸಮೂಹವು ನೀಲ ಶೈವಾಲವು
ಸುರಸಮೀಸ್ತ್ರೀ ಸರೋವರವು.

೨೧

ಬೆಮರುವಳಂಜುವಳೊಳಗೊಳಗುಲಿವಳು
ನವವಧು ಬಹಳ ನಾಚುವಳು
ಮುದ್ದಿಸಲಿನಿಯನು ಪೊಂಪುಳಿಗೊಳುವಳಂ
ಕುಸಿವಳು ಮುಗ್ಗುಲಾಗುವಳು.

೨೨

ಸಂತರು ಹೆರರಿಗೆ ಲೇಸೆಸಗುವುದನಂ
ಶೂರರು ಶಸ್ತ್ರಾಸ್ತ್ರಗಳನು
ಜಿಪುಣರು ಧನವನು ಸತಿಯರು ನಾಣನು
ತೊರೆವರು ಸಾವೊಳು ತಾವು.

೨೩

ಈಕೆಯ ಬಾಲ್ಯವು ಕಳೆದು ತಾರುಣ್ಯವು
ತನುವೊಳಂ ಸಲೆ ತೋರುತಿರಲು
ನಡೆಯೊಳು ನುಡಿಯೊಳು ತೋರ್ಪ ವಿಲಾಸವು
ರತಿಗಿಂತ ನೂರ್ಮಡಿ ಮಿಗಿಲು.

೨೪

ಸಭೆಯೊಳು ನೀನಿರಲುಗ್ರವೆನ್ನಿಸುವುವು
ಚಂದ್ರ ಚಂದ್ರಿಕೆ ಚಂದನಗಳು
ರಣದೊಳು ನೀನಿರೆ ಸೌಮ್ಯವೆನ್ನಿಸುವುವು
ಶೇಷಕಾಲಾನಲಾದಿಗಳು.

೨೫

ಚಂದ್ರನವೊಲು ನೀರು ನಿರ್ಮಲವಾಗಿದೆ
ಚಂದ್ರನಂ ಹಂಸನಂತಿಹನು
ಹಂಸವು ಶರದದ್ಕಮಲದ ಹಾಗಿದೆ
ಕಮಲವನೆಂತು ಬಣ್ಣಿಸೆನು.

೨೬

ಈಕೆಯ ಬಾಲ್ಯವು ಕಳೆದು ಕಪೋಲವು
ಪಾಂಡುವರ್ಣವನಾನಲಾಗಿ
ಲವಲಿ ರಾಕಾಧಿಪ ಕನಕ ಮುಂತಾದುವು
ಮಲಿನಗೊಂಡವು ಮಿಗಿಲಾಗಿ.

೨೭

ಪ್ರಾಣವನಪಹರಿಸುವ ಕಾರ್ಯದೊಳು ನೀನು
ಘೋರ ಹಾಲಾಹಲ ನಿಭನು
ಹೇಳು ಶಶಾಂಕನೆ ಮುಗ್ಧನದಾವನು
ನಿನ್ನ ಸುಧಾಂಶವೆಂದವನು.

೨೮

ವಕ್ಷದೊಳಾಕೆ ವಿಪಕ್ಷ ಕಾಮಿನಿಯುಳ
ಹಾರಲಕ್ಷ್ಮವನೀಕ್ಷಿಸಿದಳು
ಸೆಳೆದಳು ಒಡನೆ ತನ್ನಿನಿಯನ ಭುಜಗಳ
ಸುತ್ತಿದ ನಿಜ ಬಾಹುಲತೆಯ.

೨೯

ಹೆರವರು ಕಂಡಾರು ಏಕೆ ಚಾಪಲ್ಯವು
ಬಿಡಿ ಹೋಗಿ ನಾನು ಕುಮಾರಿ
ಕೈಗೊಡಿ ಹೋಹೋ ಪ್ರಮಾದವು ಹೋಗುವು-
ದೆಲ್ಲಿಗೆ ನೀವೆಲ್ಲಿದೀರಿ.

೩೦

'ಕೃಶಳಾಗಿ ನಿಂತಿಹುದೇಕೆ ಕೃಶಾಂಗಿಯೆ'
'ನಿನಗೇಕೆ ಹೆರರ ಸುದ್ದಿಗಳು'
'ನನ್ನ ಸಂತೋಷಕೆ' 'ನಿನ್ನ ಕೃಶಾಂಗಿಯೆ'
ಪೇಳ್ವಳು ಪಥಿಕನೆ ತೆರಳು'

೩೧

ದೇಶವಿದೇಶವನಲೆದೆನು ತನ್ನಿಯೆ
ನಾನು ಸವರ್ಣಕೆ ಬಯಸಿ
ಅದು ನನಗಿದುವರೆಗಾದರು ಸಿಗದೆಯೆ
ನಾನಿಂತು ಚಿಂತಿಸುತಿಹೆನು.

೩೨

ನೀರಿನ ಕೊಡವನು ಹೊತ್ತು ಬೇಗನೆ ನೀನು
ಕೊಳದಿಂದಲ್ಲೈತರುವಂದು
ತಟಕುಂಜ ಗೂಢ ಸುರತವನು ಬಲ್ಲನು
ಆ ಮನೋಭವನೊಬ್ಬನಿಂದು.

೩೩

ಹಣವನಾರ್ಜಿಸುವಾವನೆಂದಿಗಾದರು ತಾನು
ಆಯಾಸವಾಯಿತೆನ್ನುವನೆ
ಆಯಾಸವಾಯಿತೆಂಬಾತನು ಹಣವನು
ಎಂದಾದರೂ ಗಳಿಸುವನೆ.

೩೪

ಮುದುಕರಾದವರನು ನಿಶ್ಶಕ್ತರೆನಬೇಡ
ಬಹುಗಟ್ಟಿ ಮುದಿಮೇಕೆಕೊಂಬು
ಮಾಗಿ ಹಣ್ಣಾದವರನು ಪೊಳ್ಳು ಎನಬೇಡ
ನನ್ನ ಮಾತನು ನೀನು ನಂಬು.

೩೫

ಹಲಸಿನ ಹಣ್ಣಿನ ತೆರನಿರೆ ನಿನ್ನನು
ಹಿಸಿವರು ಬಂಧುಬಾಂಧವರು
ತೆಂಗಿನಕಾಯಿಯ ತೆರನಿರೆ ನಿನ್ನನು
ಅವರೆಯೆ ತಲೆಯೊಡೆಯುವರು.

೩೭

ಕಂಡವರೆದುರೊಳು ನಿನ್ನದೆಯೊಳಗನು
ತೋಡಿಕೊಂಡಳಲಾಗ ನೋಡ
ಆರಿಂದಲೇನಹುದವರಿವರನು ನೀನು
ಬರಿದೆಯೆ ಸಲೆ ಬೇಡಬೇಡ.

೩೭

ಪಾದಚಾರಿಯು ಕಂಡು ಕಾರೊಳು ಬಾ ಎಂದು
ಹತ್ತಿಸಿಕೊಳುವುದು ಬೇಡ
ನಿನ್ನ ಕಾರಿನ ಟೀಕೆ ಮುಗಿಸಿಯೆ
ಕಾರಿನಿಂದಿಳಿವನು ನೋಡ.

೩೮

ನೆರೆಮನೆಯಾತನ ಗಡ್ಡಮೀಸೆಗಳಿಗೆ
ಉರಿಹೊತ್ತಿಕೊಂಡಿತೆಂದೆನಲು
ಬೇಗನೆ ನೀ ನಿನ್ನ ಗಡ್ಡಮೀಸೆಗಳಿಗೆ
ನೀರನು ತಳಿದುಕೊ ಮೊದಲು.

೩೯

ಹೂಡಿದ ಎತ್ತುಗಳುತ್ತಮವಿರಬೇಕು
ಗಾಡಿಗಳೆಂತಿದ್ದರೇನು
ದುಡಿಯುವ ಆಳುಗಳುತ್ತಮರಿರಬೇಕು
ದಣಿಗಳು ಹೇಗಿದ್ದರೇನು.

೪೦

ಸುಲಭದೊಳಾವನು ಕತ್ತು ಕೈಕಾಲನು
ಮುರಿಯಿಸಿಕೊಳಲೆಳಸುವನು
ದೀಪವಾರಿದ್ದರು ಕಾಂಬುದು ಕಣ್ಣಿಗೆ
ಏಣಿಯು ಮೆಟ್ಟಿಲಾತನಿಗೆ.

೪೧

ಯತ್ನವು ಸಮಸಮನಾದರು ಕೆಲವರು
ಮಾತ್ರವೆ ಫಲವನುಣ್ಣುವರು
ಸುರರಸುರರು ಕೂಡಿ ಕಡಲನು ಕಡೆದರು
ಕುಡಿದರು ಸುಧೆಯನು ಸುರರು.

೪೨

ಮುಂಚಿತವಾಗಿಯೆ ಬಂದ ವಿಹಂಗಮ
ಕೊಕ್ಕನು ಮಸೆದುಕೊಳ್ಳುವುದು
ತಡವಾಗಿ ಅಲ್ಲಿಗೆ ಬಂದ ವಿಹಂಗಮ
ರೆಕ್ಕೆಯ ಬಡಿದುಕೊಳ್ಳುವುದು.

೪೩

ಜೀವರು ಮಹಿಮರಾಶ್ರಯದೊಳಗಿದ್ದರು
ಭಾಗ್ಯಾನುಸಾರವು ಫಲವು
ಶಿವಕಂಠದೊಳು ತಾನು ತೊಡವಾಗಿ ಮೆರೆದರು
ಎಲರುಣಿಯಾಗಿದೆ ಹಾವು.

೪೪

ನಾರಿಯರೆದೆಯನು ಸೋಂಕುವುದಾ ಸೋರೆ
ವೀಣೆದಂಡಿಗೆಯೊಡನಿರಲು
ಈಚಲರಸವನು ಕುಡಿಯುವುದಾ ಸೋರೆ
ನೀಚರ ಕೈಯೊಳಗಿರಲು.

೪೫

ಕೃಷಿಯೆ ಸರ್ವೋತ್ತಮ ವ್ಯಾಪಾರ ಮಧ್ಯಮ
ಪರರನೋಲೈಸುವುದಧಮ
ಭಿಕ್ಷೆಯಧಮಾಧಮವನ್ಯರ ಗಳಿಕೆಯ
ನುಣ್ಣುವುದತ್ಯಂತ ಹೇಯ.

೩೭

ಕಂಡವರೆದುರೊಳು ನಿನ್ನದೆಯೊಳಗನು
ತೋಡಿಕೊಂಡಳಲಾಗ ನೋಡ
ಆರಿಂದಲೇನಹುದವರಿವರನು ನೀನು
ಬರಿದೆಯು ಸಲೆ ಬೇಡಬೇಡ.

೩೭

ಪಾದಚಾರಿಯು ಕಂಡು ಕಾರೊಳು ಬಾ ಎಂದು
ಹತ್ತಿಸಿಕೊಳುವುದು ಬೇಡ
ನಿನ್ನ ಕಾರಿನ ಟೀಕೆ ಮುಗಿಸಿಯೆ
ಕಾರಿನಿಂದಿಳಿವನು ನೋಡ.

೩೮

ನೆರೆಮನೆಯಾತನ ಗಡ್ಡಮೀಸೆಗಳಿಗೆ
ಉರಿಹೊತ್ತಿಕೊಂಡಿತೆಂದೆನಲು
ಬೇಗನೆ ನೀ ನಿನ್ನ ಗಡ್ಡಮೀಸೆಗಳಿಗೆ
ನೀರನು ತಳಿದುಕೊ ಮೊದಲು.

೩೯

ಹೂಡಿದ ಎತ್ತುಗಳುತ್ತಮವಿರಬೇಕು
ಗಾಡಿಗಳೆಂತಿದ್ದರೇನು
ದುಡಿಯುವ ಆಳುಗಳುತ್ತಮರಿರಬೇಕು
ದಣಿಗಳು ಹೇಗಿದ್ದರೇನು.

೪೦

ಸುಲಭದೊಳಾವನು ಕತ್ತು ಕೈಕಾಲನು
ಮುರಿಯಿಸಿಕೊಳಲೆಳಸುವನು
ದೀಪವಾರಿದ್ದರು ಕಾಂಬುದು ಕಣ್ಣಿಗೆ
ಏಣಿಯು ಮೆಟ್ಟಲಾತನಿಗೆ.

೪೧

ಯತ್ನವು ಸಮಸಮನಾದರು ಕೆಲವರು
ಮಾತ್ರವೆ ಫಲವನುಣ್ಣುವರು
ಸುರರಸುರರು ಕೂಡಿ ಕಡಲನು ಕಡೆದರು
ಕುಡಿದರು ಸುಧೆಯನು ಸುರರು.

೪೨

ಮುಂಚಿತವಾಗಿಯೆ ಬಂದ ವಿಹಂಗಮು
ಕೊಕ್ಕನು ಮಸೆದುಕೊಳ್ಳುವುದು
ತಡವಾಗಿ ಅಲ್ಲಿಗೆ ಬಂದ ವಿಹಂಗಮು
ರೆಕ್ಕೆಯ ಬಡಿದುಕೊಳ್ಳುವುದು.

೪೩

ಜೀವರು ಮಹಿಮರಾಶ್ರಯದೊಳಗಿದ್ದರು
ಭಾಗ್ಯಾನುಸಾರವು ಫಲವು
ಶಿವಕಂಠದೊಳು ತಾನು ತೊಡವಾಗಿ ಮೆರೆದರು
ಎಲರುಣಿಯಾಗಿದೆ ಹಾವು.

೪೪

ನಾರಿಯರೆದೆಯನು ಸೋಂಕುವುದಾ ಸೋರೆ
ವೀಣೆದಂಡಿಗೆಯೊಡನಿರಲು
ಈಚಲರಸವನು ಕುಡಿಯುವುದಾ ಸೋರೆ
ನೀಚರ ಕೈಯೊಳಗಿರಲು.

೪೫

ಕೃಷಿಯೆ ಸರ್ವೋತ್ತಮ ವ್ಯಾಪಾರ ಮಧ್ಯಮ
ಪರರನೋಲೈಸುವುದಧಮ
ಭಿಕ್ಷೆಯಧಮಾಧಮವನ್ಯರ ಗಳಿಕೆಯ
ನುಣ್ಣುವುದತ್ಯಂತ ಹೇಯ.

೪೬

ಭಾರವಾಗಿದ್ದರೆ ಹಣದ ಕೈಚೀಲವು
ಹಗುರವಾಗಿದ್ದರೆ ಮನವು
ಅಂತಹ ಮನುಜನಿಗಾವುದಸಾಧ್ಯವು
ತ್ರೈಜಗವಾತನ ವಶವು.

೪೭

ಕಿಸೆಯ ಚಿಲ್ಲರೆಯನು ಪೋಲುಮಾಡುವುದಕೆ
ಯಾರಿಗಾದರು ಗುರು ಬೇಕೆ
ಕೊಂಡು ಪಿಂಗಾಣಿಯನೆಸೆಯುತ್ತ ದೂರಕೆ
ಮತ್ತೆ ಕೊಂಡುಕೊ ಮಿಕ್ಕ ಹಣಕೆ.

೪೮

ರೋಗನಿದಾನವನೂಹಿಸಿ ಪೇಳ್ವನು
ಬಳಿಕ ಚಿಕಿತ್ಸೆಯ ಗೈವೆ
ರಸದ ಚಿಕಿತ್ಸೆಯೊಳಾನತಿ ನಿಪುಣನು
ಕಾತರ ಬೇಡೆಲೆ ಚೆಲುವೆ.

೪೯

ಮುಚ್ಚಿಹೋಗಿದ್ದರು ಕೆಂಪನೆ ತುಟಿಯೊಳು
ಬೆಳ್ಳನೆ ಪಲ್ಗಳ ಬಿಳುಪು
ಮತ್ತೆ ಕಣ್ಗೆಸೆಯಿತು ಆಕೆಯ ನಗೆಯೊಳು
ಅವುಗಳ ಹೊಚ್ಚನೆ ಹೊಳಪು.

೫೦

ತಣ್ಣನೆ ಕಲ್ಲಾದರೇನಂತೆ ಹೊಡೆದರೆ
ಸಿಡಿಯದೆ ಕಿಡಿಯೊಡಲಿಂದೆ
ಮೆತ್ತನೆಯವರಾದರೇನಂತೆ ಮುನಿಯರೆ
ಕೆಣಕಿದರವರನು ಬರಿದೆ.

೫೧

ತಾನೇನನಾದರು ಹೌದೆನೆ ಗಂಡಸು
ಭಾವಿಸು ಅದು ಹೌದು ಎಂದು
ತಾನೇನನಾದರು ಹೌದೆನೆ ಹೆಂಗಸು
ಭಾವಿಸು ಅದನಲ್ಲವೆಂದು.

೫೨

ದಿನವೆಲ್ಲ ಕದವಿಕ್ಕಿದರು ಬಂದು ಜನಗಳು
ತುಂಬಿವೆ ಸೆರೆಮನೆ ಕೋಣೆ
ದಿನವೆಲ್ಲ ಕದ ತೆರೆದಿರುವ ದೇಗುಲದೊಳು
ಒಬ್ಬರನಾದರು ಕಾಣೆ.

೫೩

ಸಾರಣೆಕಾರಣೆ ಸುಣ್ಣ ಬಣ್ಣಗಳಿಂದೆ
ಗುಡಿಸಲು ಚೆಂದವೇರುವೊಲು
ಒಡವೆ ವಸ್ತುಗಳಿಂದೆ ಉಡಿಗೆ ತೊಡಿಗೆಗಳಿಂದೆ
ಹೆಂಗಸು ಚೆಂದಕಾಣುವಳು.

೫೪

ಮೊಸಳೆಯೆ ರಾಜಾಧಿರಾಜನು ನೀರೊಳು
ಇಲಿ ಬಿಲದೊಳು ಧೀರಮೂರ್ತಿ
ಹುಟ್ಟಿದ ಹಳ್ಳಿಯ ಹುಟ್ಟಿದ ಮನೆಯೊಳು
ಮೂರ್ಖನು ಸಹ ಚಕ್ರವರ್ತಿ.

೫೫

ವಂಶಪಾರಂಪರ್ಯದೊಳು ಬಂದ ಕಸಬೊಳು
ನಿಪುಣನು ಮಗನು ಮೊಮ್ಮಗನು
ನಿಪುಣನಾಗುವ ಹಾಗೆ ಮಣ್ಣಗೆವುದರೊಳು
ಮೂಷಕ ರಾಜನ ಸುತನು.

೫೭

ಕಣ್ಣಿಗೆ ನಿದ್ದೆಗೆ ಜಗಳವಾಗುವುದುಂಟೆ
ಆದರೆ ನೆಮ್ಮದಿಯುಂಟೆ
ಕೂಡಿಬಾಳುವ ವೇಳೆ ಜಗಳವಾದರೆ ಹೇಗೆ
ನೆರೆ ಹೊರೆಯುವರಿಗೆ ನಮಗೆ.

೫೭

ಅಪಘಾತವನು ನಾವು ತಪ್ಪಿಸ ಬಲ್ಲೆವೆ
ಬಲ್ಲೆವೆಂದೆನುವುದು ಚದುರೆ
ನಾಲ್ಕು ಕಾಲಿದ್ದರು ಬೀಳುವುದಿಲ್ಲವೆ
ಓಡುವ ಭರದೊಳು ಕುದುರೆ.

೫೮

ನಿನ್ನ ಭೂಮಾಕಾರವಿಲ್ಲವೆಂದನ್ಯರ
ತೆಗಳುವುದಾಗದು ನೋಡ
ತನ್ನಡಿಯಳತೆಯೊಳಾರಡಿಯೆತ್ತರ
ವಿರುವುದಿರುಂಪೆಯು ಕೂಡ.

೫೯

ಗಂಡಸು ಅಂಚೆಯ ಕಾರ್ಡಿನಂತಾವರೆ
ಹೆಂಗಸು ಕವರಿನ ಹಾಗೆ
ಗಂಡಸು ತೋಡುವ ಗುದ್ದಲಿಯಾದರೆ
ಹೆಂಗಸು ಮಂಕರಿ ಹಾಗೆ.

೬೦

ಅಪಘಾತವೆಂದಿಗೆ ಬಂದೆರಗುವುದೆನು-
ವುದನು ಬಲ್ಲವರಾರು ಮತ್ತೆ
ಕೂರುವ ವೇಳೆಯೊಳಾವ ಮೊಳಕಾಲನು
ಒಂಟೆಯೂರುವುದೆಂದು ಗೊತ್ತೆ.

೬೧

ಒಬ್ಬನ ಕೊಂದವನಾದರೆ ಕೊಲೆಗಾರ–
ನೆನುವರು ಹಿಡಿದು ಶಿಕ್ಷಿಪರು
ಸಾವಿರ ಜನರನು ಕೊಂದವನಾದರೆ
ಅನುಪಮ ಶೂರನೆನ್ನುವರು.

೬೨

ಒಯ್ಯುವಿರೇತಕೆ ದೇವರನೀತನು
ಹುಲಿಯನು ಸೃಜಿಸಿದನೆಂದು
ಪ್ರತಿಯಾಗಿ ಹೊಗಳಿರಿ ಆ ಹುಲಿಗಾತನು
ರೆಕ್ಕೆಯು ಕೊಡಲಿಲ್ಲವೆಂದು.

೬೩

ಕತ್ತೆಗಳನೆ ತಾವು ಹೋಲುವುವಾದರು
ಮೊಲಗಳು ಕಿವಿಯುಳತೆಯೊಳು
ಕತ್ತೆಯು ಕಿವಿಗಳು ಮೊಲಗಳಿವೆನ್ನರು
ಲೋಗರು ಬುದ್ಧಿಯುಳ್ಳವರು.

೬೪

ಮುಂದೆ ಹೋದರು ಸಾವು ಹಿಂದೆ ಬಂದರು ಸಾವು
ಸ್ಥಿತಿಗತಿಯಿಂತಿರುವಂದು
ಮುಂದೆ ಹೋಗಿಯೆ ಸತ್ತು ಯಶವನು ಪಡೆವೆವು
ಎಂದಡಿ ಮುಂದಿಡಿರಿಂದು.

೬೫

ಇಳಿವುದರೊಳು ಹೊಸವರಿಸೆಯಿಂದೆಂದನು
ಕುದುರೆಯಿಂದಿಳೆಗೆ ಬಿದ್ದವನು
ಮೀಸೆಯು ಮಣ್ಣಾಗಲಿಲ್ಲವು ಬಿದ್ದರು
ಎಂದುಕೊಂಡೇಳ್ವರಂತಹರು.

೬೬

ಸಿಂಹ ದಳಪತಿಯಾಗೆ ಗೆಲವು ನಿಶ್ಚಯವೆಂತು
ಸಾವಿರ ಜಿಂಕೆಯ ಪಡೆಗೆ
ಜಿಂಕೆ ದಳಪತಿಯಾಗೆ ಸೋಲು ನಿಶ್ಚಯವಂತು
ಸಾವಿರ ಸಿಂಹದ ಪಡೆಗೆ

೬೭

ಹೇಡಿಯ ಮನೆಯೊಳು ರೋದನದುದ್ಗಾರ–
ವೆಂದಾರೆ ಕೇಳೀತೆ ನಿಮಗೆ
ಗಾಯಗಳಾಗದೆ ರಣದಿಂದಲಾ ಧೀರ
ಸುಖವಾಗಿ ಬರುವನು ಮನೆಗೆ.

೬೮

ದಂತವು ಭಾರವೆಂದಾದೀತೆ ಸಲಗಕೆ
ಭಾರವೆ ನವಿಲಿಗೆ ತೋಕೆ
ಸೊಗಸು ಸಿಂಗಾರವು ಗಾತ್ರಕೆ ತಕ್ಕಂತೆ
ಎಲ್ಲ ಜೀವರಿಗಿಹುದಲ್ತೆ.

೬೯

ಕಾಲೊಂದನಾದಾರಿಗಿನ್ನೊಂದನೀದಾರಿ–
ಗೆಂದೇಕಕಾಲದೊಳೂರಿ
ನಡೆಯುವುದಾದರೆ ಎರಡಡಿ ಹೋದೀರಿ
ಸೊಂಟವು ಹಿಸಿದು ಬಿದ್ದೀರಿ.

೭೦

ಹತ್ತಿರವಿದ್ದರು ಕೈಚಾಚಿದಲ್ಲದೆ
ವಸ್ತುವ ತೆಗೆದಿಡಬಹುದೆ
ಒಂದಿನಿಸಾದರು ಮೈಕೈಯನಲುಗದೆ
ಸುಖವನು ಪಡೆವೆನೆನಬಹುದೆ.

೭೧

ಕಣ್ಣುಗಳತ್ತರೆ ಬಹುಬೇಗ ಮೂಗುವೆ
ತಾನಾಗಿ ತೇವಗೊಳ್ಳುವುದು
ಹೆತ್ತಮ್ಮನತ್ತರೆ ಮಕ್ಕಳು ತಾವೂವೆ
ಗೋಳಾಡುತಳುವುವು ನೊಂದು.

೭೨

ಪಾಂಡಿತ್ಯವೆನುವುದು ಅನುಮಾನಕಿನ್ನೊಂದು
ಹೆಸರೆಂದು ದೃಢವಾಯಿತೆನಗೆ
ಏನನೆ ಕೇಳಿ ನೀವನುಮಾನ ತಮಗೆಂದು
ಪಂಡಿತರೆನುವರು ಕೊನೆಗೆ.

೭೩

ಹೆಗಲಿನ ಹಾಗೆಯೆ ತಲೆ ಹೊರೆ ಹೊತ್ತರು
ತಲೆ ಮೇಲೆ ಕೆಳಗಡೆ ಹೆಗಲು
ಆಳಿನ ಹಾಗೆಯೆ ದಣಿ ಕೂಡ ದುಡಿದರು
ದಣಿಯೆ ಆ ಆಳಿಗೆ ಮಿಗಿಲು.

೭೪

ದಾರಿಯ ನೋಡಿಯೆ ಹಳ್ಳಿಯಿದೆಂತಹು-
ದೆಂಬುದನರಿವುದು ಸಾಧ್ಯ
ಆಳನು ನೋಡಿಯೆ ಇಂಥವನಿರಬಹು-
ದೊಡೆಯನೆಂದೊರೆವುದು ಸಾಧ್ಯ.

೭೫

ಮೇಯುದ ಕಾಗೆಗೆ ಮಿಂದೆದ್ದ ಕಾಗೆಗೆ
ಅಂತರವಾವುದು ಹೇಳಿ
ಆದರವೋಲಿದು ಸಹ ತೋರ್ಪುದು ಕಪ್ಪಗೆ
ಹುಟ್ಟು ಬಣ್ಣವು ಗಟ್ಟಿ ಕೇಳಿ.

೭೬

ಅಲ್ಲಲ್ಲಿ ಕೆರೆಯುವುದೇತಕೆ ನೇರಾಗಿ
ಬೆರಳಿಡು ಕಜ್ಜಿಯ ಮೇಲೆ
ಸುತ್ತೇಕೆ ಬಳಸೇಕೆ ನೆಟ್ಟನೆ ಮಾತಾಡು
ಬಂದಂಥ ಕಜ್ಜದ ಮೇಲೆ.

೭೭

ಕೆರೆಯೊಳು ಮಿಂದರು ಮನ ಶುದ್ಧವಿದ್ದರೆ
ಕೆರೆಯುದಕವೆ ಗಂಗೆಯಹುದು
ಗಂಗೆಯ ಮಿಂದರು ಮನ ಹೊಲ್ಲವಿದ್ದರೆ
ಗಂಗೆಯು ಕೆರೆಯ ನೀರಹುದು.

೭೮

ಅಭ್ಯಾಸವೆನುವುದು ಬಾಳಿನುದ್ದಗಲಕೆ
ಹಬ್ಬಿದ ಗಿರಿಯವೋಲಿಹುದು
ಮೇಲೇರಿ ಹೋಗುವುದಾಗದು ಶೃಂಗಕೆ
ಆಗದು ಕಡಿದುರುಳುವುದಂ.

೭೯

ಕೈಬಿಚ್ಚಿ ತೋರಿಸು ಮನಮೆಚ್ಚಿಕೊಡುವನು
ದೇವನು ಬರಿಗೈಯು ನಿನಗೆ
ಮಾಜದಿರಂಜದಿರೀಯುವನೀಶನು
ದೃಢಭಕ್ತಿಯಿದ್ದರೆ ಕೊನೆಗೆ.

೮೦

ಕತ್ತಿಯ ಏಟಿಗೆ ಸಿಕ್ಕಿ ಸತ್ತವರನು
ಲಕ್ಷೋಪಲಕ್ಷವೆನ್ನುವರು
ನಾಲಗೆಯೇಟಿಗೆ ಸಿಕ್ಕಿ ಸತ್ತವರನು
ಲೆಕ್ಕವನಿಟ್ಟವರಾರು.

೮೧

ಮುರಿದ ಕೈಯಾದರೆ ಮುಚ್ಚಿಕೊ ಕೈಯನು
ಅಂಗಿಯ ತೋಳಿನ ಒಳಗೆ
ಬೋಳು ತಲೆಯಾದರೆ ಮುಚ್ಚಿಕೊ ತಲೆಯನು
ಒಳ್ಳೆಯ ಟೊಪ್ಪಿಗೆಯೊಳಗೆ.

೮೨

ತಾಯಿಯ ಉಡಿ ನೋಡು ತಂದೆಯ ನುಡಿ ನೋಡು
ಗುರುವಿನ ನಡೆಯನು ನೋಡು
ಆಳಿನ ಕೈ ನೋಡು ಗೆಳೆಯನ ಕಣ್ ನೋಡು
ಅರಸಿನ ಎಡಬಲ ನೋಡು.

೮೩

ಮುದಿಯ ವೈದ್ಯನು ಲೇಸು ಎಳೆಯ ಕೂಲಿಯು ಲೇಸು
ಹರೆಯದ ಲಾಯರು ಲೇಸು
ಹಳೆಯ ಮಡಕೆಯು ಲೇಸು ಹುಳಿಯ ಹೆಂಡವು ಲೇಸು
ಒಣಗಿದ ಕಟ್ಟಿಗೆ ಲೇಸು.

೮೪

ಹೆರವರಗ್ಗಿಷ್ಟಿಕೆ ಹೊತ್ತಿಸಿಕೊಡುವರೆ
ಚಳಿಯೊಳು ನಡುಗುವ ನಿನಗೆ.
ನಂಟರಿಷ್ಟರು ಸಖರು ಬಳಿಯೊಳು ಸುಳಿವರೆ
ನಿನ್ನ ಕಷ್ಟಕೆ ನೀನೆ ಕೊನೆಗೆ.

೮೫

ತಲೆ ಮೇಲೆ ಖಡ್ಗವು ತೂಗುತಲಿರುವಾಗ
ದೇವರ ನೆನೆವನು ಮನುಜ
ವೆಂಕಟರಮಣನ ಸಂಕಟ ಬಂದಾಗ
ನೆನೆಯುವರೆಂಬುದು ಸಹಜ.

೮೬

ಸಾಕು ಸಹಾಯವು ಜಯವಾಯಿತೆನದಿರು
ನೆರವು ಕಡೆತನಕವು ಬೇಕು
ಬಡಿಸಿರುವನ್ನವನುಣ್ಣುವುದಾದರು
ಕೈಯ ಸಹಾಯವು ಬೇಕು.

೮೭

ಅನುಭವಶಾಲಿಯ ನೆರವಿಹುದಾದರೆ
ಕೆಲಸವ ಮಾಳ್ಪುದು ಸುಲಭ
ಒಮ್ಮೆ ಸುಟ್ಟಾರಿದ ಕಟ್ಟಿಗೆಯಾದರೆ
ಮತ್ತೆ ಹೊತ್ತಿಸುವುದು ಸುಲಭ.

೮೮

ಮಾಗಿದ ಗಾಯದ ಗುರುತನು ಕಂಡರೆ
ನಗುವುದಿದೇತಕೆ ನೀನು
ಗಾಯಗಳಿಲ್ಲದೆ ರಣವನು ಗೆಲುವರೆ
ವಜ್ರಕಾಯನೆ ಹೇಗೆ ನೀನು.

೮೯

ಹೊಸದೋಣಿ ಎಂದಂಜಿ ಹೋಹೆಯ ಬೀಡಿಗೆ
ಒಮ್ಮೆ ಸಾಹಸವನು ಮಾಡು
ಹಳೆಯರೆಗಳ ಪರಿಚಯವಹುದೋಡಿಗೆ
ನೀರಿನೊಳಿಳಿಯಿಸಿ ನೋಡು.

೯೦

ಹಗಲಾದರನ್ನಕರದವರಭಿವೃದ್ಧಿಗೆ
ಹಗಲೆಲ್ಲ ದುಡಿವೆವು ನಾವು
ಇರುಳಾದರೆಮ್ಮದು ನಮ್ಮ ವಿಶ್ರಾಂತಿಗೆ
ಇರುಳೆಲ್ಲ ನಿದ್ದೆಗೈಯ್ಯುವೆವು.

೯೧

ನಿನ್ನ ಆನನವೆಂತು ಚಂದ್ರನು ಹಾಸವು
ಅಂತು ಪಿಕಿಗಳ ಬೆಳಕಿಳಿಗೆ
ಚಂದ್ರನು ಚಂದ್ರನಿಗೆಂತುಪಮಾನವು
ಅಂತು ಹೋಲಿಕೆ ನೀನು ನಿನಗೆ.

೯೨

ಇಂದಿನ ನೋಟವು ಚಿನ್ನದ ನೋಟವು
ನಾಳೆಗೆ ಬೆಳ್ಳಿಯ ನೋಟ
ನಾಡಿದ್ದು ಕಬ್ಬಿಣದಂತಹ ನೋಟವು
ಆ ಮುಂದೆ ಮಣ್ಣಿನ ನೋಟ.

೯೩

ಹಗಲೆಲ್ಲ ಯಾಚನೆ ಇರುಳೆಲ್ಲ ಯೋಚನೆ
ನಾಳಿಗಿನ್ನೆಂತೆಂಬ ಚಿಂತೆ
ಇದರಿಂದಲೆಂದಿಗೆ ನನಗೆ ವಿಮೋಚನೆ
ಬಾಳಿಂದು ಗೋಳಿನ ಸಂತೆ.

೯೪

ಕಣ್ಣಿನ ಹತ್ತಿರ ಕಿವಿಯಿಹುದಾದರು
ಕಿವಿಯನು ಕಾಣದು ಕಣ್ಣು
ಪತಿಯ ಸನಿಹದೊಳು ಸತಿಯಿಹಳಾದರು
ಪತಿಯನು ಅರಿಯಳು ಹೆಣ್ಣು.

೯೫

ಹೊಳೆಯೊಳು ನೀರೊಳಗಿರುವ ಪಾಸರೆಯೊಳು
ಮರೆಯಾಗಿ ಮೀನಿರುವಂತೆ
ಭವದೊಳು ಮಕ್ಕಳ ಮಮತೆಯಾಸರೆಯೊಳು
ಹಾಯಾಗಿ ನಾನಿಹೆನಲ್ಲೆ.

೯೬

ಎಡದೊಳೆ ಹೋದರು ಹೇ ಬಾಜು ಎಂದರು
ಎಚ್ಚರದೊಳೆ ನಡೆಸಿದರು
ನನ್ನ ಬಾಳಿನ ಗಾಡಿಗಪಘಾತವೆನ್ನುವುದು
ನಿತ್ಯದ ಮಾತಾಯಿತಿಂದು.

೯೭

ನಾನುಸಿರಾಡುತಲಿಹುದೆ ಪವಾಡವು
ಸಮಚಿತ್ತ ದೈವದ ಬಲವು
ಸಮಯಕೆ ದೊರಕಿದ ಮಿತ್ರ ಸಹಾಯವು
ನನ್ನಲ್ಪಜಯಕೆ ಕಾರಣವು.

೯೮

ಉಪ್ಪಿನಕಾಯನು ಕಡಿಯೆಂದು ನನಗಿತ್ತೆ
ಮೊಸರನ್ನವನು ನೀನೆ ತಿಂದೆ
ವಿಧಿಯೆನ್ನ ಹಣೆಯೊಳು ಬರೆದುದು ಹೀಗಿತ್ತೆ
ಖಾರದೊಳೆನ್ನನು ಕೊಂದೆ.

೯೯

ತೊಟ್ಟಿಲು ಬಿಟ್ಟೆನು ಅಂಬೆಗಾಲಿಟ್ಟೆನು
ನೆಟ್ಟನೆ ನಿಲುವಷ್ಟರಲ್ಲಿ
ಯೌವನವಳಿಯಿತು ನಾನು ಮುಪ್ಪಾದೆನು
ಎವೆಮುಚ್ಚಿ ಎವೆ ಬಿಚ್ಚುವಲ್ಲಿ.

೧೦೦

ಈ ಭೂಮಿ ಈ ಭಾಮೆ ಈ ಭೋಗ ಈ ರಾಗ
ಬಾರವು ಜತೆಯೊಳು ಬಲ್ಲೆ
ಕದತೆಗೆದಾಚೆಗೆ ಅಡಿಯನಿತ್ತಿಟ್ಟಾಗ
ನಿಲ್ಲುವುವೆಲ್ಲವು ಇಲ್ಲೆ.

೧

ಹರಿಕಾರ ಬಂದನು ಬಾಗಿಲು ತೆರೆಬೇಗ
ಹೊರಡುವೆನೀಹೊತ್ತೆ ನಾನು
ಕರೆಬಂದ ಮೇಲಿನ್ನು ತಡಮಾಡಿ ಹೋದಾಗ
ಅರಸನು ಮುನಿಯನೆ ತಾನು.

೨

ಒಮ್ಮೆ ಹೂವರಳಿಹಂದರಳದು ಮತ್ತಿದು
ನಿನ್ನಡಿಗಿಡುವೆನು ದೇವ
ಸಂಜೆಗೆ ಮೊದಲು ನೀನಿದನೆತ್ತಿಕೊಳುವಂದು
ನೆಮ್ಮದಿವಡೆವುದು ಜೀವ.

೩

ಬೀಳ್ಕೊಳ್ಳಿರೆನ್ನನು ಹೋಗುವೆ ನಾನಿಂದು
ನಿಲ್ಲಿರಿ ನೀವೆಲ್ಲ ಹಿಂದೆ
ಎಂತಹ ಜೀವವನೊಯ್ದಿತು ಸಾವೆಂದು
ತಿಳಿಯಲಿ ಲೋಕವು ಮುಂದೆ.

೪

ಸಂಚರಿಸುವುದಕ್ಕೆ ಮಿಗಿಲು ಕುಳ್ಳಿರುವುದು
ಮಲಗುವುದದಕಿಂತ ಮಿಗಿಲು
ಬರಿದೆ ಮಲಗುವುದಕೆ ಮಿಗಿಲು ನಿದ್ರಿಸುವುದು
ಸಾಯುವುದೆಲ್ಲಕೆ ಮಿಗಿಲು.

೫

ಹೇಳುವುದೆಲ್ಲವನಾರು ಹೇಳಿರುವರು
ಹೇಳಿದರಾರು ಕೇಳುವರು
ಕೇಳಿದುದೆಲ್ಲವನರ್ಥೈಸುವವರಾರು
ಇರುವರೆ ಧೀರರಂಥವರು.

೬

ಒಂದುಕ್ಕೈ ಮತ್ತೊಂದುಕ್ಕೈಯನು ತೋಳೆವುದು
ಎರಡೂವೆ ಶುದ್ಧವಾದಪವು
ಓದಿದರೊಬ್ಬನು ಕೇಳುವರೈವರು
ಎಲ್ಲರು ಪಂಡಿತರಹರು.

೭

ಕಾಲವತ್ಯಲ್ಪವು ಕಾರ್ಯವು ವಿಪುಳವು
ಬಹುದೂರವಿದೆ ಮುಂದೆ ಹಾದಿ
ಆದರಿಂದಲದರಿವರುದರೋದು ವ್ಯರ್ಥವು
ಇಂದ್ರಚಾಪವನೊಂದನೋದಿ

೮

ಕನ್ನಡ ತಾಯಿಯ ಜಯವೈಜಯಂತಿಯ
ಏರಿಸು ಹಾರಿಸು ಎಳೆಯ
ಕನ್ನಡ ತಾಯಿಯ ಸಿರಿನುಡಿ ಭೇರಿಯ
ಬಾರಿಸು ಮೊಳಗಿಸು ಗೆಳೆಯ.


೯

ಹರಿಶಂಕರಾಖ್ಯನು ಶಿಷ್ಯಸನ್ಮಿತ್ರನು
ಪ್ರತಿಮಾಡಿದನು ಕೃತಿಯಿದನು
ನೀಡಲಿ ಆತನಿಗತಿಶಯ ಸುಖವನು
ದೇವನು ಹರಿಹರೇಶ್ವರನು

೧೦

ಹಿರಿದೊಸಗೆಯ ತನ್ನಿ ಜಯವನ್ನಿ ಶುಭವನ್ನಿ
ಜಯ ಜಯ ಮಂಗಳವನ್ನಿ
ರಕ್ಷಿಸಿ ನಿಮ್ಮ ಶುಭಾಶಯ ಸಂಜೀವಿ–
ನಿಯನೆರೆದಣುಗನನ್ನೋವಿ.





ಮುಖಪುಟ ಚಿತ್ರ: ಕೃಷ್ಣ ಪೋತದಾರ್

ಮುದ್ರಣ: ಬೃಂದಾವನ ಪ್ರಿಂಟರ್ಸ್ ಅಂಡ್ ಪಬ್ಲಿಶರ್ಸ್ (ಪ್ರೈ.) ಲಿ. ಬೆಂಗಳೂರು – 560 004